2. ವಿಷಯ:- ಕೋಲಾರ, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಪ್ರಸ್ತುತ ತಲೆದೋರಿರುವ ಕುಡಿಯುವ ನೀರಿನ ಅಭಾವದ ಬಗ್ಗೆ.

****

ಅಧ್ಯಕ್ಷರು: ಮಾನ್ಯ ರಮೇಶ್ ಕುಮಾರ್ ಇಲ್ಲ. ಎಂ.ಕೃಷ್ಣಾರೆಡ್ಡಿಯವರೇ ತಾವು ಮಾತನಾಡಿ.

ಶ್ರೀ ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ):- ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ವಿಚಾರದ ಬಗ್ಗೆ ಹೇಳುವುದಾದರೆ, ಈ ಎರಡು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಎಷ್ಟು ಶೋಚನೀಯವಾಗಿದೆ ಎಂದು ಹೇಳುವುದಾದರೆ, ಕರ್ನಾಟಕ ಸರ್ಕಾರಕ್ಕೆ ಅದರ ಮಾಹಿತಿ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಕರ್ನಾಟಕ ಸರ್ಕಾರದ ಹತ್ತಿರ ಆ ಮಾಹಿತಿ ಇದ್ದರೆ ಆ ಎರಡೂ ಜಿಲ್ಲೆಗಳನ್ನು ಕಡೆಗಾಣಿಸಿದ್ದಾರೆಂದು ನಾವು ಭಾವಿಸಬೇಕಾಗುತ್ತದೆ. ಇವತ್ತಿನದಿವಸ ನಮ್ಮ ಜಿಲ್ಲೆಯ ಕೊಡುಗೆ ಏನೆಂಬುದು ಸರ್ಕಾರದ ಗಮನಿಸಬೇಕಾಗುತ್ತದೆ. ಇವತ್ತು ನಮ್ಮ ಜಿಲ್ಲೆಗಳಿಂದ ಹಾಲನ್ನು ಉತ್ಪಾದನೆ ಮಾಡಿ ರಾಜ್ಯಕ್ಕೆ ಕೊಡುತ್ತಿದ್ದೇವೆ ಹಾಗೆಯೇ, ಮಾವು, ರೇಷ್ಮೆ, ತರಕಾರಿ, ರಾಗಿ, ಕಡಲೆಕಾಯಿಯನ್ನು ಹೆಚ್ಚು ಬೆಳೆದು ಕೊಡುತ್ತಿದ್ದೇವೆ.

ಅಧ್ಯಕ್ಷರು:- ಕುಡಿಯುವ ನೀರಿನ ವಿಚಾರ ಹೇಳಿ ಎಂದರೆ, ಕಡಲೆಕಾಯಿ, ಮಾವಿನ ಹಣ್ಣಿನ ವಿಚಾರ ಹೇಳುವುದಲ್ಲ. ಕುಡಿಯುವ ನೀರಿನ ಅಭಾವ ತಲೆದೋರಿರುವ ಬಗ್ಗೆ ಹೇಳಿ. ಮೊದಲು ನಾನು ಹೇಳುವುದನ್ನು ಕೇಳಿ. ಇದು general discussion ಅಲ್ಲ. ನಿಯಮ 69ರ ಅಡಿಯಲ್ಲಿ ಚರ್ಚೆ ಆಗುತ್ತಿದೆ.

ಶ್ರೀ ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ಇಷ್ಟೆಲ್ಲಾ ಕೊಡುಗೆಯನ್ನು ರಾಜ್ಯಕ್ಕೆ ಕೊಡುತ್ತಿದ್ದೇವೆ. ಆದರೆ, ಈ ಜಿಲ್ಲೆಗಳಲ್ಲಿ ಬಡ ಜನರು 15 ದಿನಗಳಿಗೊಮ್ಮೆ ನೀರು ಕೊಟ್ಟರೆ ಅಲ್ಲಿನ ಜನರು 15 ದಿನಗಳಿಗೊಂದು ಸಾರಿ

ಸ್ನಾನ ಮಾಡಿ ಮುಂದಿನ 15 ದಿನಗಳವರೆಗೆ ಬೇಕಾಗಿರುವ ನೀರನ್ನು ಸಂಗ್ರಹ ಮಾಡಿಕೊಂಡು ನೀರನ್ನು ಕುಡಿಯುವ ಪರಿಸ್ಥಿತಿ ನಮ್ಮ ಜಿಲ್ಲೆಗೆ ಇವತ್ತಿನದಿವಸ ಒದಗಿ ಬಂದಿದೆ. ಅಂದರೆ, ಆ ಜಿಲ್ಲೆಗಳಲ್ಲಿರುತಕ್ಕಂಥ ಬಡವರು ಸ್ನಾನ ಮಾಡಬಾರದೇ, ನೀರು ಕುಡಿಯಬಾರದೇ, ಅನ್ನ ತಿನ್ನಬಾರದೇ, ಅವರು ಬದುಕಬಾರದೇ? ಕರ್ನಾಟಕ ಸರ್ಕಾರದ ಹತ್ತಿರ ಈ ಮಾಹಿತಿ ಇದ್ದಿದ್ದರೆ ಏಕೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಸ್ವಾತಂತ್ರ್ಯ ಬಂದು 67 ವರ್ಷಗಳಾಗಿವೆ. ಇವತ್ತಿನವರೆಗೂ ಕೂಡ ಅಲ್ಲಿ ಯಾವುದೇ ಕುಡಿಯುವ ನೀರಿನ ಯೋಜನೆ ಇಲ್ಲ. ನದಿ ಮೂಲಗಳಿಲ್ಲ, infrastructures ಸರಿಯಾಗಿ ಇಲ್ಲ ಮತ್ತೆ Industiries ಇಲ್ಲ. ಕರ್ನಾಟಕ ಸರ್ಕಾರದಲ್ಲಿರುವ ಮಂತ್ರಿಗಳು ಯಾವುದೊಂದು ಜಿಲ್ಲೆಯಿಂದ ಬಂದು ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿದ್ದಾರೆ.

ಅಧ್ಯಕ್ಷರು:– ಈ ವಿಷಯವನ್ನು ತಾವು ಹೇಳುವುದು?

ಶ್ರೀ ಎಂ. ಕೃಷ್ಣಾರೆಡ್ಡಿ:– ಹೌದು.

ಅಧ್ಯಕ್ಷರು:– ಇದೇನು No Confident Motion?

ಶ್ರೀ ಎಂ. ಕೃಷ್ಣಾರೆಡ್ಡಿ:– ಮಾನ್ಯ ಅಧ್ಯಕ್ಷರೇ, ನಾವು ಹೇಳುವುದನ್ನು ತಾವು ಕೇಳುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು:– ಆಯಿತು. ನೀರಿನ ಸಮಸ್ಯೆ ಇದೆ, ಇದಕ್ಕೆ ಏನು ಪರಿಹಾರ ಮಾಡಬೇಕೆಂಬುದರ ಬಗ್ಗೆ ಹೇಳುವುದನ್ನು ಬಿಟ್ಟು ರಾಜಕೀಯ ಭಾಷಣ ಮಾಡಿಕೊಳ್ಳುತ್ತಾ ಕುಳಿತರೆ ಕೆಲಸ ಆಗುತ್ತದೆಯೇ?

ಶ್ರೀ ಎಂ. ಕೃಷ್ಣಾರೆಡ್ಡಿ:– ಮಾನ್ಯ ಅಧ್ಯಕ್ಷರೆ, 15 ದಿನಕ್ಕೊಂದು ಸಾರಿ ನೀರನ್ನು ಕೊಡುತ್ತಿದ್ದಾರೆ. ಒಬ್ಬ ವ್ಯಕ್ತಿಗೆ 100 ಲೀಟರ್ ಮತ್ತು ಜಾನುವಾರುಗಳಿಗೆ 30 ಲೀಟರ್ ನೀರನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಅನೇಕ ಅಧಿವೇಶನಗಳಲ್ಲಿ ಹೇಳಿದ್ದಾರೆ. ಕನಿಷ್ಠ ಒಬ್ಬ ವ್ಯಕ್ತಿಗೆ

50 ಲೀಟರ್ ನೀರನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಅದಕ್ಕೆ ಏನು ಮಾಡಬೇಕೆಂದು ಹೇಳಿ.

ಶ್ರೀ ಎಂ. ಕೃಷ್ಣಾರೆಡ್ಡಿ:– ಮಾನ್ಯ ಅಧ್ಯಕ್ಷರೇ, ಒಬ್ಬ ವ್ಯಕ್ತಿಗೆ 50 ಲೀಟರ್ ನೀರನ್ನು ಪೂರೈಸುವಂತಹ ಕೆಲಸವನ್ನು ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಡಿಸೆಂಬರ್ ತಿಂಗಳಲ್ಲಿಯೇ ನಮಗೆ ಕುಡಿಯುವುದಕ್ಕೆ ನೀರಿಲ್ಲ. ಈ ರೀತಿಯಾದರೆ, ಮುಂದಿನ ಬೇಸಿಗೆಯಲ್ಲಿ ಏನು ಮಾಡುವುದಕ್ಕೆ ಆಗುತ್ತದೆ ಹೇಳಿ?

ಅಧ್ಯಕ್ಷರು:– ಆಯಿತು. ತಾವು ಮಾತನಾಡಿದ್ದು ಸಾಕು ಬಿಡಿ. ಮಾನ್ಯ ರಮೇಶ್ ಕುಮಾರ್‌ರವರೇ, ತಾವು ಮಾತನಾಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಮ್ಮ ಎರಡು ಜಿಲ್ಲೆಯ ಎಲ್ಲಾ ಶಾಸಕರು ಬಂದು notice ಕೊಟ್ಟಿದ್ದೇವೆ. ನನಗೆ ಅನೇಕ ಅವಕಾಶಗಳು ಮಾತನಾಡಲಿಕ್ಕೆ ಸಿಗುತ್ತದೆ. ಹೊಸ ಶಾಸಕರು ಇರುವುದರಿಂದ ಅವರಿಗೆ ಎರಡೆರಡು ನಿಮಿಷ ಅವಕಾಶ ಮಾಡಿ ಕೊಡಬೇಕು.

ಶ್ರೀ ಕೆ.ಎಸ್. ಮಂಜುನಾಥಗೌಡ (ಮಾಲೂರು): ಮಾನ್ಯ ಅಧ್ಯಕ್ಷರೆ, ಎಲ್ಲಾ ಗ್ರಾಮಗಳಿಗೂ ನೀರು ಕೊಡುತ್ತೇವೆಂದು ಸರ್ಕಾರ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ನಮ್ಮ ಕೋಲಾರಕ್ಕೆ ಎಲ್ಲಿ ನೀರು ಕೊಟ್ಟಿದ್ದಾರೆ. ನಮ್ಮ ಸಮಸ್ಯೆಗಳು ಏನು? ಮಾನ್ಯ ಶಿವಲಿಂಗೇಗೌಡರು ಅಳುತ್ತಾ ಹೇಳುತ್ತಿದ್ದಾರೆ. ನಮಗೆ ವಯಸ್ಸು ಚಿಕ್ಕದು ಇದೆ ಅದಕ್ಕೆ ನಾವು ಅಳುತ್ತಿಲ್ಲ. ಉತ್ತರ ಕರ್ನಾಟಕದ ಬಗೆಗ ಇಲ್ಲಿ ದಿನಾಲೂ ಗಲಾಟೆ ಮಾಡುತ್ತಿದ್ದಾರೆ.

ಅಧ್ಯಕ್ಷರು: ನೀವು ಯುವಕರು ಇದ್ದೀರಿ, ನಿಯಮ 69ರ ಮೇಲೆ ಚರ್ಚೆ ಮಾಡುವಾಗ ವಿಷಯವನ್ನು ಹೇಗೆ ಸಮರ್ಥನೆ ಮಾಡಬೇಕು, ಸಂಕ್ಷಿಪ್ತವಾಗಿ ಹೇಳಬೇಕು.

ಶ್ರೀ ಕೆ.ಎಸ್. ಮಂಜುನಾಥಗೌಡ:- ನಾವು ಮಾತನಾಡುವುದಕ್ಕೆ ಮುಂಚೆ ನೀವು ಸಂಕ್ಷಿಪ್ತವಾಗಿ ಮಾತನಾಡಿ ಎಂದು ಹೇಳುತ್ತಿದ್ದೀರಿ.

ಅಧ್ಯಕ್ಷರು: ದೊಡ್ಡದಾದ ಚರ್ಚೆ ಅಲ್ಲ, ಹೇಳುವುದನ್ನು ತಿಳಿದುಕೊಳ್ಳಬೇಕು.

ಶ್ರೀ ಕೆ.ಎಸ್. ಮಂಜುನಾಥಗೌಡ: ಸಂಕ್ಷಿಪ್ತವಾಗಿ ಹೇಳಬೇಕೆಂದರೆ ದಯವಿಟ್ಟು ನೀರು ಕೊಡಿ ಎಂದು ಹೇಳಬೇಕು ಅಷ್ಟೆ.

ಅಧ್ಯಕ್ಷರು: ಅದಕ್ಕೆ ಏನು ಮಾಡಬೇಕು, ನೀರಿನ ಮೂಲ ಏನು ಇದೆ, ಬೇಗ ಹೇಗೆ ಮಾಡಬೇಕು ಈ ತರಹ ಹೇಳಬೇಕು.

ಶ್ರೀ ಕೆ.ಎಸ್. ಮಂಜುನಾಥಗೌಡ: ನಮ್ಮ ಸಮಸ್ಯೆಗಳನ್ನು ಮೊದಲು ನಿಮಗೆ ಹೇಳುತ್ತೇವೆ. ಆ ಮೇಲೆ ನೀರು ಹೇಗೆ ಕೊಡಬಹುದೆಂದು ನಾವು ಹೇಳಬಹುದು. ನಾವು ಕುಡಿಯುತ್ತಿರುವ ನೀರು 20 ವರ್ಷದಿಂದ slow poison, fluoride, saline, nitrate ತುಂಬಿ ನಮಗೆ ಸರ್ಕಾರ ವಿಷದ ನೀರು ಕೊಡುತ್ತಿದ್ದಾರೆ. 20 ವರ್ಷಗಳಿಂದ ಅದನ್ನೇ ಕುಡಿಯುತ್ತಿದ್ದೇವೆ. Scientists, Doctors ಗಳ ಪ್ರಕಾರ 77% ಕಾಯಿಲೆಗಳು ಕುಡಿಯುವ ನೀರು ಮತ್ತು ಆಹಾರದಿಂದ ಬರುವಂಥದ್ದು. ನಾವು ಬರೀ ವಿಷ ಕುಡಿದು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಜನರು 20 ವರ್ಷಗಳಿಂದ ಬದುಕುತ್ತಿರುವುದು.

ಅಧ್ಯಕ್ಷರು: 20 ವರ್ಷಕ್ಕಿಂತ ಮುಂಚೆ ನೀರು ಚೆನ್ನಾಗಿ ಇತ್ತಾ?

ಶ್ರೀ ಕೆ.ಎಸ್. ಮಂಜುನಾಥಗೌಡ: ಅದಕ್ಕಿಂತ ಮುಂಚೆ ನೀರು ಚೆನ್ನಾಗಿತ್ತು. ಮಳೆ ಮತ್ತು ಬಾವಿಯ ಒಳ್ಳೆಯ ನೀರು ಸಿಗುತ್ತಿತ್ತು. 20 ವರ್ಷಗಳಿಂದ ನಮಗೆ ಹೀಗೆ ಆಗುತ್ತಿರುವಂಥದ್ದು. ನಮಗೆ 1400 ಅಡಿಯವರೆಗೆ ಬೋರ್‌ವೆಲ್ ಹಾಕಬೇಕು. ನಮ್ಮ ಕಾಯಿಲೆಗಳಿಗೆ 20 ವರ್ಷಗಳಿಂದ ಖರ್ಚು ಮಾಡುತ್ತಿರುವ ಹಣದಿಂದ ಎರಡು ಜಿಲ್ಲೆಗೆ ನೀರು ಕೊಡಬಹುದಾಗಿತ್ತು. ನಮ್ಮಲ್ಲಿ Nursing Homes ಅತೀ ಹೆಚ್ಚು ಬೆಳೆದು ನಿಂತಿದೆ. ಎಷ್ಟು ಖರ್ಚಾಗುತ್ತದೆಂದು ನೀವು ಮಾಹಿತಿಯನ್ನು ತೆಗೆದುಕೊಂಡರೆ

ನಾವೆಲ್ಲಾ ತಲೆ ತಗ್ಗಿಸಬೇಕಾಗುತ್ತದೆ. ನಮ್ಮಲ್ಲಿ Agriculture ನಿಲ್ಲುವ ಮಟ್ಟಕ್ಕೆ ಬಂದಿದೆ. ಹೈನುಗಾರಿಕೆ ಕೋಲಾರದಲ್ಲಿ ಒಂದು ದಿವಸಕ್ಕೆ 10 ಲಕ್ಷ ಲೀಟರ್ ಹಾಲನ್ನು ನಾವು ಉತ್ಪಾದನೆ ಮಾಡುತ್ತಿದ್ದೇವೆ. ಈಗ latest ಏನು ವರದಿಯನ್ನು ಕೊಡುತ್ತಾರೆ, ಅದನ್ನು ಸೇವಿಸುವ ಹಾಲಿನಲ್ಲಿಯೂ ಕೂಡ fluoride content ಇದೆ ಎಂದು, ಅದು ಕೂಡ ವಿಷ ಎಂದು ನಮ್ಮ ವಿಜ್ಞಾನಿಗಳು ಈಗಾಗಲೇ ದೃಢಪಡಿಸಿದ್ದಾರೆ. ನಮ್ಮ ಹೈನುಗಾರಿಕೆ ನಿಲ್ಲುವಂಥ ಪರಿಸ್ಥಿತಿ ಬಂದಿದೆ. ಹಸು ತೊಳೆಯುವುದಕ್ಕೆ ನೀರು ಕುಡಿಯುವುದಕ್ಕೆ 50–60 ಲೀಟರ್ ನೀರು ಬೇಕಾಗುತ್ತದೆ. ಆ ನೀರು ನಮಗೆ ಸಾಲದೆ ಹಸುಗಳನ್ನು ಮಾರಿಕೊಂಡು ಹೋಗುವ ಪರಿಸ್ಥಿತಿಗೆ ನಾವು ಕೋಲಾರದಲ್ಲಿ ಮುಟ್ಟಿದ್ದೇವೆ. ಈಗಾಗಲೇ State and Central Government most exploited zone ಎಂದು ಚಿಕ್ಕಬಳ್ಳಾಪುರ ಹಾಗೂ ಕೋಲಾರನ್ನು decalre ಮಾಡಿದ್ದಾರೆ. ಇನ್ನು ನೀವು ಬೋರ್‌ವೆಲ್ ಕೊರೆಯುವಂತಿಲ್ಲ. ನೀವು ಸಾಕಷ್ಟು exploit ಮಾಡಿದ್ದೀರಿ ಎಂದು. ನಮಗೆ ಕುಡಿಯುವುದಕ್ಕೆ ನೀರು ಎಲ್ಲಿದೆ? ಸರ್ಕಾರ ಈಗಾಗಲೇ ಎತ್ತಿನಹೊಳೆ ಸ್ಕೀಂ ಅನ್ನು ಘೋಷಣೆ ಮಾಡಿದೆ. ಅದನ್ನು ಕೊಡುವುದಕ್ಕೆ ಇನ್ನು 4 ವರ್ಷವಾಗುತ್ತದೆ. ಅಲ್ಲಿಯವರೆಗೆ ನಮಗೆ ನೀರು ಎಲ್ಲಿದೆ? ನಿಮ್ಮಲ್ಲಿ ನಾನೊಂದು ಮನವಿಯನ್ನು ಮಾಡುತ್ತೇನೆ. ಸುಮಾರು 3800 ಕೆರೆಗಳು ಇದೆ, Minor Irrigation Scheme ಇದುವರೆಗೆ ನಮ್ಮ ಎರಡು ಜಿಲ್ಲೆಗೆ ಕಾರ್ಯರೂಪಕ್ಕೆ ಬರಲಿಲ್ಲ. ನಮಗೆ Minor Irrigation ಎಂದರೆ concrete road ಗಳನ್ನು ಕೊಡುತ್ತಾರೆ.

ಅಧ್ಯಕ್ಷರು: ಈ ಸಮಸ್ಯೆಯನ್ನು ಬಗೆಹರಿಯುವುದಕ್ಕೆ ನಿಮ್ಮ ಸಲಹೆ ಏನು?

ಶ್ರೀ ಕೆ.ಎಸ್. ಮಂಜುನಾಥಗೌಡ: ನಾನು ಹೇಳುತ್ತೇನೆ. ಮಾನ್ಯ Rural Development Minister ಇದ್ದರೆ ಗೊತ್ತಾಗುತ್ತಿತ್ತು. R.O. plants ಗಳನ್ನು ನಮಗೆ ವರ್ಷಕ್ಕೆ 10 ಗ್ರಾಮಗಳಿಗೆ ಕೊಡುತ್ತಾರೆ. 100% ನಮ್ಮ ಎಲ್ಲಾ ಗ್ರಾಮಗಳಿಗೆ R.O. plants 10 ದಿವಸದಲ್ಲಿ ಕೊಟ್ಟರೂ ಸಾಲುವುದಿಲ್ಲ. 10

ವರ್ಷಕ್ಕೆ ಕೊಟ್ಟರೆ ನಮ್ಮ ತಾಲ್ಲೂಕಿನಲ್ಲಿರುವ 363 ತಾಲ್ಲೂಕುಗಳು, ಎಷ್ಟು ದಿವಸಕ್ಕೆ ಈ R O. plants ಗಳು ಮುಗಿಯುವುದು? ನಮಗೆ ವಿಷ ಕುಡಿಯುವುದಕ್ಕೆ ಬಿಟ್ಟು, ಗದಗ ಕಡೆಗೆ ಜಾಸ್ತಿ, ಬೇರೆ ಬೇರೆ ಕಡೆಗೆ ಜಾಸ್ತಿ R.O. plants ಗಳನ್ನು ಹಾಕಿಕೊಳ್ಳುತ್ತಾರೆ. ನಿಮ್ಮಲ್ಲಿ ಮನವಿ ಮಾಡುತ್ತೇನೆ. ಹೇಗೆ ನೀರು ಕೊಡಬಹುದೆಂದು ಹೇಳುತ್ತೇನೆ. ಈಗಾಗಲೇ ಎತ್ತಿನಹೊಳೆ ಪ್ರಾಜೆಕ್ಟ್ ಅನ್ನು ಸರ್ಕಾರ ಘೋಷಣೆ ಮಾಡಿದೆ, ಈಗ ಅದು ಬರುವುದಕ್ಕೆ ನಾಲ್ಕು ವರ್ಷವಾಗುತ್ತದೆ. ನಮಗೆ ಹತ್ತಿರವಾಗಿ ಸಿಗುವಂಥದ್ದು, ಬೆಂಗಳೂರಿನ ಗಲೀಜು ನೀರು. ಅದನ್ನು treatment ಮಾಡಿ ಸಧ್ಯಕ್ಕೆ ಆ ನೀರು ನಮ್ಮ ಕೆರೆಯೊಳಗೆ ಬಿಟ್ಟರೆ ನಾವು ಬದುಕುವಂತಾಗುತ್ತದೆ. ಇವತ್ತು ಈಗ ಶುರು ಮಾಡಿದರೆ ಅದು 6–7 ತಿಂಗಳಲ್ಲಿ ಮುಗಿದು ಹೋಗುತ್ತದೆ. ಸರ್ಕಾರ ದೊಡ್ಡ ಮನಸ್ಸು ಮಾಡಿ ಮಾಡಬೇಕಾಗುತ್ತದೆ. ಅನಂತಪುರ ಜಿಲ್ಲೆಯಲ್ಲಿ ಸಾಯಿಬಾಬರವರು ಇದ್ದರು. ಅವರು ಇಡೀ ಜಿಲ್ಲೆಗೆ ನೀರು ಕೊಟ್ಟರು. ಆ ಇಚ್ಛಾಶಕ್ತಿ ಇರಬೇಕು. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಬಿಟ್ಟುಹೋದ ಕರ್ನಾಟಕ ಎಂದು ಬಿಟ್ಟು ಬಿಟ್ಟಿದ್ದಾರೆ. North Karnataka and South Karnataka ಎಂದು ಅನ್ನುತ್ತಾರೆ. ನಾವು ಏನು ಜಿಲ್ಲೆಯನ್ನು ಬಿಟ್ಟು ಹೋದ ಕರ್ನಾಟಕ ಎಂದು ನೇಮಿಸಿಕೊಳ್ಳಬೇಕು. ನಾವು ಯಾರ ಹತ್ತಿರ ಸಮಸ್ಯೆಯನ್ನು ಹೇಳಿಕೊಳ್ಳುವುದು? ನಮ್ಮ ಜಿಲ್ಲೆಗೆ Minister ಕೂಡ ಇಲ್ಲ, ನಾವು ಹೇಳಿಕೊಳ್ಳೋಣ ಎಂದರೆ, Minister ಹತ್ತಿರ ಹೋದರೆ ನೀವು ಯಾವ ಪಕ್ಷ ಎಂದು ನಮ್ಮನ್ನು ಕೇಳುತ್ತಾರೆ. ಇಲ್ಲಿ ಯಾರೂ ಇಲ್ಲ. ನಮ್ಮ ಜಿಲ್ಲೆಗೆ ಯಾರೂ Minister ಇಲ್ಲ.

ಅಧ್ಯಕ್ಷರು: ಭೈರೇಗೌಡರು ನಿಮ್ಮ ಜಿಲ್ಲೆಯವರು ಅಲ್ಲವಾ?

ಶ್ರೀ ಕೆ.ಎಸ್. ಮಂಜುನಾಥಗೌಡ: ನಮ್ಮ ಜಿಲ್ಲೆಗೆ ಭೈರೇಗೌಡರು ಸಚಿವರು ಅಲ್ಲ, ಹಾಗೇ ಬಿಟ್ಟಿದ್ದಾರೆ. ಅಲ್ಲಿ ಯಾರು Minister ಇಲ್ಲ. ಚೆಕ್ ಪೋಸ್ಟ್ ಅಡ್ಡ ಇರುವುದರಿಂದ ಅವರು ಅಲ್ಲಿಗೆ ಬರುವುದಿಲ್ಲ.

ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ಹೇಳುತ್ತಿರುವ ಸಮಸ್ಯೆ ನಿಜ ಇದೆ. ಅವರು ಸಂಪೂರ್ಣ ನೋವಿನಿಂದ ಮಾತನಾಡುತ್ತಿದ್ದಾರೆ. ಸರ್ಕಾರ ಕೂಡ ಅರ್ಥ ಮಾಡಿಕೊಂಡಿದೆ. ಮಾನ್ಯ ಮುಖ್ಯಮಂತ್ರಿಗಳು ಸಹ ಈ ಸಲಹೆಯನ್ನು ತೆಗೆದುಕೊಂಡು ಈಗ DPR ಮಾಡಲಿಕ್ಕೆ Minor Irrigation ಇಲಾಖೆಯಿಂದ ಈಗಾಗಲೇ ಟೆಂಡರ್ ಕೂಡ ಕರೆದಿದ್ದೇವೆ. ಇನ್ನು ಎರಡು ದಿವಸದಲ್ಲಿ tender open ಆಗಿ DPR stage ನಲ್ಲಿದೆ. ಅವರು ಹೇಳುವ ಸಮಸ್ಯೆಯಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ನಾವು ಜಿಲ್ಲೆಯಿಂದ ಹೊರಗಡೆ ಬಂದಿದ್ದರೂ ನಾವು ಅವರ ಜೊತೆಗೆ ಇದ್ದೇವೆ.

ಅಧ್ಯಕ್ಷರು: ಅವರ ತಂದೆಯವರು ಇದ್ದಾಗ ಈ ಮೇಕೆದಾಟಿನಿಂದ ನೀರು ತರುವುದಕ್ಕೆ ಸರ್ವೆ ವಗೈರೆ ಎಲ್ಲಾ ಮಾಡಿಸಿದ್ದರು. ಅದನ್ನು ನೀವು ಹೇಳುವುದು ಬಿಟ್ಟು ಅದು ಕೊಡಿ ಇದು ಕೊಡಿ ಎಂದು ಹೇಳುತ್ತಿದ್ದೀರಿ.

ಶ್ರೀ ಕೆ.ಎಸ್. ಮಂಜುನಾಥಗೌಡ: ನಾನು conclude ಮಾಡುವಾಗ ಹೇಳುತ್ತೇನೆ. ಎತ್ತಿನಹೊಳೆ ಪ್ರಾಜೆಕ್ಟ್ ನೀವು ತಂದಿದ್ದೀರಿ ಧನ್ಯವಾದಗಳು, ಅದು 4 ವರ್ಷವಾಗುತ್ತದೆ. ನಮಗೆ ಹತ್ತಿರ ಇರುವುದು ಬೆಂಗಳೂರಿನ ಗಲೀಜು ನೀರು. ನಾನು ಮೇಕೆದಾಟು ವಿಷಯಕ್ಕೆ ಬರುತ್ತೇನೆ. ತಮುಳುನಾಡಿನ ಪಕ್ಕದ ಗ್ರಾಮಗ್ರಾಮಗಳಿಗೂ ನೀರು ಕೊಟ್ಟಿದ್ದಾರೆ. ಮಾಲೂರು ತಾಲ್ಲೂಕನ್ನು ನಾವು ತಮಿಳುನಾಡಿನಾಡಿನ ಬಾರ್ಡರ್ ಅನ್ನು share ಮಾಡುತ್ತೇವೆ. ಆ ಸರ್ಕಾರ ನೀರು ಕೊಟ್ಟಿದೆ. ರಾತ್ರಿ ಹೊತ್ತು ನಮ್ಮ ಗ್ರಾಮದವರು ನೀರು ಕದ್ದು ತೆಗೆದುಕೊಂಡು ಬರುತ್ತಾರೆ.

ಅಧ್ಯಕ್ಷರು: ಇಲ್ಲಿ ಮಾಡಬೇಕು ಎನ್ನುವುದನ್ನು ಹೇಳಿ.

ಶ್ರೀ ಕೆ.ಎಸ್. ಮಂಜುನಾಥಗೌಡ:- ನಾವು ಇನ್ನೇನು ಹೇಳುವುದಕ್ಕಾಗುತ್ತದೆ? ನೀವು ಮಾಡಿ ಎಂದು ನಾವು ಕೇಳುತ್ತಿರುವುದು.

ಅಧ್ಯಕ್ಷರು: ನೀವು ಹೇಳುತ್ತಿರುವಂತಹ ವಿಧಾನ ಸರಿ ಇಲ್ಲ.

ಶ್ರೀ ಕೆ.ಎಸ್. ಮಂಜುನಾಥಗೌಡ: ನಾವು ಹೊಸಬರು ಇದ್ದೇವೆ, ನಾವು ವಿನಂತಿ ಮಾಡುತ್ತೇವೆ. ನಾವು ನೀರು ಕೊಡಿ ಎಂದು ಅಧಿವೇಶನಕ್ಕೆ ಬಂದಾಗೊಂದು ಸಲ ಕೇಳುತ್ತಿದ್ದೇವೆ. ಇನ್ನು ವಿಧಾನಗಳನ್ನು ನಾವು ಹೇಗೆ change ಮಾಡಿ ಕೇಳುವುದು?

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ರಮೇಶ್ ಕುಮಾರ್ ಅವರಿಗೆ ಹೇಳುವುದಕ್ಕೆ ಅವಕಾಶ ಕೊಟ್ಟರೆ ಉತ್ತಮವಾದಂಥ ಸಲಹೆಗಳನ್ನು ಕೊಡುತ್ತಾರೆ. ಈಗ ಅವರು ಎಲ್ಲರಿಗೂ ಸಲಹೆ ಕೊಟ್ಟು ಬಂದಿದ್ದಾರೆ. ನೀವು ದಯಮಾಡಿ ಹೇಳಬೇಕು ಸರ್. ನೀವು ಹೇಳಿದರೆ ಎಲ್ಲಾ ಆಗುತ್ತದೆ.

ಅಧ್ಯಕ್ಷರು: ಅವರು ಹೇಳುತ್ತಾರೆ, ನೀವೂ ಕೂಡ present ಮಾಡಬೇಕಾದರೆ ಕೇಳುವವರ ಮನಸ್ಸಿಗೆ ನುಗ್ಗುವಂತೆ ಹೇಳಬೇಕು.

ಶ್ರೀ ಕೆ.ಎಸ್. ಮಂಜುನಾಥಗೌಡ: ನಾವು ಇನ್ನು ಶಿವಲಿಂಗೇಗೌಡರು ಹೇಳಿದಂತೆ ಅತ್ತುಕೊಂಡು ಹೇಳಬೇಕಾಗುತ್ತದೆ.

(ಗೊಂದಲ)

ಡಾ|| ಕೆ. ಸುಧಾಕರ್ (ಚಿಕ್ಕಬಳ್ಳಾಪುರ): ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆ ಕೆರೆಗಳ ತವರು ಎಂದು ಒಂದು ಕಾಲದಲ್ಲಿ ಕರೆಯುತ್ತಿದ್ದರು. ಇದನ್ನು ರಾಜರು, ಪಾಳೇಗಾರರು ಕೆರೆಗಳನ್ನು ಕಟ್ಟಿಸಿದಂಥದ್ದು. ಯಾವ ಜೀವನದಿಯೂ ಈ ಭಾಗದಲ್ಲಿ ಇಲ್ಲ. ಇದ್ದಂಥದ್ದೆಲ್ಲಾ ಪಾಲಾರ್, ಪೆನ್ನಾರ್, ಚಿತ್ರಾವತಿ ಮತ್ತು ಅರ್ಕಾವತಿ. ಈ ಎಲ್ಲಾ ನದಿಗಳು ಮಳೆಗಾಲದಲ್ಲಿ ಬರುತ್ತಿತ್ತು. ಕಳೆದ 15 ವರ್ಷಗಳಿಂದ ಮಳೆ ಕಡಿಮೆ ಆಗಿದೆ. ಹಾಗಾಗಿ ಇವತ್ತು ಯಾವ ಕೆರೆಗಳಲ್ಲಿಯೂ ಕೂಡ ನೀರಿಲ್ಲ. ಇವತ್ತು ಭೂಮಿ ಮಟ್ಟದಿಂದ ಸುಮಾರು 1500–1800 ಅಡಿಗಳವರೆಗೆ ಕೆಳಗಡೆ ನೀರು ಹೋಗಿದೆ. ಕುಡಿಯುವ ನೀರಿಗೆ ಇವತ್ತು ಅತೀವ ಅಭಾವ ತಲೆದೋರಿದೆ. ಇದು ಗಂಭೀರವಾದಂಥ ವಿಚಾರ. ಇದಕ್ಕೆ ದಯವಿಟ್ಟು ನೀವು ಸ್ವಲ್ಪ ಸಮಯವನ್ನು ಕೊಟ್ಟರೆ ಇವತ್ತು ಅಂಕಿ ಅಂಶಗಳನ್ನು ಸರ್ಕಾರದ ಗಮನಕ್ಕೆ

ತರದಿದ್ದರೆ ನಿಜವಾಗಲೂ ಒಂದು ಕೋಟಿ ಜನರ ಸಮಸ್ಯೆ ಇದು. ಇದು ಸಾಮಾನ್ಯ ವಿಷಯವಲ್ಲ. ಇವತ್ತು ಒಂದು ಕೋಟಿ ಜನರ ಸಮಸ್ಯೆ ಆಗಿದೆ. ಇವತ್ತು ಇಡೀ ಈ ಭಾಗಗಳು ಮರಳು ಭೂಮಿ ಆಗುವಂಥ ಸಂದರ್ಭ ಕೂಡ ಇನ್ನು ಕೆಲವೇ ಕೆಲವು ವರ್ಷಗಳಲ್ಲಿ ಬರುವಂಥ ಪ್ರಮಾದ ಕೂಡ ಇದೆ ಎನ್ನತಕ್ಕಂಥದ್ದನ್ನು ನಿಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇವತ್ತು ಎತ್ತಿನಹೊಳೆ ಯೋಜನೆ ಬಗ್ಗೆ ಏನು ಮಾತನಾಡುತ್ತಿದ್ದೀರಿ. ಇವತ್ತು STP ಯಿಂದ ನಾವು ಎಲ್ಲಿಗೆ ಬಂದಿದ್ದೇವೆಂದರೆ, ಬೆಂಗಳೂರಿನ ನಿವಾಸಿಗಳು ಉಪೊಯೋಗ ಮಾಡಿರತಕ್ಕಂಥ ಕೊಳಚೆ ನೀರನ್ನು ಇವತ್ತು ನಾವು STP ಮುಖಾಂತರ ಅದನ್ನು ಕೊನೆಗೆ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಕೆರೆಗಳಿಗೆ ತೆಗೆದುಕೊಂಡು ಹೋಗುವಂಥ ಯೋಜನೆಗೆ ನಾವು ತಯಾರಾಗಿದ್ದೇವೆ. ಯಾರು ನಾಗರೀಕರು ಅದನ್ನು ಉಪಯೋಗ ಮಾಡಿ ಆ ಕೊಳಚೆ ನೀರನ್ನು ಇವತ್ತು ತೆಗೆದುಕೊಂಡು ಹೋಗಲಿಕ್ಕೆ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜನ ಇವತ್ತು ಮಾನಸಿಕವಾಗಿ ತಯಾರಾಗಿದ್ದೇವೆಂದರೆ, ನಾವು ಇವತ್ತು ನಿಜವಾಗಲೂ ಈ ನೀರಿಗೆ ಭಿಕ್ಷುಕರಾಗಿದ್ದೇವೆಂದು ಬಹಳ ನೋವಿನಿಂದ ಹೇಳಬೇಕಾಗುತ್ತದೆ. ಇವತ್ತು ನನ್ನ ಒಂದು ಕ್ಷೇತ್ರದಲ್ಲಿ 114 ಹಳ್ಳಿಗಳಿಗೆ ಕುಡಿಯುವ ನೀರು ಇಲ್ಲ. ನಿನ್ನೆ ತಾನೇ ಕೇಶವಾರ ಎನ್ನುವ ಗ್ರಾಮದಲ್ಲಿ ಮೂರನೇ ಬೋರ್‌ವೆಲ್ ಅನ್ನು ಹಾಕಿಸಿದ್ದೇವೆ. ಅದರಲ್ಲಿ 1,800 ಅಡಿಯಲ್ಲಿ ನೀರು ಸಿಕ್ಕಿದೆ. ಅಷ್ಟು ಅಡಿಯಲ್ಲಿ ಸಿಗುವಂತಹ ನೀರು ಯಾವ ರೀತಿ ಕಲುಷಿತವಾಗಿರುತ್ತದೆ, ಯಾವ ಫ್ಲೋರೈಡ್ಸ್ ಇರುತ್ತವೆ ಎಂದರೆ ಇವತ್ತು 16 ವರ್ಷದ ಯುವಕರು 60 ವರ್ಷದ ವೃದ್ಧಮಾನರಾಗಿ ಕಾಣಿಸುತ್ತಿದ್ದಾರೆ. ಇದು ಬಹಳ ಗಂಭೀರವಾದಂತಹ ವಿಚಾರ. ಯಾವ ಈ ರಾಜ್ಯಕ್ಕೆ ಕೆ.ಸಿ.ರೆಡ್ಡಿಯವರು ಮೊದಲನೇ ಮುಖ್ಯಮಂತ್ರಿಗಳಾದರು ಅಂತಹ ಒಂದು ಭಾಗ. ಕೋಲಾರವನ್ನು ಚಿನ್ನದ ನಾಡು ಎಂದು ಹೇಳುತ್ತಿದ್ದೆವು. ಇವತ್ತು ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದರೆ, ಸತತವಾಗಿ 65–67 ವರ್ಷಗಳ ನಂತರವೂ ಯಾವುದೇ ಒಂದು ಯೋಜನೆಯನ್ನು ಯಾವುದೇ ಒಂದು ಸರ್ಕಾರ ಮಾಡಿಲ್ಲ. ಪಕ್ಷಾತೀತವಾಗಿ ಹೇಳಬೇಕಾಗುತ್ತದೆ. ಯಾರೂ ಕೂಡ

ಗಂಭೀರವಾಗಿ ಈ ಭಾಗಗಳ ಬಗ್ಗೆ ಗಮನಹರಿಸಿಲ್ಲ. ಹಳೇ ಮೈಸೂರಿನ ಮುಖ್ಯಮಂತ್ರಿಗಳೂ ಆಗಿದ್ದರು. ಉತ್ತರ ಕರ್ನಾಟಕದ ಮುಖ್ಯಮಂತ್ರಿಗಳೂ ಆಗಿದ್ದರು. ಅದಕ್ಕೆ ಕಾರಣ ನಿಜವಾಗಿಯೂ ಹೇಳಬೇಕಾಗುತ್ತದೆ. ನಮ್ಮ ಭಾಗದ ಯಾವ ಒಬ್ಬರು ರಾಜಕಾರಣಿ ಕೂಡ ನೀರಾವರಿ ಸಚಿವರಾಗದೇ ಇರುವುದೇ ಇದಕ್ಕೆಲ್ಲಾ ಕಾರಣ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಯಾರಾದರೂ ಒಬ್ಬರು ನೀರಾವರಿ ಸಚಿವರು ನಮ್ಮ ಭಾಗದವರೇ ಆಗಿದಿದ್ದರೆ ನಿಜವಾಗಿಯೂ ಅದರ ಪ್ರಮಾದ ಮತ್ತು ಇದರ ಗಾಂಭೀರ್ಯತೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿತ್ತು. ಇವತ್ತು ಸಾವಿರಾರು ಕೆರೆಗಳು ಇವೆ. ಒಂದೇ ಒಂದು ಕೆರೆಗೆ ನೀರು ಹೋಗಲಿಕ್ಕೆ ಸಾಧ್ಯವಾಗುತ್ತಿಲ್ಲ. ಇವತ್ತು multi-village drinking water system ಎಂದು ಹೇಳುತ್ತೇವೆ. ಯಾವ ನದಿಯಿಂದ ನೀರನ್ನು ತೆಗೆದುಕೊಂಡು ಬರುವುದು? ಎತ್ತಿನಹೊಳೆ ನೀರಿನ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತೇವೆ ಎಂದು ನಾವು ಈಗಾಗಲೇ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆ. ಸರ್ಕಾರ ಕೂಡ 13,000 ಕೋಟಿ ರೂ.ಗಳ ಯೋಜನೆ ಎಂದು ಹೇಳುತ್ತಿದೆ. ಆ ಕಾಮಗಾರಿಗಳ ಸ್ಥಿತಿ–ಗತಿ ಏನು? ಪ್ರತಿ ತಿಂಗಳು ಒಂದು ರೆವ್ಯೂ ಸಭೆಯನ್ನೂ ಸರಿಯಾಗಿ ಕರೆಯುತ್ತಿಲ್ಲ. ಈ ರೀತಿ ಆದರೆ ನಾವು ಯಾವ ರೀತಿ ಜನರಿಗೆ ನಮ್ಮ ಮುಖವನ್ನು ತೋರಿಸುವುದು? ನಾವೆಲ್ಲಾ ಯುವಕರಿದ್ದೇವೆ. ನಾವು ಬಹಳಷ್ಟು ಆಶ್ವಾಸನೆಯನ್ನು ಕೊಟ್ಟು ಬಂದಿದ್ದೇವೆ. ಈ ವ್ಯವಸ್ಥೆಯಲ್ಲಿ ನಂಬಿಕೆ ಹೋಗಿದೆ. ಯಾವ ಈ ಪ್ರಜಾತಂತ್ರವ್ಯವಸ್ಥೆಯಲ್ಲಿ ನಂಬಿಕೆಯನ್ನಿಟ್ಟುಕೊಂಡು ಸತತವಾಗಿ ಎಲ್ಲಾ ಶಾಸಕರು, ಎಲ್ಲಾ ಪಕ್ಷಗಳಿಂದ, ಎಲ್ಲಾ ಜಿಲ್ಲೆಗಳಿಂದ ಬಂದಿದ್ದೇವೆ ನಮ್ಮ ಜಿಲ್ಲೆಗಳಿಗೆ ಕುಡಿಯುವ ನೀರನ್ನೂ ಕೊಡುವುದಿಲ್ಲವೆಂದರೆ ಇವತ್ತು ನಮ್ಮ ಜನ ಯಾವ ಉತ್ತರ ಕರ್ನಾಟಕದ ಹಿಂದುಳಿದ ಭಾಗಗಳಿಗಿಂತ ಅನ್ಯಾಯವಾಗಿರುವ ಶೋಚನೀಯ ಸಂದರ್ಭವನ್ನು ನಮ್ಮ ಜನ ಎದುರಿಸುತ್ತಿದ್ದಾರೆ. ಇಂತಹ ಒಂದು ಗಂಭೀರ ಸ್ಥಿತಿಯಲ್ಲಿಯೂ ಹೇಳಬೇಕೆಂದರೆ ಬಹಳ ಆತ್ಮಗೌರವದಿಂದ ನಮ್ಮ ರೈತರು ಅಲ್ಲಿ ಬಾಳುತ್ತಿದ್ದಾರೆ.

ಅಧ್ಯಕ್ಷರು: ಈಗ ಅದಕ್ಕೆ ಏನು ಮಾಡಬೇಕೆಂದು ಪರಿಹಾರ ಹೇಳಿ.

ಡಾ|| ಕೆ. ಸುಧಾಕರ್: ಮಾನ್ಯ ಅಧ್ಯಕ್ಷರೆ, ದಯವಿಟ್ಟು ನನಗೆ ಮಾತನಾಡಲು ಸಮಯ ಕೊಡಬೇಕು. ಇಂತಹ ಸಂದರ್ಭದಲ್ಲಿಯೂ ಕೂಡ ನಾವು ಹನಿ ನೀರಾವರಿಯನ್ನು ಅಳವಡಿಸಿಕೊಂಡು ಹೈನುಗಾರಿಕೆಯಲ್ಲಿ, ರೇಷ್ಮೆ, ಹಾಲು ಉತ್ಪಾದನೆಯಲ್ಲಿ ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ ಎಂದು ಹೇಳಬೇಕಾಗುತ್ತದೆ. ಅಂತಹ ಪ್ರಗತಿಪರ ರೈತ ಚಿಂತನೆ ಇರುವಂತಹ ಈ ಭಾಗಗಳಿಗೆ ಕುಡಿಯುವ ನೀರಿನ ಯೋಜನೆಗಳನ್ನು ಕೊಡುವುದರಲ್ಲಿ ಬಂದಂತಹ ಎಲ್ಲಾ ಸರ್ಕಾರಗಳು ಏಕೆ ವಿಫಲವಾಗಿವೆ? ಈ ರೀತಿ ಕಾರ್ಯಕ್ರಮಗಳನ್ನು ಕೊಡುವುದರಲ್ಲಿ ನೀವು ಏಕೆ ವಿಫಲರಾಗಿದ್ದೀರಿ? STP ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ಸುಧಾಕರ್‌ರವರೆ ನೀವೆಲ್ಲಾ educated ಇದ್ದೀರಿ. ವಸ್ತುಸ್ಥಿತಿಯನ್ನು ಅವರೂ ಹೇಳಿದ್ದಾರೆ. ನೀವೂ ಹೇಳಿದ್ದೀರಿ. ಅದನ್ನೇ ಕೊಂಡಾಡುವುದಕ್ಕೆ ಹೋಗಬೇಡಿ. ಹಿಂದಿನ ಕಥೆಯನ್ನೇ ಹೇಳುವುದಕ್ಕೆ ಹೋಗಬೇಡಿ. ತತ್‌ಕ್ಷಣ ಪರಿಹಾರ ಏನು ಎನ್ನುವುದನ್ನು ಹೇಳಿ. Longstanding ಪರಿಹಾರ ಏನು?

ಡಾ|| ಕೆ. ಸುಧಾಕರ್: ಪರಿಹಾರ ಎಂದರೆ, ಈಗ ಸರ್ಕಾರ ಏನು ಎತ್ತಿನ ಹೊಳೆ ಯೋಜನೆ ಎಂದು ಹೇಳುತ್ತಿದೆ, ಅದಕ್ಕೆ ಒಂದು ಭಾಗದ ಜನರ ವಿರೋಧವಿದೆ. ಆದ್ದರಿಂದ ನಮ್ಮ ಸರ್ಕಾರ ಅವರನ್ನು ಸಮಾಧಾನಪಡಿಸಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವಂಥದ್ದು ಪ್ರಾಶಸ್ತ್ಯವಾಗಿ ಮಾಡಬೇಕಾಗಿದೆ. STP ಎಂದು ಹೇಳುತ್ತಿದ್ದೀರಿ. ಆ ಕಾಮಗಾರಿಯನ್ನು ಆದಷ್ಟು ಬೇಗನೆ ಅನುಷ್ಠಾನಕ್ಕೆ ತರುವಂಥದ್ದು. ಮೇಕೆದಾಟಿನ ಬಳಿ ಡ್ಯಾಂ ಅನ್ನು ಕಟ್ಟಬೇಕೆಂದು ಹೇಳುತ್ತಿದ್ದೀರಿ. ಅವುಗಳಿಗೆ ಯಾವುದೇ ಒಂದು ಕಾಲಮಿತಿಯನ್ನು ಹಾಕಿಕೊಳ್ಳುತ್ತಿಲ್ಲ. ನಾವು ಮಾಡುತ್ತೇವೆ, ಶೀಘ್ರವಾಗಿ ಮಾಡುತ್ತೇವೆ ಎಂದು ಹೇಳುತ್ತೀರಿ. 1994ರಲ್ಲಿ ಮಾನ್ಯ ಆರ್.ಎಲ್.ಜಾಲಪ್ಪನವರು ಇದೇ ಸದನದಲ್ಲಿ 'ಇವತ್ತು ನಮಗೆ ಕೋಲಾರ ಹಾಗೂ ಚಿಕ್ಕಬಳ್ಳಾಪುರದಲ್ಲಿ 200 ಅಡಿಗೂ ನೀರು ಸಿಗುತ್ತಿಲ್ಲ. ಇನ್ನೊಂದು

ಹತ್ತು ವರ್ಷವಾದರೆ ಸಾವಿರ ಅಡಿಗೆ ಹೋಗುತ್ತದೆ' ಎಂದು ಇದೇ ಸದನದಲ್ಲಿ ಹೇಳಿದ್ದಾರೆ. ಆ ಸಂದರ್ಭದಲ್ಲಿ ಸನ್ಮಾನ್ಯ ಸಿ.ಭೈರೇಗೌಡರೂ ಇದ್ದರು. ಅವರು 1994 ರಲ್ಲಿ ಪ್ರತಿ ಕರೆಗಳೂ ನಮ್ಮ ಭಾಗದಲ್ಲಿ ಪುನಶ್ಚೇತನವಾಗಬೇಕು ಎಂದು ಹೇಳಿದ್ದರು. ಈಗ ನಾವು 2014ರಲ್ಲಿದ್ದೇವೆ. ಇವತ್ತು 1,800 ಚದರ ಅಡಿಗೆ ಹೋದರೂ ನೀರು ಸಿಗುತ್ತಿಲ್ಲ. ನಿಜವಾಗಿಯೂ ಈ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು 13,000 ಕೋಟಿ ರೂ.ಗಳ ಒಂದು ಯೋಜನೆಯನ್ನು ಅನುಷ್ಠಾನಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಪಟ್ಟಿದ್ದಾರೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮಂತ್ರಿಗಳು ಆ ಭಾಗದ ಜನ ಯಾರು ವಿರೋಧ ಪಡಿಸುತ್ತಿದ್ದಾರೆ, ಇಲ್ಲಿ ಆ ಭಾಗದ ಶಾಸಕರೂ ಕೂಡ ಇದ್ದೀರಿ, ನೀವು ಜನಪ್ರತಿನಿಧಿಗಳೂ ಇದ್ದೀರಿ, ನಿಮ್ಮನ್ನು ನಮ್ಮ ಪ್ರತಿಯೊಬ್ಬ ಶಾಸಕರೂ ನಮ್ಮೆಲ್ಲರ ಜನರ ಪರವಾಗಿ ಬೇಡಿಕೊಳ್ಳುತ್ತೇವೆ. ಇವತ್ತು ಕುಡಿಯುವ ನೀರಿಗೆ ಮಾತ್ರ ನಾವು ನಿಮ್ಮನ್ನು ನೀರನ್ನು ಕೇಳುತ್ತಿದ್ದೇವೆ ಹೊರತು ಯಾವುದೇ ನೀರಾವರಿಗೆ ಅಲ್ಲ. ಅದು ನಿಮ್ಮ ಜೀವನದಿಗೆ ಯಾವುದೇ ಮಾರಕ ಆಗುವುದಿಲ್ಲ. ತಪ್ಪುಗ್ರಹಿಕೆ ಆಗಿದೆ.

ಅಧ್ಯಕ್ಷರು: ಮಾನ್ಯ ಸುಧಾಕರ್‌ರವರೆ ನೀವು ಅವರನ್ನು ಅಪೀಲ್ ಮಾಡಿಕೊಂಡಿದ್ದು ಒಳ್ಳೆಯ ಕೆಲಸವಾಯಿತು. ಸಾಧ್ಯವಾದರೆ ನೋಡಿ ನಮ್ಮ ಜೋಗ್‌ನಿಂದ ಕೆಳಗೆ ಶರಾವತಿ ಹರಿದು ಹೊನ್ನಾವರಕ್ಕೆ ಸಮುದ್ರ ಸೇರುತ್ತದೆ. ಆ ನೀರನ್ನು ವಾಪಸ್ಸು ತರಲು ನೋಡಿ. ಯಾವುದೇ ಗಲಾಟೆ ಏನೂ ಇರುವುದಿಲ್ಲ ಸುಖವಾಗಿ ತರಬಹುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ತಾವು ಕೋಲಾರಕ್ಕೆ ಬಂದುಬಿಡಿ ಆಗ ಎಲ್ಲಾ ಸಮಸ್ಯೆ ಪರಿಹಾರವಾಗುತ್ತದೆ. ನಾವು ನಿಮ್ಮನ್ನು ಈ ವಯಸ್ಸಿನಲ್ಲಿ ಚೆನ್ನಾಗಿ ಸಾಕಿಕೊಳ್ಳುತ್ತೇವೆ. ದಯಮಾಡಿ ಬಂದುಬಿಡಿ.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ತಾವು ದೊಡ್ಡ ಮನಸ್ಸು ಮಾಡಿದರೆ ಅದು ಆಗದೇ ಇರುವಂಥದ್ದು ಏನೂ ಇಲ್ಲ. ಏಕೆಂದರೆ BWSSB

ಯವರು ನಿವೃತ್ತ Chief Engineer ತ್ಯಾಗರಾಜ್‌ರವರ ನೇತೃತ್ವದಲ್ಲಿ ಒಂದು ತಾಂತ್ರಿಕ ಸಮಿತಿಯನ್ನು ನೇಮಕ ಮಾಡಿ ವರದಿಯನ್ನು ತಯಾರಿಸಿದ್ದರು. ಆ ವರದಿಯಲ್ಲಿ ಶರಾವತಿಯಿಂದ ಹಾಸನ ಮುಖಾಂತರವಾಗಿ ಹಾಸನ ಭಾಗಕ್ಕೆ ಎಲ್ಲಾ ಭಾಗಕ್ಕೂ ಕುಡಿಯುವ ನೀರು ಕೊಡಲಿಕ್ಕೆ 30 ಟಿ.ಎಂ.ಸಿ ಯವರೆಗೂ ನೀರನ್ನು ತೆಗೆದುಕೊಳ್ಳಬಹುದು ಎನ್ನುವ ಅವಕಾಶವಿದೆ.

ಅಧ್ಯಕ್ಷರು: ಅದು 700 feet height ಇದೆ.

ಶ್ರೀ ಕೃಷ್ಣ ಬೈರೇಗೌಡ: ಆದರೂ technically feasible ಎಂದು ವರದಿ ಕೊಟ್ಟಿದ್ದಾರೆ.

ಅಧ್ಯಕ್ಷರು: ನೋಡಿ ಆ ರೀತಿ ಇದ್ದರೆ ಮಾಡಿ. ನೀರು ಸುಮ್ಮನೆ ಸಮುದ್ರಕ್ಕೆ ಹೋಗುತ್ತಿದೆ.

ಶ್ರೀ ಕೃಷ್ಣ ಬೈರೇಗೌಡ: ಸಾಧ್ಯವಿದೆ. ತಮ್ಮಂತಹವರು ಸ್ವಲ್ಪ ಶಕ್ತಿ ತೋರಿಸಿದರೆ, ಕೂಡಿಸಿದರೆ ಅದು ಆಗುತ್ತದೆ.

ಡಾ|| ಕೆ. ಸುಧಾಕರ್: ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರು ಎನ್ನುವುದು it is a fundamental right.

ಅಧ್ಯಕ್ಷರು: ಹೌದು. ಇಲ್ಲವೆಂದು ಯಾರು ಹೇಳಿದರು? ಪರಿಹಾರಕ್ಕೆ ದಾರಿ ಕಂಡುಕೊಳ್ಳಿ.

ಶ್ರೀ ಕೆ. ಶಿವಮೂರ್ತಿ: ಕುಡಿಯುವ ನೀರು ನದಿಯಿಂದ ಸರಿಯಾಗಿ ಹಂಚಿಕೆಯಾಗಬೇಕು. ಕುಡಿಯುವ ನೀರು ಸರಿಯಾಗಿ allot ಆಗಲೇ ಇಲ್ಲ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ: ಮಾನ್ಯ ಅಧ್ಯಕ್ಷೆರೆ, ನಮಗೂ ಮಾತನಾಡಲು ಅವಕಾಶ ಕೊಡಿ.

ಡಾ|| ಕೆ. ಸುಧಾಕರ್: ಮಾನ್ಯ ನಾವು ನಿಮ್ಮಲ್ಲಿ ಮನವಿ ಮಾಡುವುದು ಇಷ್ಟೆ. ನಿಮ್ಮ ಒಂದು ನಾಯಕತ್ವದಲ್ಲಿ ಇವತ್ತು ನಮ್ಮ ಭಾರೀ ನೀರಾವರಿ ಸಚಿವರು ಅಥವಾ ಸಣ್ಣ ನೀರಾವರಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ

ಮತ್ತು ಪಂಚಾಯತ್‌ರಾಜ್ ಸಚಿವರು ಮೂವರು) ಸೇರಿಕೊಂಡು ಈ ಯೋಜನೆಗಳಿಗೆ ಕಾಲಮಿತಿಯಲ್ಲಿ ನಮಗೆ ಕ್ರಯಬದ್ಧವಾಗಿ ಏನು ಒಂದು ಮೂಲಭೂತ ಹಕ್ಕಾಗಿದೆ, ಕುಡಿಯುವ ನೀರನ್ನು ಒದಗಿಸುವುದು ಪ್ರತಿಯೊಂದು ಸರ್ಕಾರದ ಜವಾಬ್ದಾರಿಯಾಗಿದೆ. ಆ ಜವಾಬ್ದಾರಿಯನ್ನು ನೀವು ಅರಿತುಕೊಂಡು ಕಾಲಮಿತಿಯೊಳಗೆ ಈ ಯೋಜನೆಗಳ ಅನುಷ್ಠಾನ ಮಾಡದೇ ಹೋದರೆ ಮುಂದಿನ ದಿನಗಳಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಮರುಭೂಮಿ ಆಗುತ್ತದೆ ಎಂದು ಮತ್ತೆ ಮತ್ತೆ ಈ ಸದನಕ್ಕೆ ತಿಳಿಸಲು ಬಯಸುತ್ತೇನೆ. ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಡಿ. ಒಂದು ಕೋಟಿ ಜನರ ಪ್ರಶ್ನೆಯಾಗಿದೆ. ನನಗೆ ಮಾತನಾಡಲು ಸಮಯ ಕೊಟ್ಟಿದ್ದಕ್ಕೆ ಧನ್ಯವಾದಗಳು.

(ಗೊಂದಲ)

ಶ್ರೀ ಪಿಳ್ಳ ಮುನಿಶಾಮಪ್ಪ: ಮಾನ್ಯ ಅಧ್ಯಕ್ಷರೆ, ಐದು ನಿಮಿಷ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಸ್ವಲ್ಪ ತಾಳಿ. ಎಲ್ಲರಿಗೂ ಐದು ನಿಮಿಷ ಮಾತನಾಡಲು ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀಮತಿ ವೈ. ರಾಮಕ್ಕ: ಮಾನ್ಯ ಅಧ್ಯಕ್ಷರೆ,...

(ಗೊಂದಲ)

ಶ್ರೀ ಪಿಳ್ಳ ಮುನಿಶಾಮಪ್ಪ: ಮಾನ್ಯ ಅಧ್ಯಕ್ಷರೆ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಮೂರು ಜಿಲ್ಲೆಗಳಲ್ಲಿಯೂ ಬಹಳಷ್ಟು ಸಮಸ್ಯೆ ಇದೆ.

(ಗೊಂದಲ)

ಶ್ರೀ ರಮೇಶ್ ಕುಮಾರ್ .ಕೆ.ಆರ್: ಮೊದಲು ಮಹಿಳಾ ಶಾಸಕರಿಗೆ ಮಾತನಾಡಲು ಅವಕಾಶ ಕೊಡಿ. ಆಮೇಲೆ ನೀವು ಮಾತನಾಡಿ.

(ಗೊಂದಲ)

ಶ್ರೀ ಪಿಳ್ಳ ಮುನಿಶಾಮಪ್ಪ: ಆಯಿತು.

ಶ್ರೀಮತಿ ವೈ. ರಾಮಕ್ಕ: ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಗೆ ಬಂದಿರುವ ಬರಗಾಲ ಎಂದರೆ ಎಲ್ಲರಿಗೂ ಅನ್ವಯಿಸುವಂತಹ ಮಾತು. ಆದರೆ ದಯವಿಟ್ಟು ನೀವು ನಮ್ಮ ಜಿಲ್ಲೆಗೆ ನೀರಿನ ಅವಕಾಶ ಮಾಡಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆ.

ಅಧ್ಯಕ್ಷರು: ನನ್ನ ಹತ್ತಿರ ಇಲ್ಲ.

ಶ್ರೀಮತಿ ವೈ. ರಾಮಕ್ಕ: ನೀವಲ್ಲ ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಬರಬೇಕಾಗಿರುವುದು. ನೀವೆಲ್ಲಾ ಮನಸ್ಸು ಮಾಡಿದರೆ ಮಾತ್ರ ನೀರು ಬರುವುದು. ನನ್ನ ಮತಕ್ಷೇತ್ರದಲ್ಲಿ ನೀರಿಲ್ಲದೇ ಕಳೆದ ವರ್ಷ ಸಾವಿರಾರು ಜನರು ಗುಳೆ ಹೋಗಿದ್ದಾರೆ. ಆದ್ದರಿಂದ ಇನ್ನುಳಿದ ಜನ ಗುಳೆ ಹೋಗಬಾರದು. ಅವರು ಶಾಶ್ವತವಾಗಿ ಮನೆಯಲ್ಲಿ ಜೀವನ ಮಾಡಿಕೊಂಡು ಇರಬೇಕೆಂದರೆ ಶಾಶ್ವತವಾಗಿ ನೀರು ಒದಗಿಸಬೇಕು. ಇಲ್ಲವೆಂದರೆ ಜನರು ಬದುಕುಳಿಯಲು ಸಾಧ್ಯವಿಲ್ಲ. ಅದೇ ರೀತಿ ಗ್ರಾಮ ಸಭೆಗಳು ನಡೆಯಬೇಕೆಂದರೆ ಹೋದ ಜಾಗದಲ್ಲೆಲ್ಲಾ ನೀರಿನ ಸಮಸ್ಯೆ. ಸೊಸೈಟಿಗಳ ಸಮಸ್ಯೆ. ಏಕೆಂದರೆ ಸರ್ಕಾರ ಬಂದ ತಕ್ಷಣ ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಎಂದು ಘೋಷಣೆ ಮಾಡಿದರು. ಮಾನ್ಯ ಅಧ್ಯಕ್ಷರೆ, ಸೊಸೈಟಿಗಳಲ್ಲಿ ಒಂದು ರೂಪಾಯಿಗೆ ಒಂದು ಕೆಜಿ ಅಕ್ಕಿಯನ್ನು ಕೊಡುವುದಿಲ್ಲ.

ಅಧ್ಯಕ್ಷರು: ಯಾವ ಸೊಸೈಟಿಯವರು ಹೇಳಿದ್ದು?

ಶ್ರೀಮತಿ ವೈ. ರಾಮಕ್ಕ: ನಮ್ಮ ಕಡೆಯ ಒಂದೊಂದು ಜಾಗದಲ್ಲಿ ಸೀಮೆ ಎಣ್ಣೆ ಕೊಟ್ಟರೆ ಅಕ್ಕಿ ಕೊಡುವುದಿಲ್ಲ, ಅಕ್ಕಿ ಕೊಟ್ಟರೆ ಸೀಮೆ ಎಣ್ಣೆ ಕೊಡುವುದಿಲ್ಲ.

ಅಧ್ಯಕ್ಷರು: ಯಾವ ಸೊಸೈಟಿಯವರು ಅಕ್ಕಿಯನ್ನು ಕೊಡುವುದಿಲ್ಲವೆಂದು ಹೇಳಿದ್ದಾರೆ ಆ ಸೊಸೈಟಿಯವರ ಹೆಸರನ್ನು ಕೊಡಿ.

ಶ್ರೀಮತಿ ವೈ. ರಾಮಕ್ಕ: ಒಂದೊಂದು ಕಡೆ 25 ಕೆಜಿ ಅಕ್ಕಿಯನ್ನು ಕೊಡುತ್ತಾರೆ.

ಅಧ್ಯಕ್ಷರು: ಅವರು ಹಲ್ಲು ಹತ್ತಿದ್ದಾರೆ ಅವರ ಹಲ್ಲನ್ನು ಮುರಿಯಬೇಕು. ಯಾವ ಸೊಸೈಟಿ ಎಂದು ಹೇಳಿ?

ಶ್ರೀಮತಿ ವೈ. ರಾಮಕ್ಕ: ಸಂಬಂಧಪಟ್ಟ ಅಧಿಕಾರಿಯವರು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಯಾವ ಸೊಸೈಟಿಯವರು ಕೊಡುವುದಿಲ್ಲವೆಂಬ ಬಗ್ಗೆ ಅವರ ಹೆಸರನ್ನು ಮಾನ್ಯ ಮಂತ್ರಿಗಳ ಕೈಗೆ ಕೊಡಿ ಈ ಬಗ್ಗೆ ಕ್ರಮ ತೆಗೆದುಕೊಳ್ಳೋಣ.

ಶ್ರೀಮತಿ ವೈ. ರಾಮಕ್ಕ: ನಾನು ಅಕ್ಕಿಯನ್ನು ಕೊಡದೇ ಇರುವ ಸೊಸೈಟಿಗಳ ಹೆಸರನ್ನು confirm ಮಾಡಿಕೊಂಡು ನಿಮಗೆ letter ಕೊಡುತ್ತೇನೆ.

ಅಧ್ಯಕ್ಷರು: ಡಿ.ಸಿ.ಯವರ ಕೈಗೆ ಕೊಡಿ.

ಶ್ರೀಮತಿ ವೈ. ರಾಮಕ್ಕ: ನಮಗೆ ಶಾಶ್ವತವಾಗಿ ನೀರನ್ನು ಕೊಡಬೇಕು. ನಮ್ಮ ಎತ್ತಿನಹೊಳೆಗೆ ನೀರು ಬರುತ್ತದೆ ಎಂದು ಹೇಳಿದರು. ನೀರು ಬರುತ್ತದೆ ಎಂದು ನಾವುಗಳು ಕಾದುಕಾದು ಸಾಕಾಗಿಹೋಗಿದೆ. ದಯವಿಟ್ಟು ನಮ್ಮ ಭಾಗಕ್ಕೆ ನೀರನ್ನು ಕೊಡಿಸಬೇಕು. ಜನರು ಬದುಕಿ ಉಳಿಯಬೇಕಾದರೆ ಅದು ಸಾಧ್ಯವಾಗದ ಮಾತು. ಜನಗಳಿಗೆ ಆಧಾರವಾಗಬೇಕಾದರೆ ಶಾಶ್ವತವಾಗಿ ನೀರು ಕೊಡಬೇಕು ಎಂದು ನಿಮ್ಮ ಮೂಲಕ ನಾನು ಸರ್ಕಾರಕ್ಕೆ ಕೇಳಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ನಾರಾಯಣಸ್ವಾಮಿಯವರೆ ತಾವು ಮಾತನಾಡಿ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ): ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಶಾಸಕರು ಮಾತನಾಡಿದ್ದಾರೆ.

ಕೋಲಾರ ಜಿಲ್ಲೆಯು ಕರ್ನಾಟಕ ಭೂಪಟದಲ್ಲಿಯೇ ಇದೆಯೋ ಅಥವಾ ಇಲ್ಲವೋ ಗೊತ್ತಿಲ್ಲ.

ಅಧ್ಯಕ್ಷರು: ಇದೆ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ): ಇದೆ ಅಂದರೆ ಅದು ಆಕಾರಕ್ಕೆ ಇದೆ.

ಅಧ್ಯಕ್ಷರು: ಅದು ಕರ್ನಾಟಕ ಭೂಪಟದಲ್ಲಿ ಇರುವುದರಿಂದಲೇ ನೀವು ಶಾಸನಸಭೆಗೆ ಬಂದಿರುವುದು.

ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ): ನಾವು ಶಾಸಕರಾಗಿ ಇಲ್ಲಿಗೆ ಬಂದಿದ್ದೇವೆ. ಆದರೆ ಬೆಂಗಳೂರಿನಿಂದ ಕೇವಲ 70 ಕಿ.ಮಿ. ದೂರದಲ್ಲಿದ್ದರೂ ಕೋಲಾರ ಜಿಲ್ಲೆಯವರು ಇವತ್ತು ಕುಡಿಯುವ ನೀರಿಗಾಗಿ ನಾವು ಎಷ್ಟು ಕಷ್ಟಪಡುತ್ತಿದ್ದೇವೆಂದು ಎಲ್ಲರೂ ಮಾತನಾಡಿದ್ದಾರೆ. ಬಂಗಾರಪೇಟೆ ತಾಲ್ಲೂಕಿನಲ್ಲಿ ಕೆ.ಜಿ.ಎಫ್ ಮತ್ತು ಕೋಲಾರ ಎಂದು ಎರಡು ಕ್ಷೇತ್ರಗಳು ಬರುತ್ತವೆ. ಈ ರಾಜ್ಯಕ್ಕೆ ನಮ್ಮ ಕೋಲಾರ ಮತ್ತು ಕೆಜಿಎಫ್‌ನಿಂದ ಮೊಟ್ಟಮೊದಲು ಮುಖ್ಯಮಂತ್ರಿಯನ್ನು ಕೊಟ್ಟಿದ್ದೇವೆ. ಆದರೆ ಇಡೀ ಪ್ರಪಂಚಕ್ಕೆ ಚಿನ್ನವನ್ನು ಉತ್ಪಾದನೆ ಮಾಡಿಕೊಟ್ಟಿರುವುದು ನಮ್ಮ ಕೆಜಿಎಫ್ ಆಗಿದೆ. ಈ KGF gold mine ನಲ್ಲಿ ಚಿನ್ನವನ್ನು ಉತ್ಪಾದನೆ ಮಾಡಿಕೊಟ್ಟಿದ್ದೇವೆ. ಇಡೀ ಕರ್ನಾಟಕ ರಾಜ್ಯದಲ್ಲಿ ಸನ್ಮಾನ್ಯ ಎಂ.ವಿ.ಕೃಷ್ಣಪ್ಪನವರು ಹಸುಗಳನ್ನು ತಂದು ಹಾಲಿನ ಉತ್ಪಾದನೆಯನ್ನು ಶುರುಮಾಡಿದ್ದು ಕೆಜಿಎಫ್‌ನಲ್ಲಿ.

ಅಧ್ಯಕ್ಷರು: ಈಗ ಏನು ಮಾಡಬೇಕು ಅದನ್ನು ಹೇಳಿ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ): ನಾನು ಈ ವಾರವೆಲ್ಲಾ ಮಾತನಾಡಲೇ ಇಲ್ಲ. ನಾನು ನೇರವಾಗಿ ವಿಷಯದ ಬಗ್ಗೆ ಮಾತನಾಡುತ್ತೇನೆ. ಒಂದು BEML ಕಾರ್ಖಾನೆಯನ್ನು ಸನ್ಮಾನ್ಯ ಎಂ.ವಿ.ಕೃಷ್ಣಪ್ಪನವರು ನಮ್ಮ ಜಿಲ್ಲೆಗೆ ಮಾಡಿಸಿಕೊಟ್ಟಿದ್ದಾರೆ. ಇವತ್ತಿನದಿವಸ 10–15 ವರ್ಷಗಳಿಂದ ಕೊಳವೆ ಬಾವಿಗಳಲ್ಲಿ ನೀರಿಲ್ಲ, ನೀರು ಸಿಕ್ಕಿದರೂ ಕೂಡ

1500–1600 ಅಡಿ ಬೋರ್ ಕೊರೆದಾಗ ನೀರು ಸಿಗುತ್ತಿದೆ. ಆದರೂ ಕೂಡ ನೀರು ಬರುವುದು ಗ್ಯಾರಂಟಿ ಇಲ್ಲ. ಇವತ್ತು ಕೊಳವೆ ಬಾವಿಗಳಲ್ಲಿ ನೀರು ಬಂದರೆ RDPR Departmentನವರು ಪಂಪು ಮೋಟಾರು ಕೊಟ್ಟು KEBಯವರು service ಕೊಡುವ ಹೊತ್ತಿಗೆ ಆ ನೀರು ಬತ್ತಿಹೋಗುತ್ತದೆ. ನಮಗೆ ಇರುವುದೇ ಒಂದೇ ಒಂದು ಮಾರ್ಗ. ಕೊಳವೆ ಬಾವಿ ಹಾಕಿ ಎಂದು ಹೇಳುತ್ತಾರೆ. ಈ ಕೊಳವೆ ಬಾವಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಒಂದೇ ಪಾಲಿಸಿಯನ್ನು ಮಾಡಿಬಿಟ್ಟಿದ್ದಾರೆ. ಕೊಳವೆ ಬಾವಿ ಕೊರೆಯುವ ಸಂಬಂಧ 1000 ಅಡಿಗೆ ಮಾತ್ರ ಬಿಲ್ಲನ್ನು ಮಾಡುತ್ತಾರೆ. ಆದರೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1000 ಅಡಿಯಲ್ಲಿ ಒಂದೇ ಒಂದು ಕೊಳವೆ ಬಾವಿಯಲ್ಲಿಯೂ ನೀರು ಸಿಗುವುದಿಲ್ಲ. ಆದರೆ ಅಧಿಕಾರಿಗಳಿಗೆ ಅನೇಕ ಸಭೆಗಳಲ್ಲಿ ಸನ್ಮಾನ್ಯ ರಮೇಶ್ ಕುಮಾರ್‌ರವರು ನೀವು ಕೋಲಾರ ಜಿಲ್ಲೆಯನ್ನು ಎಲ್ಲಾ ಜಿಲ್ಲೆಗಳಿಗೂ ಹೋಲಿಸಬೇಡಿ ಇದನ್ನು ವಿಶೇಷವಾಗಿ ಪರಿಗಣಿಸಿ ಎಂದು ಹೇಳಿದ್ದಾರೆ. ನಮ್ಮಲ್ಲಿ ಕೊಳವೆ ಬಾವಿಗಳನ್ನು ಬಿಟ್ಟರೆ ಬೇರೆ ಯಾವುದೇ ಅನ್ಯಮಾರ್ಗಗಳು ಇಲ್ಲವೆಂದು ಎಷ್ಟು ಹೇಳಿದರೂ ಕೂಡ ಇದುವರೆಗೂ 1000 ಅಡಿ ಮೇಲ್ಪಟ್ಟು ಕೊರೆಯತಕ್ಕಂತಹ ಕೊಳವೆ ಬಾವಿಗಳಿಗೆ ಯಾರೂ ಕೂಡ ಅಂದಾಜನ್ನು ತಯಾರು ಮಾಡಲಿಲ್ಲ. ಕೊಳವೆ ಬಾವಿಗಳಲ್ಲಿ ಸಿಗುವಂತಹ ನೀರಿಗೆ ತಕ್ಷಣ ಇವತ್ತು ಕರ್ನಾಟಕ ರಾಜ್ಯದಲ್ಲಿ ಏನು ಹಣವನ್ನು ಕೊಡುತ್ತಾರೆ, ಅದೇ ರೀತಿಯಾಗಿ ನಮಗೂ ಸಹ ಭಾಗ ಮಾಡಿ ಕೊಡುತ್ತಿದ್ದಾರೆ. ನಾವು ಕಡೆಯದಾಗಿ ಎಲ್ಲಿಗೆ ಬಂದಿದ್ದೇವೆಂದರೆ ನಮ್ಮ ಭಾಗದಲ್ಲಿ ರೈತರು ಇಡೀ ಭಾರತ ದೇಶಕ್ಕೆ ತರಕಾರಿಯನ್ನು ಕೊಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕೋಲಾರ ಜಿಲ್ಲೆಯಿಂದ ಇಡೀ ಭಾರತ ದೇಶಕ್ಕೆ ತರಕಾರಿಯನ್ನು ಸರಬರಾಜು ಮಾಡುತ್ತಿದ್ದೇವೆ. ರೇಷ್ಮೆಯನ್ನು ಅವಲಂಬನೆ ಮಾಡಿ ಇಡೀ ಭಾರತವಷ್ಟೇ ಅಲ್ಲ ಹೊರದೇಶಕ್ಕೂ ನಾವು ರೇಷ್ಮೆಯನ್ನು ಸರಬರಾಜು ಮಾಡುತ್ತಿದ್ದೇವೆ. ನಾವು ಕೋಲಾರ ಜಿಲ್ಲೆಯಿಂದ ಚಿನ್ನವನ್ನು, ರೇಷ್ಮೆಯನ್ನು,

ಹಾಲನ್ನು ಮತ್ತು ತರಕಾರಿಯನ್ನು ಕೊಡುತ್ತಿದ್ದೇವೆ. ನಮ್ಮ ರೈತರು ಬೆವರು ಸುರಿಸಿ ಇಡೀ ಭಾರತ ದೇಶಕ್ಕೆ ತರಕಾರಿಯನ್ನು ಕೊಡುತ್ತಾರೆ. ತರಕಾರಿಯನ್ನು ಬೆಳೆಯುವುದಕ್ಕೆ ಕನಿಷ್ಠ ಪಕ್ಷ ನೀರು ಇಲ್ಲ, ಕುಡಿಯುವುದಕ್ಕೂ ಸಹ ನೀರು ಇಲ್ಲ. ರೈತನು ತನ್ನ ಮನೆಗೆ ಹೋದರೆ ನೂರಾರು ಜನರಿಗೆ ಊಟವನ್ನು ಹಾಕುತ್ತಿದ್ದ. ಅಂತಹ ರೈತ ವ್ಯವಸಾಯ ಮಾಡುವುದಕ್ಕೆ ಬೋರ್‌ವೆಲ್‌ನಲ್ಲಿ ನೀರು ಇಲ್ಲದೆ ಹೊಟ್ಟೆಪಾಡಿಗೋಸ್ಕರ ದಿನಬೆಳಗಾದರೆ ಬೆಂಗಳೂರಿಗೆ ವಾಚಮನ್ ಕೆಲಸ ಮಾಡುವುದಕ್ಕೆ ಹೋಗುತ್ತಿದ್ದಾರೆ. ನಮ್ಮ ಬಂಗಾರಪೇಟೆ, ಕೆಜಿಎಫ್‌ನಿಂದ ಒಂದು ದಿವಸಕ್ಕೆ 30,000 ಜನರು ಟ್ರೈನ್‌ನಲ್ಲಿ ಹೋಗಿ ಜೀವನೋಪಾಯಕ್ಕಾಗಿ ರೈತರು ಬೆಂಗಳೂರಿನ ವೈಟ್‌ಫೀಲ್ಡ್‌ಗೆ ವಾಚ್‌ಮನ್ ಮತ್ತು ಗಾರ್ಮೆಂಟ್ಸ್ ಕೆಲಸಕ್ಕಾಗಿ ಹೋಗುತ್ತಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಕೆ.ಎಂ.ಶಿವಲಿಂಗೇಗೌಡರು ಹೇಳುತ್ತಿದ್ದರು. ಅವರ ಕಣ್ಣಿನಲ್ಲಿ ನೀರು ಬರುತ್ತದೆ, ಇವತ್ತಿನದಿವಸ ನಮ್ಮ ಕಣ್ಣಲ್ಲಿ, ನಮ್ಮ ರೈತರ ಕಣ್ಣಿನಲ್ಲಿ ರಕ್ತ ಬರುತ್ತಿದೆ. ನಮ್ಮ ಕಷ್ಟವನ್ನು ಮತ್ತು ನಮ್ಮ ಗೋಳನ್ನು ಕೇಳುವವರು ಇಲ್ಲವಾಗಿದ್ದಾರೆ.

ಉಪಾಧ್ಯಕ್ಷರು: ತಾವು specific ಆಗಿ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಹೇಳಿ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ): ಕೋಲಾರ ಜಿಲ್ಲೆಯವರು ನಮಗೆ ಏನಕ್ಕೂ ಬೇಕಾಗಿಲ್ಲವೆಂದು ತಿಳಿದುಕೊಂಡಿದ್ದಾರೆ. ತಾವು ರೆವಿನ್ಯೂವನ್ನು ಗಮನಿಸಿದಾಗ ನಮ್ಮ ಜಿಲ್ಲೆಯಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಿಂದ ನಾನಾ ಮೂಲಗಳಿಂದ ಅತಿ ಹೆಚ್ಚು ರೆವಿನ್ಯೂ ಬರುತ್ತಿದೆ. ಆದರೆ ಯಾವುದನ್ನೂ ಸರ್ಕಾರವು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ.

ಉಪಾಧ್ಯಕ್ಷರು: ಮಾನ್ಯ ನಾರಾಯಣಸ್ವಾಮಿಯವರೆ, ಈಗ ತಾವು ಏನು ಮಾಡಬೇಕೆಂದು ಅಷ್ಟು ಹೇಳಿ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ): ಅದನ್ನು ಹೇಳುತ್ತೇನೆ. ನಮಗೆ ಪರ್ಯಾಯವಾಗಿ ತಾವು ಎತ್ತಿನಹೊಳೆ ಯೋಜನೆಯನ್ನು ಮಾಡುತ್ತಿದ್ದೀರಿ. ಇದು ಯಾವಾಗ ಬರುತ್ತದೆ ಎಂದು ಗೊತ್ತಿಲ್ಲ. ಇದು ಬಂದರೂ ಕೂಡ ಕೋಲಾರ ಮತ್ತು ಚಿಕ್ಕಬಳ್ಳಾಪುರಕ್ಕೆ ಎಷ್ಟು ನೀರು ಸಿಗುತ್ತದೆ ಎಂದು ಗೊತ್ತಿಲ್ಲ. ನೀವು 5 ಟಿಎಂಸಿ ನೀರು ಸಿಗುತ್ತದೆ ಎಂದು ಹೇಳುತ್ತಿದ್ದೀರಿ. 5 ಟಿಎಂಸಿ ನೀರು ಸಿಗುತ್ತದೆಯೋ ಅಥವಾ ಸಿಗುವುದಿಲ್ಲವೋ ನಮ್ಮ ಮನೆಗಳಲ್ಲಿ **"ದೂರದ ನೀರು ದಾಹಕ್ಕೆ ಹಂದಲ್ಲ"** ಎಂದು ಒಂದು ಗಾದೆಯನ್ನು ಹೇಳುತ್ತಾರೆ. ನಮ್ಮ ಪರಿಸ್ಥಿತಿ ಏನಾಗಿದೆ ಅಂದರೆ ನೀವು ಎತ್ತಿನಹೊಳೆ ಯೋಜನೆಯನ್ನು ಮಾಡುತ್ತಿದ್ದೀರಿ ಅದನ್ನು ಮುಂದುವರಿಸಿ. ಆದರೆ ಪರ್ಯಾಯವಾಗಿ ತಾವು ಎಲ್ಲವನ್ನೂ ಒಳಗೊಂಡಂತೆ ಒಂದು ವ್ಯವಸ್ಥೆಯನ್ನು ಮಾಡಿದ್ದೀರಿ. ಇವತ್ತು ಬೆಂಗಳೂರಿನ ಕೊಳಚೆ ನೀರು, ಮಳೆ ನೀರು ಹರಿದು ವರ್ತೂರು ಕೆರೆಕೋಡಿ ಮುಖಾಂತರ ವ್ಯರ್ಥವಾಗಿ ತಮಿಳುನಾಡಿಗೆ ಹೋಗುತ್ತಿದೆ. ಆ ತರಹ ಹೋಗತಕ್ಕಂತಹ ನೀರಿನಲ್ಲಿ ತಮಿಳುನಾಡಿನ ಕೃಷ್ಣಗಿರಿ ಮತ್ತು ಅನೇಕ ಕೆರೆಗಳಲ್ಲಿ ಸಾವಿರಾರು ಎಕರೆಯಲ್ಲಿ ವ್ಯವಸಾಯವನ್ನು ಮಾಡಿ ಆ ಭಾಗದ ರೈತರು ಬದುಕುತ್ತಿದ್ದಾರೆ. ಇವತ್ತು ಆ ನೀರಿನ ಕನಿಷ್ಟ ಪಕ್ಷ 400 ಎಂಎಲ್‌ಡಿ ಎರಡೂ ಜಿಲ್ಲೆಗಳಿಗೆ 5ಟಿಎಂಸಿ ನೀರನ್ನು ಕೆರೆಗಳಿಗೆ ತುಂಬುವುದಕ್ಕೆ segregate ಮಾಡಿ ಕೊಡಬೇಕೆಂದು ಹೇಳಿ ಈಗಾಗಲೇ ಯೋಜನೆ ತಯಾರು ಆಗುತ್ತಿದೆ. ಆದರೆ ಆ ಯೋಜನೆಯು ಬಹಳ ಆಮೆಗತಿಯಲ್ಲಿ ಹೋಗುತ್ತಿದೆ. ಈ ಯೋಜನೆಗೆ ಬಹಳ ಹಣವಿಲ್ಲ ಕನಿಷ್ಟಪಕ್ಷ 600 ರಿಂದ 700 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಆಗುತ್ತದೆ. ಈ ಅಧಿಕಾರಿಗಳು ತ್ವರಿತ ಗತಿಯಲ್ಲಿ ಕೆಲಸ ಮಾಡಿದರೆ ಒಂದು ವರ್ಷದಲ್ಲಿ ನಾವು ಕೋಲಾರ ತಾಲ್ಲೂಕು ಶ್ರೀನಿವಾಸಪುರ, ಮುಳಬಾಗಿಲು, ಬಂಗಾರಪೇಟೆ, ಮಾಲೂರು ತಾಲ್ಲೂಕಿನ ಕೆಲವು ಕೆರೆಗಳಿಗೆ ನೀರನ್ನು ತುಂಬಿಸಬಹುದು. ಆದರೆ ಎಲ್ಲಾ ಕೆರೆಗಳಿಗೆ ನೀರು ತುಂಬಿಸುವುದಕ್ಕೆ ಆಗುವುದಿಲ್ಲ. ಆ ಯೋಜನೆಯನ್ನು ಅಧಿಕಾರಿಗಳು ಮಂದಗತಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ. ಇದನ್ನು ಬಿಟ್ಟರೆ ನಮಗೆ ಬೇರೆ ದಾರಿಯೂ ಇಲ್ಲ. ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ ನಮಗೆ ಶರಾವತಿ

ನೀರನ್ನು ಕೊಡುವುದಕ್ಕೆ ಸಾಧ್ಯವೇ ಇಲ್ಲ. ನಮಗೆ ಕೇವಲ 30 ರಿಂದ 40 ಕಿ.ಮೀ. ಏನು ಅಂತರದಲ್ಲಿ ನೀರಿದೆ. ಅದನ್ನು ಮಾಡುವುದಕ್ಕೆ ಅಧಿಕಾರಿಗಳಿಗೆ ಆದೇಶವನ್ನು ಕೊಡಬೇಕು. ಆದಷ್ಟು ಬೇಗನೇ ಆ ಯೋಜನೆಯನ್ನು ಪೂರ್ಣಗೊಳಿಸಬೇಕು. ಇನ್ನು ಎರಡನೆಯದಾಗಿ ಹೇಳುವುದಾದರೆ ಇವತ್ತು ನಾವು ಏನು ಕೊಳವೆಬಾವಿಗಳನ್ನು ಕೊರೆಯುತ್ತಿದ್ದೇವೆ. ಕೋಲಾರ ಮತ್ತು ಚಿಕ್ಕಬಳ್ಳಾಪುರವನ್ನು ವಿಶೇಷ ಜಿಲ್ಲೆಗಳನ್ನಾಗಿ ಪರಿಗಣಿಸಿ ಅಲ್ಲಿ ಎಷ್ಟು ಆಳದ ಕೊಳವೆ ಬಾವಿಗಳನ್ನು ಕೊರೆಯುತ್ತಿದ್ದಿರಿ ಆ ಕೊಳವೆ ಬಾವಿಗಳಿಗೆ ತಕ್ಕಂತೆ ಮೋಟಾರು ಮತ್ತು ಪಂಪ್‌ಅನ್ನು ಕೊಡಿಸುವಂತಹ ಕೆಲಸವನ್ನು ಅಧಿಕಾರಿಗಳು ಮಾಡಬೇಕೆಂದು ಹೇಳಿ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಇನ್ನು ಮೂರನೆಯದಾಗಿ ಹೇಳುವುದಾದರೆ ಯರಗೋಳ್ ಯೋಜನೆ ವಿಚಾರ ಇವತ್ತು ಮಾಲೂರು, ಕೋಲಾರ, ಬಂಗಾರಪೇಟೆ ಕೆಜಿಎಫ್ ನಗರಗಳಿಗೆ ಕುಡಿಯುವ ನೀರನ್ನು ಕೊಡಬೇಕೆಂದು ಹೇಳಿ ಸುಮಾರು 400 ಕೋಟಿ ರೂಪಾಯಿಗಳ ವೆಚ್ಚದಲ್ಲಿ 2006ನೇ ಇಸವಿಯಲ್ಲಿ ಯರಗೋಳ್ ಎಂಬ ಯೋಜನೆಯನ್ನು ನನ್ನ constituency ಯಲ್ಲಿ ಪ್ರಾರಂಭ ಮಾಡಿದರು. **"ಮಗು ಹುಟ್ಟುವುದಕ್ಕೆ ಮೊದಲೇ ಕುಲಾವಿ ಹೊಲಿದರು"** ಎಂದು ಗಾದೆಯನ್ನು ಹೇಳುತ್ತಾರೆ. ಅಲ್ಲಿ ಡ್ಯಾಂ ಅನ್ನು ಕಟ್ಟಿಲ್ಲ ಪೈಪ್‌ಲೈನ್ ಅನ್ನು ಹಾಕಿಬಿಟ್ಟರು. ಪೈಪ್‌ಲೈನ್ ಕೆಲಸವು ಮುಗಿದುಹೋಯಿತು ಇನ್ನೇನು ನೀರು ಬಂದುಬಿಡುತ್ತದೆ ಎಂದು ನಮ್ಮ ಜನರು ಅಂದುಕೊಂಡರು. ಅಲ್ಲಿ ಇದುವರೆಗೂ ಕೂಡ ಡ್ಯಾಂ ಅನ್ನೇಕಟ್ಟಿರುವುದಿಲ್ಲ. ಇದು ಏತಕ್ಕೆಂದು ಅರ್ಥವಾಗುತ್ತಿಲ್ಲ. ಅಧಿಕಾರಿಗಳು ಮತ್ತು ಸಂಬಂಧಪಟ್ಟ ಸಚಿವರುಗಳು ಏನು ಮಾಡುತ್ತಿದ್ದಾರೆಂದು ಅರ್ಥವಾಗುತ್ತಿಲ್ಲ. ನಾನು ಕೂಡ ಒಂದೂವರೆ ವರ್ಷದಿಂದ ಒಬ್ಬ ಜವಾನನ ತರಹ ಆ ಕಛೇರಿಗಳಿಗೆ ಅಲೆಯುತ್ತಿದ್ದೇನೆ. ಆದರೂ ಕೂಡ ಅಧಿಕಾರಿಗಳಿಗೆ ಕರುಣೆ ಬರಲಿಲ್ಲ ಮತ್ತು ಸಚಿವರಿಗೂ ಕೂಡ ಆ ಬಗ್ಗೆ ಗಮನಹರಿಸಲೇ ಇಲ್ಲ. ಆಂಧ್ರದ ಮೂಲದ ಒಬ್ಬ ವ್ಯಕ್ತಿಗೆ contract ಕೊಟ್ಟಿದ್ದಾರೆ. ಇದುವರೆಗೂ ಆ contractor ಅಲ್ಲಿಗೆ ಬಂದೇ ಇಲ್ಲ. ಸರ್ಕಾರದ ಹಣ ಈ ರೀತಿ ದುರುಪಯೋಗವಾಗುತ್ತಿದೆ. ದಯಮಾಡಿ ಸನ್ಮಾನ್ಯ ಸಚಿವರು ಇವತ್ತು ಎಷ್ಟು

ದಿವಸಗಳೊಳಗೆ ಆ ಯರಗೋಳ ಯೋಜನೆಯನ್ನು ಪೂರ್ತಿ ಮಾಡುತ್ತಾರೆಂದು ಮಾಹಿತಿ ಕೊಡಬೇಕು. ಮೂರನೆಯದಾಗಿ ಇವತ್ತು ಕೆಜಿಎಫ್‌ನಲ್ಲಿರುವ ಚಿನ್ನದ ಗಣಿಯನ್ನು ತೋಡಿದ ಮೇಲೆ ಆ ಗಣಿಯಲ್ಲಿ ಪೂರ್ತಿ ನೀರು ತುಂಬಿಕೊಂಡಿದೆ.

ಉಪಾಧ್ಯಕ್ಷರು: ನಾರಾಯಣಸ್ವಾಮಿ ಬಹಳ details ಗೆ ಹೋಗಬೇಡಿ. ಏನಾಗಬೇಕು ಅಷ್ಟನ್ನೇ ಹೇಳಿ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ: ಆಯಿತು. ಆ ಕೆ.ಜಿ.ಎಫ್. ಗಣಿಗಳಲ್ಲಿ ಸುರಂಗಮಾರ್ಗ ಸುಮಾರು 15–20 ಕಿ.ಮೀ.ದೂರದಲ್ಲಿದೆ. ಇವತ್ತು ಆ ಸುರಂಗಮಾರ್ಗದಲ್ಲಿ ನೀರು ತುಂಬಿಬಿಟ್ಟಿದೆ. ಇವತ್ತು ಆ ಪ್ರಾಜೆಕ್ಟ್ ಅನ್ನು ಮಾಡಿಸಿದ್ದೇವೆ. ನೀರು ಇದೆ ಆ ನೀರನ್ನು ತೆಗೆದು ಕೆರೆಗಳಿಗೆ ಬಿಟ್ಟರೆ ಸುಮಾರು 250–300 ಕೆರೆಗಳಿಗೆ ತುಂಬಬಹುದು. ಈ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ಇವತ್ತು ಈ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ನಮ್ಮ ಕಷ್ಟವಂತೂ ಬಹಳ ಶೋಚನೀಯವಾಗಿದೆ ಅಧ್ಯಕ್ಷರೆ, ನಮ್ಮ ಮಂಜುನಾಥಗೌಡರವರು ಹೇಳಿದ ಹಾಗೆ ಹಸುವಿನ ಹಾಲು ಕರೆದರೆ ಆ ಹಾಲಿನಲ್ಲಿಯೂ ಕೂಡ fluoride ಇದೆ.

ಉಪಾಧ್ಯಕ್ಷರು: Repeat ಮಾಡಬೇಡಿ, ಆಯಿತು ಬಿಡಿ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ: ಆದ್ದರಿಂದ ಇವತ್ತು ಸಚಿವರು ಇಲ್ಲೇ ಇದ್ದಾರೆ. ದಯಮಾಡಿ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ತಾತ್ಕಾಲಿಕವಾಗಿ ಬೋರ್‌ವೆಲ್‌ಗಳನ್ನು ಬಿಟ್ಟರೆ ಪರ್ಯಾಯವಾಗಿ ನಮಗೆ ಬೇರೇನೂ ಇಲ್ಲ. ಡಿಸೆಂಬರ್‌ನಲ್ಲಿ ನಮಗೆ ಕುಡಿಯಲಿಕ್ಕೆ ನೀರು ಸಾಕಾಗುತ್ತಿಲ್ಲ. ಇನ್ನು ಜನವರಿ, ಫೆಬ್ರವರಿ, ಮಾರ್ಚ್‌ನಲ್ಲಿ ನಾವೆಲ್ಲರೂ ಇವತ್ತು ಗ್ರಾಮಗಳಲ್ಲಿ ಇದ್ದೇವೆ. ನಮ್ಮನ್ನೆಲ್ಲಾ ಯಾವಾಗ ಓಡಿಸುತ್ತಾರೋ ಗೊತ್ತಿಲ್ಲ. ಬಂಗಾರಪೇಟೆ ನಗರದಲ್ಲಿ ಎರಡು ತಿಂಗಳುಗಳಿಗೊಮ್ಮೆ ಅಂದರೆ 60 days ಗೆ ನೀರು ಬರುತ್ತಿದೆ. ಇದಕ್ಕೆ ಸಂಬಂಧಪಟ್ಟ ಸಚಿವರಲ್ಲಿ ನಾನು ನೂರು ಸಾರಿ ಮನವಿ ಮಾಡಿದ್ದೇನೆ. ಬಂಗಾರಪೇಟೆಯಲ್ಲಿ ಕುಡಿಯಲಿಕ್ಕೆ ನೀರಿಲ್ಲ. ಎರಡು

ತಿಂಗಳಿಗೊಮ್ಮೆ ನೀರು ಕೊಡುತ್ತಿದ್ದೇವೆ. ನಿಮಗೆ ಕೈಮುಗಿಯುತ್ತೇವೆ. ದಯಮಾಡಿ ವಿಶೇಷ ಅನುದಾನ ಕೊಡಿ ಎಂದು ಕೇಳಿದೆವು, ಅವರು ಕೊಡಲಿಲ್ಲ. ಮೊದಲು ನಮ್ಮ ಮುಖ್ಯಮಂತ್ರಿಗಳು ಬಂದರು, ಇಡೀ ರಾಜ್ಯಕ್ಕೆ ಬಂಗಾರಪೇಟೆ ತಾಲ್ಲೂಕಿನ ಕೊಡುಗೆ ವಿಶೇಷವಾಗಿದ್ದರೂ ಕೂಡ ಬಂಗಾರಪೇಟೆಗೆ ಏನಾದರೂ ಕೂಡ ವ್ಯವಸ್ಥೆ ಮಾಡಲಿಕ್ಕೆ ಯಾರೂ ಮನಸ್ಸು ಮಾಡುತ್ತಿಲ್ಲ. ಹಾಗಾಗಿ ಇವತ್ತು ಸರ್ಕಾರಕ್ಕೆ ತಮ್ಮ ಮೂಲಕ ಮನವಿ ಮಾಡುತ್ತೇನೆ. ಬಂಗಾರಪೇಟೆ ತಾಲ್ಲೂಕು, ನಗರಕ್ಕೆ ಕುಡಿಯುವ ನೀರಿಗಾಗಿ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕು. ಎರಡನೆಯದು ಇವತ್ತೇನು ಯೋಜನೆಗಳಿವೆ, ಆ ಯೋಜನೆಗಳನ್ನು ತೆಗೆದುಕೊಳ್ಳಬೇಕು. ಇಲ್ಲದೇಹೋದರೆ ನಮಗೆ ಬೇರೆ ದಾರಿ ಇಲ್ಲ. ಇದಕ್ಕೇನು ಪರಿಹಾರ ಸಿಗಲಿಲ್ಲವೆಂದರೆ ನಮ್ಮ ಜನರ ಸಮೇತ ಧರಣಿ ಮಾಡುವ ಪರಿಸ್ಥಿತಿ ಉದ್ಭವವಾಗುತ್ತದೆ. ನಮಗೆ ಬೇರೆ ದಾರಿಯಿಲ್ಲ. ನಮ್ಮ ಜನರು ನಮ್ಮನ್ನು ಬಿಡುತ್ತಿಲ್ಲ. ದಯಮಾಡಿ ಈ ಕುಡಿಯುವ ನೀರಿಗೆ ಹೆಚ್ಚಿನ ಒತ್ತನ್ನು ಕೊಟ್ಟು ಎರಡೂ ಜಿಲ್ಲೆಗಳಿಗೆ ಸಚಿವರು ಹಣ ಬಿಡುಗಡೆ ಮಾಡಬೇಕೆಂದು ಹೇಳುತ್ತೇವೆ. ನಮ್ಮ ಜಿಲ್ಲೆಯಲ್ಲಿರುವ ಅಧಿಕಾರಿಗೆ ಬಹಳ ನಿರ್ಲಕ್ಷ್ಯ ಇದೆ. ನಮ್ಮ ಜಿಲ್ಲೆಯಲ್ಲಿರುವ Executive Engineer ಅವರಿಗೆ ನಮ್ಮ ಕಷ್ಟ ಅರ್ಥವಾಗುವುದಿಲ್ಲ. ಆದ್ದರಿಂದ ಒಳ್ಳೆಯ ಉತ್ತಮ ಅಧಿಕಾರಿಗಳನ್ನು ನೀರಾವರಿ ಇಲಾಖೆಗೆ ಕೊಡಬೇಕೆಂದು ಹೇಳಿ ತಮ್ಮ ಮೂಲಕ ಮನವಿ ಮಾಡಿ ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಅರ್ಪಿಸುತ್ತೇನೆ.

ಉಪಾಧ್ಯಕ್ಷರು: ಆಯಿತು. ಪಿಳ್ಳಮುನಿಶಾಮಪ್ಪನವರೆ 5 ನಿಮಿಷ ಮಾತನಾಡಿ ಮುಗಿಸಿ.

ಶ್ರೀ ಪಿಳ್ಳಮುನಿಶಾಮಪ್ಪ (ದೇವನಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಬಯಲು ಸೀಮೆಗೆ ಒಳಪಡುವಂಥ 50–60 ತಾಲ್ಲೂಕುಗಳಲ್ಲಿ ಕೋಲಾರ, ಬೆಂಗಳೂರು ಗ್ರಾಮಾಂತರ ಪ್ರದೇಶ ಬರುತ್ತದೆ.

ಉಪಾಧ್ಯಕ್ಷರು: ಈಗ ಬೇರೆಯವರು ಪ್ರಸ್ತಾಪ ಮಾಡಿರುವ ವಿಷಯಗಳನ್ನು ಹೇಳಬೇಡಿ, ನೀವು ಹೊಸ ವಿಷಯಗಳಿದ್ದರೆ ಹೇಳಿ.

ಶ್ರೀ ಪಿಳ್ಳಮುನಿಶಾಮಪ್ಪ: ಆಯಿತು. ನಾನು ಏನಾಗಬೇಕೆಂದು ಹೇಳುತ್ತೇನೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಕೂಡ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಹೊರತಾಗಿಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಇದೆ. ಇವತ್ತು ಅಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಇದೆ ಎಂದು ಹೇಳಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬರುವಂಥ ದೇವನಹಳ್ಳಿ ತಾಲ್ಲೂಕಿನಲ್ಲಿ 1000, 1500 ಅಡಿ ಆಳಕ್ಕೆ ನೀರು ಹೋಗಿದೆ. ಅಲ್ಲಿರುವ ರೈತರು ಬೋರ್‌ವೆಲ್ ಹಾಕಿ ಅಲ್ಲಿ ಬರುವಂಥ ನೀರನ್ನು ನಮ್ಮ airport ಗೆ ನೀರನ್ನು ಕೊಡುವಂಥ ಕೆಲಸ ಮಾಡುತ್ತಿದ್ದಾರೆ. ಅವರ ಜೀವನೋಪಾಯಕ್ಕೋಸ್ಕರ ಮಾರಾಟ ಮಾಡುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಅದೇ ರೀತಿ ಇವತ್ತು ಯಲಹಂಕದಿಂದ ಕೊಳಚೆ ನೀರನ್ನು ತೆಗೆದುಕೊಂಡು ಹೋಗಿ ಏರ್‌ಪೋರ್ಟ್‌ಗೆ ಬಿಟ್ಟು ಅಲ್ಲಿರುವ lawn and toilets ಗೆಲ್ಲಾ ವ್ಯವಸ್ಥೆ ಮಾಡುತ್ತಿದ್ದೇವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೂ ಕೂಡ ಬಹಳಷ್ಟು ಕೆಟ್ಟ ಪರಿಸ್ಥಿತಿ ಇರುವಂಥ ಈ ಒಂದು ಸಂದರ್ಭದಲ್ಲಿ ಯಾವರೀತಿ ಬಯಲುಸೀಮೆಯಲ್ಲಿರುವ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಿರಬಹುದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರಬಹುದು, ಇದಕ್ಕೆ ಏನು ಮಾಡಬೇಕೆಂದು ಯೋಚನೆ ಮಾಡುವುದಾದರೆ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ DPAP ಎಂಬ ಯೋಜನೆ ಏನು implement ಆಗಿತ್ತು. ಅಲ್ಲಿರತಕ್ಕಂಥ Agricultural Department, Sericulture Department ಮತ್ತು ಅರಣ್ಯ ಇಲಾಖೆ ಏನು ಸಾಮಾಜಿಕ ಅರಣ್ಯ ಇವೆಲ್ಲಾ ಒಟ್ಟಿಗೆ ಸೇರಿ ವಿಶೇಷವಾಗಿ ಗಿಡ ನೆಡುವಂಥ ಕೆಲಸವನ್ನು ಮಾಡುತ್ತಿದ್ದರು. ಅವತ್ತು ರೆಬೆಲ್ ಚೆಕ್ಸ್ ಮತ್ತು ಚೆಕ್‌ಡ್ಯಾಂಗಳನ್ನು ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಹೆಚ್ಚಿನ ನೀರನ್ನು ಸಂಗ್ರಹ ಮಾಡುವಂಥ ವ್ಯವಸ್ಥೆ ಆಗುತ್ತಿತ್ತು. ಆದರೆ ಇವತ್ತು ನಮ್ಮ ಬೃಹತ್ ನೀರಾವರಿಯಿಂದ ಬೇರೆ ಜಿಲ್ಲೆಗಳಿಗೆ ಬಹಳಷ್ಟು ನೀರನ್ನು ಕೊಡುವಂಥ ಕೆಲಸ ಸರ್ಕಾರ ಬಂದಾಗಿನಿಂದ

ಇವತ್ತಿನವರೆಗೆ ಮಾಡಿಕೊಂಡು ಬಂದಿದೆ. ಸ್ವಾತಂತ್ರ್ಯ ಬಂದಾಗಿನಿಂದ ಮಾಡಿಕೊಂಡು ಬಂದಿದ್ದೇವೆ. ಆದರೆ ನಮ್ಮ ಬಯಲುಸೀಮೆಗೆ ಕಡಿಮೆ ಪ್ರಮಾಣದಲ್ಲಿ ಹಣ ವಿನಿಯೋಗಿಸುವುದರಿಂದ ಸಣ್ಣ ನೀರಾವರಿ ಇಲಾಖೆಯಿಂದ ಎರಡು ಮೂರು ಕೆಲಸಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡು ವರ್ಷಗಳ ಹಿಂದೆ ಅರ್ಕಾವತಿ ಪುನಶ್ಚೇತನ ಎಂದು ಏನು ಮಾಡಿದರೋ ಅದರಿಂದ ಸುಮಾರು ಕೆರೆಗಳು, ರಾಜಕಾಲುವೆಗಳು, ಸಣ್ಣ ಸಣ್ಣ ಕಾಲುವೆಗಳಿತ್ತು ಅದನ್ನು ಶುದ್ಧೀಕರಣಗೊಳಿಸುವುದರಿಂದ ಕೆರೆಗಳಿಂದ ಕೆರೆಗಳಿಗೆ ಬಹಳಷ್ಟು ನೀರು ಹೋಗುವಂಥ ವ್ಯವಸ್ಥೆಯಾಗುತ್ತಿತ್ತು. ಅರ್ಕಾವತಿ ಪುನಶ್ಚೇತನ ಯಾವರೀತಿ ಮಾಡಿದರೋ ಅದೇರೀತಿ ನಮ್ಮ MI ಯಿಂದ ದೊಡ್ಡ ದೊಡ್ಡ ಕೆರೆಗಳು ಏನಿವೆ, ಅದರಿಂದ ಸಣ್ಣ ಸಣ್ಣ ಕೆರೆಗಳಿಗೆ ನೀರು ತುಂಬಿಸಿ ದೊಡ್ಡ ದೊಡ್ಡ ಕೆರೆಗಳಿಗೆ ನೀರು ತುಂಬುವ ಕೆಲಸವಾದರೆ ಶಾಶ್ವತವಾಗಿ ಆ ಭಾಗದಲ್ಲಿರುವ ಎಲ್ಲಾ ಕೊಳವೆಬಾವಿಗಳಿಗೆ ಉಪಯೋಗವಾಗುತ್ತದೆ. ಎರಡನೆಯದಾಗಿ ವೃಷಭಾವತಿ ನದಿ ನೀರು ಬೆಂಗಳೂರಿನಲ್ಲಿ ಹರಿದು ಬೇರೆ ಕಡೆಗೆ ಸೇರುತ್ತದೆ, ಆ ನೀರು ಕೊಳಚೆ ನೀರು ಇರಬಹುದು, ಅದನ್ನು ಮೊದಲನೇ ಹಂತದಲ್ಲಿ ಶುದ್ಧೀಕರಿಸಿ ನಮ್ಮ ಕೆರೆಗಳಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೇವನಹಳ್ಳಿ, ಹೊಸಕೋಟೆ, ದೊಡ್ಡಬಳ್ಳಾಪುರ, ನೆಲಮಂಗಲ ಮತ್ತೆ ನಮ್ಮ ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಆ ರೀತಿ ಇರತಕ್ಕಂಥ town city limitನಲ್ಲಿರುವಂಥ ಕೊಳಚೆ ನೀರನ್ನು ಇವತ್ತು ಕೆರೆಗಳಿಗೆ ಬಿಡುವಂಥ ಕೆಲಸವಾಗಬೇಕು. ಅದೇರೀತಿ ಪ್ರತಿ ರಾಜಕಾಲುವೆಗಳನ್ನು ಸರಿಮಾಡಿದರೆ ಬಹಳಷ್ಟು ಉಪಯೋಗವಾಗುವಂಥ ಕೆಲಸಗಳಾಗುತ್ತವೆ. ಏಕೆಂದರೆ ನಮ್ಮ ಅರ್ಕಾವತಿಯ ಪುನಶ್ಚೇತನ ಮಾಡಿದ್ದರಿಂದ ನಂದಿ ಬೆಟ್ಟದಿಂದ ಬರುವ ಕೆರೆಗಳಲ್ಲಿ 36 ಕೆರೆಗಳು ತುಂಬಿವೆ. ಪಂಡಿತಪುರವಾದ ನನ್ನ ಊರಿನಲ್ಲಿ 22 ವರ್ಷಗಳಿಂದ ಕೋಡಿ ಹೋಗಿರಲಿಲ್ಲ, ಕೋಡಿ ಹೋಗಿದೆ. ಅಂಥ ಕೆಲಸಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಇರುವ ನಮ್ಮ ದೇವನಹಳ್ಳಿಯಲ್ಲಿ ಇವತ್ತು ಕಟ್ಟಡಗಳು ಜಾಸ್ತಿಯಾಗುತ್ತಿವೆ. Real Estate ದಂಧೆ ಜಾಸ್ತಿಯಾಗುತ್ತಿದೆ.

ಆ ಕಾರಣಕ್ಕಾಗಿ ಕಾವೇರಿ ನೀರನ್ನು ನಮ್ಮ ದೇವನಹಳ್ಳಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷರು: ಆಯಿತು. ರಾಜಣ್ಣನವರು ಮಾತನಾಡಿ.

ಶ್ರೀ ಎಂ. ರಾಜಣ್ಣ (ಶಿಡ್ಲಘಟ್ಟ): ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಮ್ಮೆಲ್ಲ ಶಾಸಕ ಮಿತ್ರರು ವಿಷಯವನ್ನು ತಿಳಿಸಿಕೊಟ್ಟಿದ್ದಾರೆ. ಇಡೀ ರಾಷ್ಟ್ರಕ್ಕೆ ರೇಷ್ಮೆ ಕೊಟ್ಟಂಥ ಕೀರ್ತಿ ನಮ್ಮ ಶಿಡ್ಲಘಟ್ಟ ವಿಧಾನಸಭೆ ಕ್ಷೇತ್ರಕ್ಕೆ ಸೇರುತ್ತದೆ. ಇವತ್ತು ಎಲ್ಲಾ ಇದ್ದರೂ ಕುಡಿಯುವ ನೀರಿನ ಅಭಾವ ಇದೆಯೆಂದು ಏಕೆ ಹೇಳುತ್ತಿದ್ದೇವೆಂದರೆ ನಮಗೆ ಯಾವುದೇ ನದಿಯಿಲ್ಲ, ನಾಲೆಯಿಲ್ಲ, ಕೇವಲ ಬೋರ್‌ವೆಲ್‌ನಿಂದ 1500 ಅಡಿಯವರೆಗೆ ಕೊರೆದು ಹನಿ ಹನಿ ನೀರನ್ನು ಉಪಯೋಗಿಸಿಕೊಂಡು ಒಂದು ಕಡೆ ರೇಷ್ಮೆ, ಇನ್ನೊಂದು ಕಡೆ ಹೈನುಗಾರಿಕೆ ಮಾಡುತ್ತಿದ್ದೇವೆ. ಇವತ್ತು ಕುಡಿಯುವ ನೀರಿಗೆ ಹಾಹಾಕಾರ ಬಂದಿದೆ. ಕುಡಿಯುವ ನೀರಿನ ಹಾಹಾಕಾರ ತಪ್ಪಿಸುವಂತೆ ಮೂರು ಜಿಲ್ಲೆಗಳ ಶಾಸಕರಾದ ನಾವು ಘನ ಸರ್ಕಾರವನ್ನು ಕೈಮುಗಿದು ಕೇಳಿಕೊಳ್ಳುತ್ತಿದ್ದೇವೆ. ಅದಕ್ಕೆ ಹಲವಾರು ಯೋಜನೆಗಳಿವೆ ಎಂಬ ಬಗ್ಗೆ ಇದುವರೆಗೆ ನಮ್ಮ ಸ್ನೇಹಿತರು ಹೇಳಿದ್ದಾರೆ. ಒಂದು ಕಡೆ ಎತ್ತಿನಹೊಳೆ ನಡೆಯುತ್ತಿದೆ, ಇನ್ನೊಂದು ಕಡೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಕೊಳಚೆ ನೀರನ್ನು ಶುದ್ಧೀಕರಣ ಮಾಡಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಕೆರೆಗಳನ್ನು ತುಂಬಿಸುವುದಿದೆ. ಅದರ ಜೊತೆಗೆ ಕುಡಿಯುವ ನೀರು ಹಲವಾರು ವರ್ಷಗಳಿಗೆ ಬೇಕಾಗುತ್ತದೆ. ಇವತ್ತು ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಲ್ಲಿ ನಾನು ತಮ್ಮ ಮೂಲಕ ಮನವಿ ಮಾಡುವುದಿಷ್ಟೇ. ಇವತ್ತು ಅಲ್ಪ ಸ್ವಲ್ಪ ನೀರು ಸಿಕ್ಕಿದೆ. ಕೊಳವೆಬಾವಿಗಳನ್ನು ಹಾಕುತ್ತಿದ್ದೇವೆ. ಆದರೂ ಸಹ ಸರ್ಕಾರ ತನ್ನದೇ ಆದ ಸಮಸ್ಯೆಗಳನ್ನು ಇಟ್ಟು ಇವತ್ತು ನಮಗೆ ತಾತ್ಕಾಲಿಕವಾಗಿ ಬೋರ್‌ವೆಲ್‌ಗಳಲ್ಲಿ ಏನು ನೀರು

ಬರುತ್ತದೋ ಅದಕ್ಕೆ ಸಮಯಕ್ಕೆ ಸರಿಯಾಗಿ ವಿದ್ಯುಚ್ಛಕ್ತಿ ಕೊಡುತ್ತಿಲ್ಲ. ಪಂಪ್ ಮೋಟಾರ್ ಕೊಡುತ್ತಿಲ್ಲ. ಹಲವಾರು ಕಾರಣಗಳಿಂದ ಇವತ್ತು ಬೋರ್‌ವೆಲ್ ಕೊರೆಸಿ ನೀರು ಬಿದ್ದರೆ ಜನ ತೃಪ್ತಿಪಡುತ್ತಾರೆ. ಆ ನೀರು ಆಚೆ ತೆಗೆಯಬೇಕಾದರೆ ಮೂರು ತಿಂಗಳು, ಆರು ತಿಂಗಳ ಸಮಯ ಆಗುತ್ತದೆ. ಒಂದು ಸಾರಿ KDP review meeting ನಲ್ಲಿ ಸಹ ಜನ ಮಂತ್ರಿಗಳೊಂದಿಗೆ ಚರ್ಚೆ ಮಾಡಿದ್ದಾರೆ. ಆ ಒಂದು ವ್ಯವಸ್ಥೆ ಇದುವರೆಗೂ ನಮ್ಮ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸರಿಪಡಿಸಲಿಲ್ಲ. ಆದರೆ ನಾನು ಈ ಮುಖೇನ ಘನ ಸರ್ಕಾರಕ್ಕೆ ಮನವಿ ಮಾಡುವುದಿಷ್ಟೇ, ಕುಡಿಯುವ ನೀರಿಗಾಗಿ ಯಾವುದಾದರೂ ಒಂದು ವ್ಯವಸ್ಥೆಯನ್ನು ಅತಿ ಶೀಘ್ರವಾಗಿ ನಮ್ಮ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯಲ್ಲಿ ಮಾಡಬೇಕು. ಇವತ್ತು ಎತ್ತಿನಹೊಳೆ ಇರಬಹುದು ಅಥವಾ ಕೊಳಚೆ ನೀರು ಇರಬಹುದು ಅಥವಾ ಮೇಕೆದಾಟು ಇರಬಹುದು. ಮಂತ್ರಿಗಳು ಮೇಕೆದಾಟಿನ ಬಗ್ಗೆ ದಿನಬೆಳಗಾದರೆ ಚರ್ಚೆ ಮಾಡುತ್ತಿದ್ದಾರೆ. ಅತೀ ಶೀಘ್ರದಲ್ಲಿ ಈ ಒಂದು ಕಾರ್ಯಕ್ರಮವನ್ನು ತರಿಸಿ ನಮ್ಮ ಜನರಿಗೆ ಕುಡಿಯುವ ನೀರಿಗೆ, ಕೃಷಿ ಮಾಡಲಿಕ್ಕೆ ಇರುವ ನೀರಿನ ಹಾಹಾಕಾರವನ್ನು ನೀಗಿಸಲಿಕ್ಕೆ ವ್ಯವಸ್ಥೆ ಮಾಡಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಜಿ. ಮಂಜುನಾಥ (ಮುಳಬಾಗಿಲು): ಮಾನ್ಯ ಉಪಾಧ್ಯಕ್ಷರೆ, ನಮ್ಮ ಮುಳಬಾಗಿಲು ತಾಲ್ಲೂಕಿನಲ್ಲಿ ಮಜರಾಗ್ರಾಮಗಳು ಸೇರಿದರೆ 418 villages ಬರುತ್ತವೆ. ಅದರಲ್ಲಿ 83 villagesಗೆ ಟ್ಯಾಂಕರ್ ಮುಖಾಂತರವಾಗಿ ಕುಡಿಯುವುದಕ್ಕೆ ನೀರು ಕೊಡುತ್ತಿದ್ದೇವೆ. 9 ಗ್ರಾಮಗಳಿಗೆ ರೈತರ ಬೋರ್‌ವೆಲ್‌ನಿಂದ ನೀರು ಕೊಡಲಾಗುತ್ತಿದೆ. ಪರಿಸ್ಥಿತಿ ಏನಾಗಿದೆ ಎಂದರೆ ಎರಡು ಗಂಟೆ ಗ್ರಾಮಗಳಿಗೆ ಕೊಡುವುದು, ಇನ್ನು ಎರಡು ಗಂಟೆ ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುವಂತಹ ಪರಿಸ್ಥಿತಿಗೆ ಬಂದಿದ್ದೇವೆ. ನಮಗೆ ಯಾವುದೇ ನೀರಾವರಿ ಯೋಜನೆಗಳಿಲ್ಲ, ನದಿಗಳಿಲ್ಲ ಮತ್ತು ಯಾವುದೇ ಕೆರೆಯಲ್ಲಿಯೂ ಸಹ ಒಂದು ಹನಿ ನೀರಿಲ್ಲ. ನಮ್ಮ ಮುಳಬಾಗಿಲು ತಾಲ್ಲೂಕಿನ

ಯಾವುದೇ ಕೆರೆಯಲ್ಲಿಯೂ ಸಹ ಒಂದು ದಿವಸಕ್ಕೆ ಆಗುವಷ್ಟು ಸಹ ನೀರಿಲ್ಲ. ಆದರೆ, ಇವತ್ತು ಜನರ ಪರಿಸ್ಥಿತಿ ಏನಾಗಿದೆ ಎಂದರೆ, ನಾವು ವ್ಯವಸಾಯಕ್ಕೆ ಕೇಳುತ್ತಿಲ್ಲ, ಇಲ್ಲವೇ ಬೇರೆ ಯಾವುದೇ ಉದ್ದೇಶಕ್ಕೆ ನೀರನ್ನು ಕೇಳುತ್ತಿಲ್ಲ. ಕೇವಲ ಕುಡಿಯುವುದಕ್ಕೋಸ್ಕರ ಮಾತ್ರ ನಾವು ನೀರನ್ನು ಕೇಳುತ್ತಿದ್ದೇವೆ. ಈ ವರ್ಷ ನಮ್ಮ ತಾಲ್ಲೂಕಿನಲ್ಲಿ 27 ಇಂಚು ಮಳೆ ಬರುತ್ತದೆ ಎಂಬ ಮಾಹಿತಿಯನ್ನು ಹವಾಮಾನ ಇಲಾಖೆಯ ಮಾಹಿತಿಯನ್ನು ತೆಗೆದುಕೊಂಡಿದ್ದೇವೆ. ಆದರೆ, ಮಳೆ ಬಂದಿರುವುದು 12 ಇಂಚು ಮಾತ್ರ. ಇವತ್ತು 1,200 ಎಕರೆ ಪ್ರದೇಶದಲ್ಲಿಯ ಮಾವಿನ ಗಿಡಗಳನ್ನು ಅದಾಗಿಯೇ ಅದು ಒಣಗಿ ಹೋಗಿರುವುದರಿಂದ ಅದನ್ನು ಕಡಿದು ಬಿಸಾಕಿದ್ದಾರೆ. ತೆಂಗಿನ ಮರಗಳು automatic ಆಗಿ ಒಣಗಿ ಹೋಗಿ ಅದಾಗಿ ಅದೇ ಬಿದ್ದು ಹೋಗಿವೆ. ಇದ್ಯಾವುದಕ್ಕೂ ನಮ್ಮ ಬೆಳೆ ಒಣಗಿ ಹೋಗಿದೆ, ಬೆಳೆಯಿಲ್ಲ ಎನ್ನುವುದಕ್ಕೋಸ್ಕರ ನಾವು ನೀರನ್ನು ಕೇಳುತ್ತಿಲ್ಲ. ಕೇವಲ ನೀರು ಕುಡಿಯುವುದಕ್ಕೋಸ್ಕರ ಕೇಳುತ್ತಿದ್ದೇವೆ. 82 ಹಳ್ಳಿಗಳಿಗೆ ಟ್ಯಾಂಕರ್ ಮುಖಾಂತರ ನೀರನ್ನು ಕೊಡುತ್ತಿದ್ದೇವೆ. ಅವುಗಳಲ್ಲಿ 9 ಹಳ್ಳಿಗಳಿಗೆ ರೈತರ ಬೋರ್‌ವೆಲ್ ಮುಖಾಂತರ ಕೊಡುತ್ತಿದ್ದೇವೆ. ಅದೇ ರೀತಿ ಪ್ರತಿನಿತ್ಯ ನಾವು ಬೋರ್‌ವೆಲ್‌ಗಳನ್ನು ಕೊರೆಯುತ್ತಲೇ ಇದ್ದೇವೆ. ಬೋರ್‌ವೆಲ್‌ಗಳು ವಿಫಲವಾಗುತ್ತಿವೆ. ಇವತ್ತು ಕೂಡ ಪೇಪರ್‌ನಲ್ಲಿ ಬಂದಿದೆ. 4 ಹಳ್ಳಿಗಳಲ್ಲಿ ನೀರು ಬಂದಿಲ್ಲವೆಂದು ಮುಷ್ಕರ ಮಾಡಿದ್ದಾರೆ, 4 ಗ್ರಾಮ ಪಂಚಾಯಿತಿ ಕಛೇರಿಗಳ ಮುಂದೆ ಗ್ರಾಮಗಳಲ್ಲಿ ನೀರಿಲ್ಲವೆಂದು ಮುಷ್ಕರ ಮಾಡಿದ್ದಾರೆ. 'ಕರಡಿಗಾನಳ್ಳಿ' ಎಂಬ ಒಂದು ಹಳ್ಳಿಯಲ್ಲಿ 8 ಬೋರ್‌ವೆಲ್ ಹಾಕಿದ್ದೇವೆ, ಆದರೆ ಒಂದೇ ಒಂದು ಬೋರ್‌ವೆಲ್‌ನಲ್ಲಿಯೂ ಸಹ ನೀರು ಸಿಕ್ಕಿಲ್ಲ. 1,000 ಅಡಿ, 1,200, 1,300 ಅಡಿಯವರೆಗೆ ಬೋರ್‌ವೆಲ್ ಕೊರೆದಿದ್ದೇವೆ. ನಮ್ಮ ಕರಡಿಗಾನಳ್ಳಿಗೆ 4 ವರ್ಷಗಳಿಂದ ಇದುವರೆಗೂ ನೀರು ಕೊಡುವುದಕ್ಕೆ ಸಾಧ್ಯವಾಗಿಲ್ಲ. ರೈತರ ಬೋರ್‌ವೆಲ್‌ನಿಂದ ಹಾಗೂ ಟ್ಯಾಂಕರ್‌ಗಳಿಂದ ಈ ರೀತಿ ಅವರಿಗೆ adjust ಮಾಡಿ ಕೊಡುತ್ತಿದ್ದೇವೆ. ನಮಗೆ ಏನೆಂದರೆ, ಆದಷ್ಟು ಬೇಗ ನೀರು ಕೊಡುತ್ತೇವೆ, project ಮಾಡುತ್ತಿದ್ದೇವೆ, DPR ಮಾಡುತ್ತಿದ್ದೇವೆ, ಎನ್ನುವುದಕ್ಕಿಂತ

ಮೊದಲನೆಯದಾಗಿ ಇವತ್ತು ಏನು ಛಲಘಟ್ಟ valley, ಎಲೆಮಲ್ಲಪ್ಪ ಕೆರೆಯ wastage ನೀರು ಏನಿದೆ, ಅದಕ್ಕೆ tertiary treatment ಮಾಡಿ ಆ ನೀರನ್ನು ಇವತ್ತು ನಮ್ಮ ಕೋಲಾರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ, ಕೆರೆಗಳಿಗೆ ಬಿಟ್ಟು ಅದರಿಂದ ಕುಡಿಯುವ ನೀರನ್ನು supply ಮಾಡುತ್ತೇವೆಂದು ಏನು ಇವತ್ತು project DPR ಆಗಿದೆ, ಅದು ಇನ್ನೂ ಸ್ವಲ್ಪ ವಿಳಂಬವಾಗುತ್ತದೆ ಎಂದು ತಿಳಿದು ಬಂದಿದೆ. ನಮ್ಮ ವೇಮಗಲ್ ಮತ್ತು ನರಸಾಪುರ ಕೈಗಾರಿಕಾ ಪ್ರದೇಶಕ್ಕೆ ಕೈಗಾರಿಕಾ ಇಲಾಖೆಯಿಂದ ಈಗಾಗಲೇ DPR ಮಾಡಿ ಪೈಪ್‌ಲೈನ್ ಕೆಲಸವನ್ನೂ ಪ್ರಾರಂಭ ಮಾಡುತ್ತಿದ್ದಾರೆ. ಅದರ ಜೊತೆಯಲ್ಲಿ ಇದನ್ನೂ ಸೇರಿಸಿಕೊಂಡು ಅದರ ಜೊತೆ ಅತೀ ಶೀಘ್ರದಲ್ಲಿ ಕೆಲಸ ಮಾಡಿ ಕೆರೆಗಳಿಗೆ ನೀರು ತುಂಬಿಸಿದರೆ ತುಂಬಾ ಉತ್ತಮವಾದಂತಹ ಕೆಲಸವಾಗುತ್ತದೆ. ನಮ್ಮ ಭಾಗದಲ್ಲಿ ಮಳೆ ಕೂಡ ಬಂದಿಲ್ಲ. ಇವತ್ತು fluroide ನೀರನ್ನು ಕುಡಿದು ಜನಗಳಿಗೆ ಕೈಕಾಲು ನೋವು ಬಂದು ನಡೆಯುವುದಕ್ಕಾಗದಂತಹ ಪರಿಸ್ಥಿತಿಯಲ್ಲಿದ್ದಾರೆ. ತಮ್ಮೆಲ್ಲರಲ್ಲಿ ನಾವು ವ್ಯವಸಾಯಕ್ಕೆ ನೀರು ಕೇಳುತ್ತಿಲ್ಲ. ಕುಡಿಯುವುದಕ್ಕೆ ನೀರು ಕೇಳುತ್ತಿದ್ದೇವೆ. ಆ ಕುಡಿಯುವ ನೀರನ್ನು ಅತೀ ಶೀಘ್ರದಲ್ಲಿಯೇ ಎಲ್ಲಾ ಮಂತ್ರಿಗಳೂ ಸೇರಿ ಇಡೀ ನಮ್ಮ ಸದನದಲ್ಲಿ ಎಷ್ಟು ಜನ members ಇದ್ದೇವೆ ಎಲ್ಲರಿಗೂ ನಾವು ಕೇಳುವುದು ಇಷ್ಟೆ. ನಮಗೆ ನೀರು ಕೊಡಿ ಎಂದು ಕೇಳುತ್ತಿದ್ದೇವೆ. ಎಲ್ಲರೂ ಸಹಕರಿಸಿ ನಮಗೆ ಆದಷ್ಟುಬೇಗ ಕುಡಿಯುವುದಕ್ಕೆ ನೀರು ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ): ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಈ ಮೂರು ಜಿಲ್ಲೆಗಳ ಎಲ್ಲಾ ಶಾಸಕರು ತಮ್ಮ ನೇತೃತ್ವದಲ್ಲಿ ಸಭೆ ಸೇರಿ ಈ ವಿಷಯವನ್ನು 69ರಡಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ಮನವಿ ಮಾಡಿಕೊಂಡೆವು. ಬಹಳ ಜನ ಮೊದಲನೇ ಸಲ ಆರಿಸಿ ಬಂದಿದ್ದಾರೆ. ಅವರಿಗೆ ಆತಂಕವಾಗಿದೆ. ಕೆಲವು ವಿಚಾರಗಳಲ್ಲಿ ಸ್ವಲ್ಪ ಆಚೆ-ಈಚೆ ಆಗುತ್ತದೆ. ನಾನು ಪುನಃ ಪುನಃ repetitions ಮಾಡಿ ಸದನದ ಸಮಯವನ್ನು ಹಾಳು

ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿಯ ಮಂತ್ರಿಗಳು ಇಲ್ಲಿ ಇದ್ದಾರೆ. Minor Irrigation Minister ಇಲ್ಲಿಯೇ ಇದ್ದಾರೆ. ಈ ಭಾಗದಲ್ಲಿ ಕುಡಿಯುವ ನೀರಿಗೆ ನಾವು ಇವತ್ತು ಎದುರಿಸುತ್ತಿರುವಂತಹ ಸಮಸ್ಯೆ ಏನೆಂದರೆ ಸಾಮಾನ್ಯವಾಗಿ ಸದನದ ಬೇರೆ ಸದಸ್ಯರಿಗೆ ಅಥವಾ ಗ್ಯಾಲರಿಯಲ್ಲಿ ಇರತಕ್ಕಂತಹವರಿಗೆ ಸ್ವಲ್ಪ ಉತ್ಪ್ರೇಕೆ ಏನೋ ಅನಿಸುತ್ತದೆ. ನಿಜವೆಂದು ಯಾರಿಗೂ ಅನಿಸುವುದಿಲ್ಲ. ಕಾರಣ ಆ ತರಹದ ಸನ್ನಿವೇಶವಿದೆ. ನಾನು ಆ ಇತಿಹಾಸಕ್ಕೆ ಹೋಗುವುದಿಲ್ಲ. ನಾವು ಒಂದು ಕಾಲದಲ್ಲಿ ಸಮೃದ್ಧರಾಗಿ ಇದ್ದೆವು. ಅನೇಕ ಕಾರಣಗಳಿಂದಾಗಿ ಇವತ್ತು ಈ ದುಸ್ಥಿತಿಗೆ ಬಂದು ತಲುಪಿದ್ದೇವೆ. ಕುಡಿಯುವ ನೀರಿಗೆ ಅಥವಾ ಸಣ್ಣದಾಗಿ ನಾವು ಕೃಷಿ ಮಾಡಬೇಕಾದರೆ ಬೋರ್‌ವೆಲ್ ಮುಖಾಂತರ ಬರತಕ್ಕಂತಹ ನೀರನ್ನು ಬಿಟ್ಟು ಬೇರೆ ನೀರಿನ ಆಸರೆ ನಮಗೆ ಇಲ್ಲವೇ ಇಲ್ಲ. ಇಂತಹ source of water ಇದೆ through which we can survive ಎನ್ನುವುದಕ್ಕೆ ಯಾವ್ಯಾವುದೂ ಇಲ್ಲ. ಈಗ ಒಂದು ಊರು ತಮ್ಮ ಕ್ಷೇತ್ರದಲ್ಲಿಯೇ ಇರುತ್ತದೆ ಎಂದು ಇಟ್ಟುಕೊಳ್ಳೋಣ. ಮೂರು ಬೋರ್‌ವೆಲ್‌ಗಳನ್ನು ಹಾಕುತ್ತೇವೆ. ಮೂರು ಬೋರ್‌ವೆಲ್‌ಗಳು fail ಆಗುತ್ತದೆ. ನಿಮ್ಮ ಮುಂದಿನ ನಡೆ ಏನು? ಮೂರು ಬೋರ್‌ವೆಲ್ ಹಾಕಿದೆವು, fail ಆಯಿತು ಎಂದು ಹೇಳಿ ಕೈಕಟ್ಟಿಕೊಂಡು ಕುಳಿತುಕೊಳ್ಳುತ್ತೀರಾ? Alternative ಏನು ಇದೆ ಎಂದು ಹೇಳಿ. ಮೂರು ಬೋರ್‌ವೆಲ್ ಹೋದರೆ ನಿಮಗೆ alternative ಗೆ fourth ಬೋರ್‌ವೆಲ್ ಮಾತ್ರ. Interim arrangement ಗೆ ಪಕ್ಕದಲ್ಲಿ ಎಲ್ಲಾದರೂ ಟ್ಯಾಂಕರ್‌ಗಳಿಂದ ತಂದು 8–10 ದಿವಸ ನೀರನ್ನು ಉಪಯೋಗಿಸಿಕೊಳ್ಳಬಹುದು. ಅವನು ಚೆನ್ನಾಗಿದ್ದಾನಾ? ಅವನೂ ಸಹ ದಾರಿದ್ರ್ಯದಲ್ಲಿಯೇ ಇದ್ದಾನೆ. ಅವನ ಬೋರ್‌ವೆಲ್ ಯಾವಾಗ ಬತ್ತಿ ಹೋಗುತ್ತದೆ ಎಂಬುದು ಗೊತ್ತಿಲ್ಲ. ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ಇವತ್ತು ಹಾಕಿದ ಬೋರ್‌ವೆಲ್ ಇನ್ನು 15 ದಿವಸಕ್ಕೆ ಇರುತ್ತದೆ ಎಂಬ ಗ್ಯಾರಂಟಿ ನಮಗಿಲ್ಲ. ನೀರು ಸಿಗುವುದಿಲ್ಲ. ಸಿಕ್ಕಿದರೆ ಎಷ್ಟು ದಿವಸ ಇರುತ್ತದೆ ಎಂಬ ನಂಬಿಕೆಯಿಲ್ಲ. ನೀರು ಇತ್ತು ಎಂದು ಇಟ್ಟುಕೊಳ್ಳಿ. ಅದು ಕುಡಿಯುವುದಕ್ಕೆ ಯೋಗ್ಯವಲ್ಲ. They are all interlinked. ಬಹುಶಃ ಈ problem, ಈ ತೀವ್ರತೆ

ರಾಜ್ಯದ ಬೇರೆ ಎಲ್ಲಿಯೂ ಇಲ್ಲ. ಇದನ್ನು ನಾವು ಮಾನ್ಯ ಮಂತ್ರಿಗಳಿಗೆ ತಮ್ಮ ಮುಖಾಂತರ, ಸರ್ಕಾರಕ್ಕೆ ಮನವರಿಕೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈಗ ನೀವು ಪರ್ಯಾಯವಾಗಿ ಏನು ಮಾಡಬಹುದು? ಎತ್ತಿಹೊಳೆ, ಛಲಘಟ್ಟ ಇನ್ನೊಂದು ಮತ್ತೊಂದು they are all long time reliefs. Urgent ಗೆ ನಿಮಗೆ ಬೇರೆ ಮಾರ್ಗವಿಲ್ಲವೇ ಇಲ್ಲ. ಈಗ ನಾವು ಡಿಸೆಂಬರ್ ತಿಂಗಳಿನಲ್ಲಿದ್ದೇವೆ. ಈಗ ನಮ್ಮ ಊರುಗಳಲ್ಲಿ ಬೆಳಗಿನ ಹೊತ್ತು 10 ನಿಮಿಷ, 15 ನಿಮಿಷ, 20 ನಿಮಿಷ ಹಾಗೂ ಸಾಯಂಕಾಲದ ಹೊತ್ತಿನಲ್ಲಿ ಅರ್ಧ ಗಂಟೆ ಚಳಿಯಿರುತ್ತದೆ. ಮಧ್ಯಾಹ್ನದ ಹೊತ್ತು ಈಗಲೂ ಕೂಡ ಸಾಯಂಕಾಲದ ಹೊತ್ತಿನಲ್ಲಿ ಅರ್ಧ ಗಂಟೆ ಚಳಿಯಿರುತ್ತದೆ. ಮಧ್ಯಾಹ್ನದ ಹೊತ್ತು ಈಗಲೂ ಕೂಡ ನಾವು ಊರುಗಳಲ್ಲಿ ಫ್ಯಾನ್ ಹಾಕಿಕೊಳ್ಳಬೇಕು. ಫ್ಯಾನ್ ಹಾಕಿಕೊಳ್ಳುವುದಕ್ಕೆ ಕರೆಂಟ್ ಇರುವುದಿಲ್ಲ. ಮೈಮೇಲೆ ಬಟ್ಟೆ ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ. ಒಂದು ಪಂಚೆ ಸುತ್ತಿಕೊಂಡು ಕುಳಿತಿರಬೇಕು. ಜನವರಿ ಆದಮೇಲೆ ನಮ್ಮ ಗತಿ ಏನಾಗಬಹುದು? ನಾನು ಸರ್ಕಾರಕ್ಕೆ ಏನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ, ಒಂದೇ ಸಲ ಪರಿಸ್ಥಿತಿ ನಿಮ್ಮ ಕೈ ಮೀರಿ ಹೋದಮೇಲೆ ಒದ್ದಾಡಬೇಡಿ. ಅಲ್ಲಿರತಕ್ಕಂತಹ, ಕೆಳಹಂತದಲ್ಲಿರತಕ್ಕಂತಹ ಸರ್ಕಾರದ ಪ್ರತಿನಿಧಿಗಳು, ನೌಕರರು, ಉದ್ಯೋಗಸ್ಥರು ಯಾರಿದ್ದಾರೆ, ಇದು ನಮ್ಮ ವ್ಯವಸ್ಥೆಯ ಲೋಪನೋ ಎಂದು ನಮಗೆ ಗೊತ್ತಾಗುತ್ತಿಲ್ಲ. ಏನೆಲ್ಲಾ ಪ್ರಯತ್ನಪಟ್ಟರೂ ಕೂಡ, ಎಷ್ಟೆಲ್ಲಾ ನಾವು ಅವರಿಗೆ ಮನವರಿಕೆ ಮಾಡಿಕೊಟ್ಟರೂ ಕೂಡ, ಈ ವಿಷಯದ ತೀವ್ರತೆ ಮತ್ತು ಗಾಂಭೀರ್ಯ ಅವರಿಗೆ ಮೈಗೆ ಹತ್ತುತ್ತಿಲ್ಲ. ಕಾರಣ ಅವರಿಗೆ ಯಾರಿಗೂ ಕುಡಿಯುವ ನೀರಿನ ಸಮಸ್ಯೆಯಿಲ್ಲ. ಬೆಸ್ಕಾಂನವರದ್ದೂ ಒಂದು ತೊಂದರೆ ಇದೆ. ಮೊದಲು ಏನು ವ್ಯವಸ್ಥೆ ಇತ್ತು ಎಂದರೆ, ಒಂದು ಬೋರ್‌ವೆಲ್ ಡ್ರಿಲ್ ಮಾಡಿದ ತಕ್ಷಣ ಬೆಸ್ಕಾಂನವರಿಗೆ ಹೇಳಿಬಿಟ್ಟರೆ ಅವರ ಹತ್ತಿರ Electrical Contractors ಇರುತ್ತಿದ್ದರು. ಒಂದು estimate ಮಾಡಿ ಕೊಡುತ್ತಿದ್ದರು. ಹಣ ಎಷ್ಟು ಖರ್ಚಾಗಿದೆ ಎಂದರೆ, RDPRನವರು, ಪಂಚಾಯಿತಿಯವರು ಹಣ ತುಂಬುತ್ತಿದ್ದರು. ಅವರಿಗೆ ಯಾವ ಪುಣ್ಯಾತ್ಮ advise ಮಾಡಿದನೋ ಏನೋ

ಗೊತ್ತಿಲ್ಲ. ಅವರು ಒಂದು ದಿವಸ ಬೆಳಿಗ್ಗೆ ಎದ್ದು ಮಾನ್ಯ ಶಿವಕುಮಾರ್ ಸಾಹೇಬರ ನೇತೃತ್ವದಲ್ಲಿ ಒಂದು ಆರ್ಡರ್ ಮಾಡಿಬಿಟ್ಟರು. ಇಲ್ಲ ಇಲ್ಲ ನೀವೇ ಮಾಡಿಕೊಡಿ ಎಂದರು. ಅನೇಕ ಊರುಗಳಲ್ಲಿ ಬೋರ್‌ವೆಲ್ ಡ್ರಿಲ್ ಮಾಡಿಬಿಟ್ಟಿದ್ದೇವೆ. ನೀರು ಸಿಕ್ಕಿದೆ. energize ಮಾಡುವುದಕ್ಕೆ ಆಗುತ್ತಿಲ್ಲ. ಏನಾದರೂ ಹೇಳಿ, ಅವರಿಗೆ ಅರ್ಥವೇ ಆಗುವುದಿಲ್ಲ. ಎಂತಹ small things ನೋಡಿ. ಆದರೆ, ಇದು ಒಂದು ಊರಿನ ಇಡೀ ಜನರು ಯಾರು ಅಲ್ಲಿ ವಾಸ ಮಾಡುತ್ತಾರೆ ಅವರೆಲ್ಲರ ಬದುಕಿಗೆ ಸಂಬಂಧಿಸಿದಂತಹ ವಿಚಾರ. ಇಂತಹ ವಿಚಾರಗಳಲ್ಲಿ ಸೂಕ್ಷ್ಮತೆ ಇಲ್ಲದೇ ಹೋದರೆ, ಆಡಳಿತ ಹಿಡಿದಂತಹವರಿಗೆ ಮಾನವತ್ವ ಇಲ್ಲದೇ ಹೋದರೆ, ಜವಾಬ್ದಾರಿ ಇಲ್ಲದೇ ಹೋದರೆ, ಜನರ ಗತಿ ಏನಾಗುತ್ತದೆ? ನಮ್ಮ ಸುಧಾಕರ್‌ರವರು ಮಾತನಾಡುತ್ತಾ ಹೇಳಿದರು. 'ಈ ಹಳ್ಳಿಗಳಲ್ಲಿ ಅನುಕೂಲಸ್ಥರ ಮನೆಯ ಮುಂದೆ ಬುಡಬುಡಕಿಯರವರು ಅವರು ಇವರು ಬಂದರೆ ಒಂದು ಹಳೆಯ ಬಟ್ಟೆ ಇದ್ದರೆ ಕೊಡಿ ಎಂದು ಕೇಳುತ್ತಾರೆ. ನಿಮ್ಮಂತಹ ಪುಣ್ಯಾತ್ಮರು ನೀವು ಉಪಯೋಗಿಸಿರುವ ಕೋಟ್, ಪ್ಯಾಂಟ್, ಶರ್ಟ್‌ಗಳು ಇದ್ದರೆ ಅದನ್ನು ಕೊಟ್ಟರೆ ಅವನು ತೆಗೆದುಕೊಂಡು ಹೋಗುತ್ತಿದ್ದ. ಅವನಿಗೆ ಅದೇ ಹೊಸದಾಗಿರುತ್ತದೆ'. ಇಲ್ಲಿ ಮುಕುಳಿ ತೊಳೆದುಕೊಂಡು ಬಿಟ್ಟ ನೀರನ್ನು ಕೊಡಿ ಶುದ್ಧೀಕರಣ ಮಾಡಿ ಕುಡಿಯುತ್ತೇವೆ ಎಂದು ಹೇಳುವ stage ಗೆ ನಾವು ಬಂದಿದ್ದೇವೆ. ಬೆಂಗಳೂರು ಜನ ಪಾಯಕಾನೆ ಮಾಡಿ ತೊಳೆದುಕೊಂಡ ನೀರನ್ನು ಕೊಡ್ರಪ್ಪ, ಅದನ್ನೇ ಮಹಾಪ್ರಸಾದ ಎಂದು ತೊಳೆದುಕೊಂಡು ಕುಡಿಯುತ್ತೇವೆ ಎನ್ನುವ stage ಗೆ ಬಂದಿದ್ದೇವೆ. ಇನ್ನೂ ನಮ್ಮ ಮೇಲೆ ಕರುಣೆ ಇಲ್ಲವೇ? ನಿಮಗೆ ಹೃದಯ ಇಲ್ಲವೇ? ನಿಮಗೆ ನಮ್ಮ ಸಮಸ್ಯೆ ಅರ್ಥವಾಗುತ್ತಿಲ್ಲವೇ? ಏಕೆ ಹೀಗೆ ಮಾಡುತ್ತೀರಿ? ನಾವು ಬಾಯಿ ಬಿಡುವ ಹಾಗೆ ಏಕೆ ಮಾಡುತ್ತೀರಿ? 1300-1400 ಅಡಿ ಭೂಮಿಯ ಕೆಳಗೆ ಪಾತಾಳಕ್ಕೆ ಹೋದ ನಂತರ ನೀರಿನ ಒಳಗೆ ಏನೇನು ಲವಣಾಂಶ ಇರುತ್ತದೆ ಎನ್ನುವುದಕ್ಕೆ ವೈಜ್ಞಾನಿಕವಾಗಿ ಪರೀಕ್ಷೆ ಬೇರೆ ಆಗಬೇಕೇ? sub soil water ಸ್ವಲ್ಪ ಆಳದಲ್ಲಿರುವುದಾದರೆ O.K ಎಂದು ಹೇಳುತ್ತೇವೆ. ನಮ್ಮಲ್ಲಿ ಪರೀಕ್ಷಿಸಬೇಕಾದ ಅವಶ್ಯಕತೆಯಿಲ್ಲ. ನಾನು ಅದೇ ಕೆಲಸವಾಗಿ ಒಂದು

example ಹೇಳಿದೆ. ಮುದವಾಡಿ ಹೊಸಹಳ್ಳಿ ಎಂಬ ಊರಿನಲ್ಲಿರುವ ನೀರನ್ನು ಕುಡಿದು 22 ಜನರಿಗೆ ಅಂಗಾಂಗಗಳು complete ಆಗಿ ಹತೋಟಿ ತಪ್ಪಿದೆ. It is only due to water. ಇವತ್ತಿಗೂ ಕೂಡ ನಮ್ಮಿಂದ ಒಂದು R.O. plant ಹಾಕುವುದಕ್ಕೆ ಸಾಧ್ಯವಾಗಲೇ ಇಲ್ಲ. ನಾನು ಆ ಜನರ ಪ್ರತಿನಿಧಿಯಾಗಿದ್ದೇನೆ. ಸರ್ಕಾರ ಕೊಡುವ ಎಲ್ಲಾ ಸವಲತ್ತುಗಳನ್ನು ನಾನು ಪಡೆಯಬೇಕು. ಇಲ್ಲಿ ಹಾಜರಾತಿಗೆ ಸಹಿ ಹಾಕಿ ನಾನು ದಿವಸ ಹಣ ಪಡೆಯಬೇಕು. ಆದರೆ ನಮ್ಮ ಜನ ಅಲ್ಲಿ ಸಾಯುತ್ತಿದ್ದಾರೆ. ನಾನು ಮಾತ್ರ ಶಾಸಕನಾಗಿ ಇಲ್ಲಿ ಮೆರೆಯುತ್ತಿದ್ದೇನೆ. ನಮ್ಮ ಗತಿ ಏನಾಗಬಹುದು? ಅಲ್ಲಿನ ಜನರು ನಮಗೆ ಏನೂ ಮಾಡಬೇಕಾಗಿಲ್ಲ, ನಮ್ಮನ್ನು ಹೊಡೆಯಬೇಕಾಗಿಲ್ಲ, ಬಡಿಯಬೇಕಾಗಿಲ್ಲ ಇವನ ಮನೆ ಹಾಳಾಗಿ ಹೋಗಲಿ ಎಂದು ಹೇಳಿದರೆ ಸಾಕು. ನಮ್ಮನ್ನೇಕೆ ಈ ಸ್ಥಿತಿಗೆ ತಂದು ನಿಲ್ಲಿಸಿದ್ದೀರಿ? ನಾವೇನು ನಿಮ್ಮ ಸುವರ್ಣಸೌಧವನ್ನೋ ಅಥವಾ ಬೆಂಗಳೂರಿನಲ್ಲಿರುವ ವಿಧಾನಸೌಧವನ್ನೋ ಕೇಳಿದ್ದೇವೆಯೇ? ಕಬ್ಬನ್ ಪಾರ್ಕನಲ್ಲಿ ಏನಾದರು ಎರಡು ಎಕರೆ ಭೂಮಿಯನ್ನು ಲೀಸ್‌ಗೆ ಕೇಳಿದ್ದೇವೆಯೇ ಅಥವಾ ನೀವು ತೆಗೆದುಕೊಂಡು ಹೋದ ಹಾಗೆ ಸಾವಿರಾರು ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಕೇಳಿದ್ದೇವೆಯೋ? ಒಂದು R.O. plant ಯೋಗ್ಯತೆಯೇನು? 8 ರಿಂದ 10 ಲಕ್ಷ ರೂಪಾಯಿಗಳನ್ನು ನಮ್ಮ ಮುಖದ ಮೇಲೆ ಬಿಸಾಕುವುದಕ್ಕೆ ಆಗುವುದಿಲ್ಲವೇ? ಪಾಪ ಅವರು ಚಿಕ್ಕವರು ಅವರಿಗೆ ಹೇಳುವುದಕ್ಕೆ ಬರಲಿಲ್ಲ. ನಾವು ಸರ್ಕಾರಕ್ಕೆ ತೆರಿಗೆ ಕಟ್ಟುವುದಿಲ್ಲವೇ? Sales tax ಕಟ್ಟುವುದಿಲ್ಲವೇ? Excise duty ಕಟ್ಟುವುದಿಲ್ಲವೇ? ಕಂದಾಯ ಕಟ್ಟುವುದಿಲ್ಲವೇ? ನಾವು ಕರ್ನಾಟಕದಲ್ಲಿ ಇದ್ದೇವೋ ಇಲ್ಲವೋ ನಾವು ಇದನ್ನೆಲ್ಲಾ ಕೇಳಬಾರದೆ? ನಾವೇನು ಅಪರಾಧ ಮಾಡಿದ್ದೇವೆ? ಮರ್ಯಾದೆಯಾಗಿ ಇರುವುದೇ? ನಮ್ಮ ತಾಳ್ಮೆಯನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕೆಂದು ಇದ್ದೀರಿ? Drip irrigationನ್ನು compulsory ಮಾಡಿ, flood irrigation ಗೆ ಅವಕಾಶ ಕೊಡಬೇಡಿ. ಈ ಮೂರೂ ಜಿಲ್ಲೆಗಳಲ್ಲಿ 100% subsidy ಅನ್ನು ಕೊಡಿಯೆಂದು ಕೇಳಿದ್ದೇವೆ ಇದಕ್ಕೆ ಎಷ್ಟು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ? ಅದೊಂದು simple order ಅನ್ನು ನಿಮ್ಮಿಂದ ಮಾಡುವುದಕ್ಕೆ ಆಗಿಲ್ಲ. R.O.

plant ಗೆ ಬಾಲಕೋಟೆ, ಹಾವೇರಿ ಮತ್ತು ಬಿಜಾಪುರಕ್ಕೆ ನಮ್ಮನ್ನು ಹೋಲಿಕೆ ಮಾಡುತ್ತೀರಿ. 70 ಕಿ.ಮಿ. ದೂರದಲ್ಲಿರುವ ಕೋಲಾರಕ್ಕೆ ನೀವೊಮ್ಮೆ ಬಂದು ನೋಡಿ. ಕೋಲಾರ ಏಕೆ ಅಭಿವೃದ್ಧಿ ಆಗುವುದಿಲ್ಲ, ತುಮಕೂರು ಏಕೆ ಅಭಿವೃದ್ಧಿ ಆಗುತ್ತದೆಯೆಂದರೆ ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ನೀರಿಲ್ಲ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಆದ್ದರಿಂದ, 70 ಕಿ.ಮೀ. ದೂರದಲ್ಲಿರುವ ತುಮಕೂರು ಅಭಿವೃದ್ಧಿ ಆಗುತ್ತದೆ ಕೋಲಾರ ಅಭಿವೃದ್ಧಿ ಆಗುವುದಿಲ್ಲ. ಈ ರೀತಿಯಾದ ಸಂಕಷ್ಟವನ್ನು ನಾವು ಎದುರಿಸುತ್ತಿದ್ದೇವೆ. ಎಷ್ಟು ಬೋರ್‌ವೆಲ್ ಬೇಕಾಗುತ್ತದೆಂದು ನನಗೆ ಗೊತ್ತಿಲ್ಲ. ಆ estimate ಅನ್ನು ನಾನು ಕೊಡಲಾರೆ. ಬೇಸಿಗೆ ಕಾಲ ಹತ್ತಿರ ಬರುತ್ತಿದೆ. ತಹಸೀಲ್ದಾರ್‌ರವರ ನೇತೃತ್ವದಲ್ಲಿ Assistant Executive Engineer, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ರವರು, EO, ಎಲ್ಲಾ JEಗಳು ಮತ್ತು PDO ಗಳನ್ನು ಇಟ್ಟುಕೊಂಡು ಮೇಲೆ war basis ಮೇಲೆ day-to-day review ಮಾಡಬೇಕು. ತುರ್ತಾಗಿ ಎಲ್ಲಿ ಅವಶ್ಯಕತೆಯಿದೆ ಅಲ್ಲಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಬೇಕು. ಬೆಸ್ಕಾಂರವರಿಗೆ ನಿಮ್ಮ ಸಹದ್ಯೋಗಿಗಳ ಜೊತೆ ಮಾತನಾಡಿ ಷರತ್ತನ್ನು ಹಾಕಬೇಡಿ. ಇವತ್ತು ಬೋರ್‌ವೆಲ್ ಕೊರೆದಾಗ ನೀರು ದೊರೆತರೆ ಅದು ಎರಡು ದಿವಸಗಳಲ್ಲಿ energize ಆಗಬೇಕು. ನೀರು ಹೊರಗೆ ಬರಬೇಕು. 10 ರಿಂದ 20 ದಿವಸಗಳನ್ನು ತೆಗೆದುಕೊಳ್ಳಿ ಆದರೆ R.O. plants ಅನ್ನು compulsory ಆಗಿ ಹಾಕಲೇಬೇಕು. ಈ ವ್ಯವಸ್ಥೆಯನ್ನು ಮಾಡುವುದಕ್ಕೆ ಹಣದ ಪ್ರಶ್ನೆ ಅಲ್ಲ ಮನಸ್ಸಿನ ಪ್ರಶ್ನೆ ಬರುತ್ತದೆ. ನಿಮಗೆ ಇಚ್ಛಾಶಕ್ತಿ ಬೇಕಾಗುತ್ತದೆ. ಏನೂ ಮಾಡಿಲ್ಲವೇ ಎಂದು ತಿಳಿಯಬೇಡಿ. ನೀವು ಸಾಕಷ್ಟು ನಮಗೆ ಸ್ಪಂದಿಸಿದ್ದೀರಿ. ನಾವು ಸಭೆಗಳಿಗೆ ಕರೆದಾಗ ಬಂದಿದ್ದೀರಿ. ನಮಗೋಸ್ಕರ ಪ್ರತ್ಯೇಕ ಸಭೆಗಳನ್ನು ಏರ್ಪಾಡು ಮಾಡಿದ್ದೀರಿ, ಹಣ ಬಿಡುಗಡೆ ಮಾಡಿದ್ದೀರಿ ಆದರೆ

ವೇಗ velocity ಏನಿದೆ ಅದು ಸಾಲದು. This is very slow. ನಮ್ಮ ಪರಿಸ್ಥಿತಿ ಏನಿದೆ ಅದು it is very bad.

ಶ್ರೀ ಜಿ.ಟಿ. ದೇವೇಗೌಡ: ಮಾನ್ಯ ಅಧ್ಯಕ್ಷರೆ, ನನ್ನದೊಂದು clarification ಇದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ದಯಮಾಡಿ ಗೌಡರೆ ಒಂದು ನಿಮಿಷ, ನೀವು ಕೆ.ಆರ್.ಎಸ್. ಬಳಿಯಿರುವವರು ನಿಮಗೆ ತೊಂದರೆಯಿಲ್ಲ. ಕೆಲವು ಊರುಗಳಲ್ಲಿ ಏನಾಗುತ್ತಿದೆಯೆಂದರೆ, ಬೋರ್‌ವೆಲ್ drill ಮಾಡಿ ಪಂಪು, ಮೋಟಾರ್ ಕೂಡ ಹಾಕುತ್ತೇವೆ, ಆದರೆ ಪೈಪ್‌ಲೈನ್ ಹಾಕುವುದಿಲ್ಲ. ಏನು ಪ್ರಯೋಜನ? ಕೆಲವು ಕಡೆ ಒಂದು ಕಿ.ಮೀ.ವರೆಗೆ ಪೈಪ್‌ಲೈನ್ ಹಾಕಬೇಕಾಗುತ್ತದೆ. ಊರಿನಲ್ಲಿ ನೀರು ಸಿಗದಿದ್ದರೆ ನಿಮಗೆ ಬೇರೆ ಏನು ಮಾರ್ಗವಿದೆ? ನಾವೇನಾದರೂ ಇದನ್ನೆಲ್ಲಾ ಸೃಷ್ಟಿ ಮಾಡಿ ಪೈಪ್‌ಲೈನ್‌ನಲ್ಲಿ ಹಣವನ್ನು ಹೊಡೆಯುವುದಕ್ಕೆ ಮಾಡುತ್ತಿದ್ದರೆ ನಮಗೆಲ್ಲಾ ಕೈಕೋಳ ಹಾಕಿ ಒಳಗೆ ಕೂರಿಸಿ, ನಮ್ಮ ಫೋಟೋಗಳನ್ನೆಲ್ಲಾ ಟಿ.ವಿಗಳಲ್ಲಿ ಕೊಡಿ. ನಿಮಗೇನು ಅನುಮಾನ? ಕೆಲವು ಊರುಗಳಲ್ಲಿ Cistern ಹಾಕುವುದು. ಕಾಲೋನಿಗಳಲ್ಲಿ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು, ಕೂಲಿ ಮಾಡುವವರು ಬಡತನ ಮತ್ತು ಜಾತಿ ಎರಡೂ ಕೂಡ ಈ ದೇಶದಲ್ಲಿ ಒಂದೇ ಆಗಿದೆ. ಬೆಳಿಗ್ಗೆ ಎದ್ದರೆ ಅವರು ಕೂಲಿ ಮಾಡುವುದಕ್ಕೆ ಹೋಗುತ್ತಾರೆ. Cistern ಕೊಡುವುದಕ್ಕೆ ಎಷ್ಟಾಗುತ್ತದೆ? ನನ್ನ ಅಂದಾಜಿನ ಪ್ರಕಾರ ಒಂದು Cisternಗೆ 15 ರಿಂದ 20 ಸಾವಿರ ರೂಪಾಯಿಗಳಾಗಬಹುದು. ವೈಭವದ ಮದುವೆ ಮನೆಯೊಳಗೆ ನಾನು ಉಪ್ಪಿನಕಾಯಿಯನ್ನು ಕೇಳುತ್ತಿದ್ದೇನೆ, ನಾನೇನು ಲಾಡು, ಜಿಲೇಬಿ, ಜಹಾಂಗೀರ್ ಕೇಳಲಿಲ್ಲ. ಸರ್ಕಾರ ಎನ್ನುವ ಸಡಗರದ ಆಡಂಬರದ ಮದುವೆ ಏನು ನಡೆಯುತ್ತಿದೆ ಅಲ್ಲಿ ಕೇವಲ ಉಪ್ಪಿನಕಾಯಿಯನ್ನು ಕೇಳುತ್ತಿದ್ದೇನೆ. ಅದನ್ನು ಕೂಡ ಕೊಡುವುದಕ್ಕೆ ನಿಮಗೆ ಮನಸ್ಸಿಲ್ಲವೇ? ಪೈಪ್‌ಲೈನ್ ಕೊಡುವುದಕ್ಕೆ ಆಗುವುದಿಲ್ಲ. Cistern ಕೊಡುವುದಕ್ಕೆ ಆಗುವುದಿಲ್ಲ. ಪಂಪ್, ಮೋಟಾರ್ ಕೊಡುವುದಕ್ಕಾಗಲ್ಲ, ಸರ್ವೀಸ್ ಮಾಡಿಸುವುದಕ್ಕೆ

ಆಗುವುದಿಲ್ಲ. ಇವೆಲ್ಲಾ ಸಮಸ್ಯೆಗಳೆಂದು ನಮ್ಮ ಅನುಭವಕ್ಕೆ ಬಂದ ಕಾರಣ ಹೌಸ್‌ನಲ್ಲಿ ನಿಮ್ಮೆದುರಿಗೆ ನಮ್ಮ ಕಷ್ಟಗಳನ್ನು ತೋಡಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಸೆಷನ್ಸ್ ಮುಗಿಸಿ ಊರಿಗೆ ಹೋದರೆ ನೀವೇನು ಮಾಡಿದ್ದೀರೆಂದು ಜನರು ನನ್ನನ್ನು ಕೇಳುತ್ತಾರೆ.

ಶ್ರೀ ಜಿ.ಟಿ. ದೇವೇಗೌಡ: ಒಂದು ಲಕ್ಷ ರೂಪಾಯಿಗಳ ಮೇಲ್ಪಟ್ಟು KPTCL ನವರು ಕುಡಿಯುವ ನೀರಿಗೆ ಸರ್ವಿಸ್ ಕೊಡುತ್ತಿಲ್ಲ, KPTCL ಇಂಜಿನಿಯರ್ಸ್ ಬಂದು ಕೆಲಸ ಮಾಡುತ್ತಿಲ್ಲ. ಕುಡಿಯುವ ನೀರಿನ ಇಂಜಿನಿಯರಿಂಗ್ ವಿಭಾಗದವರಿಗೆ ಕೆಲಸವನ್ನು ಮಾಡಿ ಎಂದು ಹೇಳಿದರೆ ಇಂಜಿನಿಯರಿಂಗ್ ಇಲ್ಲ. ಈಗ stop ಮಾಡಿದ್ದಾರೆ. ಇತ್ತೀಚೆಗೆ ಹೊರಡಿಸಿರುವ ಆದೇಶದ ಪ್ರಕಾರ ಒಂದು ಲಕ್ಷ ರೂಪಾಯಿಗಳವರೆಗೆ ಮಾತ್ರ KPTCL ರವರು ಮಾಡುತ್ತಾರೆ ಎರಡು ಲಕ್ಷ ರೂಪಾಯಿಗಳವರೆಗೆ ಖರ್ಚಾದರೆ ಇಂಜಿನಿಯರ್ಸ್ ಕೆಲಸ ಮಾಡುವುದಿಲ್ಲ ನಿಂತುಹೋಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ದೇವೇಗೌಡರು ಎದ್ದ ನಂತರ ನಾವು ಸುಮ್ಮನಿರಲೇಬೇಕಲ್ಲ. ನಮ್ಮ ಜೀವನವೆಲ್ಲಾ ಗೌಡರಿಗೆ ಹೆದರಿಕೊಂಡೇ ಬದುಕಿದ್ದೇವೆ. ನೇರವಾಗಿ ಇದಕ್ಕೆ ಸಂಬಂಧಿಸದಿದ್ದರೂ ಕೂಡ ನಮ್ಮ ಜಿಲ್ಲೆಗೆ ಸಂಬಂಧಿಸಿದ್ದು ಇದಕ್ಕೆ ಹೋಲಿಕೆಯಿರುವಂತಹದ್ದು, de-siltation of tanks. Encroachment ಬಿಡುಗಡೆ ಮಾಡುವುದು, ಅಕಸ್ಮಾತ್ ಮಳೆ ಬಂದರೆ ಆ ನೀರನ್ನು ಶೇಖರಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ನಾವೇನೂ ಒಂದು ಸಾವಿರ ಕೋಟಿ, ಎರಡು ಸಾವಿರ ಕೋಟಿ ರೂಪಾಯಿಗಳನ್ನು ಕೇಳಲಿಲ್ಲ. ನಮ್ಮ ಕೆರೆಗಳಿಗೆ ಎಷ್ಟು ಬೇಕಾಗುತ್ತದೆ? ನಿನ್ನೆಯೆಲ್ಲಾ ನಾವು ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರವನ್ನು ಮಾತನಾಡಿದ್ದೇವೆ. ಜಗದೀಶ್ ಶೆಟ್ಟರ್‌ರವರೆ ನೀವು ಕೃಷ್ಣಾ ಮೇಲ್ದಂಡೆ ಇಟ್ಟುಕೊಂಡಿದ್ದೀರಿ, ಕುಮಾರಸ್ವಾಮಿಯವರಿದ್ದಾರೆ ಅವರು ಹೇಮಾವತಿ ಇಟ್ಟುಕೊಂಡಿದ್ದಾರೆ. ಇಲ್ಲಿಯವರೆಗೆ ಘಟಪ್ರಭಾ ಹಾಗೂ ಮಲಪ್ರಭಾ ಇದೆ. ನಮಗೆ major irrigation ಅಲ್ಲ medium irrigation ಕೂಡ ಇಲ್ಲ. Minor irrigation ಗೆ ಕೂಡ ನೀವು ಹಣವನ್ನು

ಕೊಡುವುದಿಲ್ಲವಲ್ರೀ. ಉತ್ತರ ಕರ್ನಾಟಕಕ್ಕೆ ಇದ್ದರೂ ಕೂಡ ನಾವು ಇನ್ನೂ ತತ್ತರಿಸಿ ಹೋಗಿದ್ದೇವೆ. ಇನ್ನೂ ಹೀನಸ್ಥಿತಿಯಲ್ಲಿ ನಾವಿದ್ದೇವೆ. ಇದನ್ನು ಈಗಲೇ precautionary measure ಎಂದು ತೆಗೆದುಕೊಳ್ಳಬೇಕಾಗುತ್ತದೆ. Both de-siltation and mi ಜಲಘಟ್ಟದ್ದನ್ನು ಇನ್ನೂ ನಿಧಾನ ಮಾಡಬೇಡಿ. ಒಂದು ವರ್ಷದೊಳಗಾಗಿ ನೀವು laboratory ಯಿಂದ reports ತರಿಸಿಕೊಂಡು tertiary treatment ಮಾಡಿ ನೀರನ್ನು ಕೊಡಿಸುವ ಪ್ರಯತ್ನವನ್ನು ಮಾಡಿ. ಎತ್ತಿನ ಹೊಳೆ ವಿಷಯವನ್ನು ನಾನೀಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಒಬ್ಬ ಮಂತ್ರಿಯಿದ್ದರೆ ಇಡೀ ಸರ್ಕಾರವಿದ್ದ ಹಾಗೆ. ಅರಣ್ಯ ಇಲಾಖೆಯವರಿಗೆ ಹೇಳುತ್ತಿದ್ದೇನೆ ಇನ್ನಾದರೂ ನಿಮಗೆ ಪುಣ್ಯ ಬರುತ್ತದೆ. ನೀಲಗಿರಿ ಮತ್ತು acacia ಅದನ್ನೆಲ್ಲಾ ತಂದು ನಮ್ಮಲ್ಲಿ ಹಾಕಬೇಡಿ. ನಾವೇನು ತಪ್ಪು ಮಾಡಿದ್ದೇವೆ ನಮ್ಮನ್ನು ಸರ್ವನಾಶ ಮಾಡಿದ್ದೀರಿ.

ಅಧ್ಯಕ್ಷರು: ಈ ವಿಷಯವೇ ಬೇರೆಯಿದೆಯಲ್ಲ. ಇದು ಹೇಗೆ ಬರುತ್ತದೆ?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಎಲ್ಲಾ ಕುಡಿಯುವ ನೀರಿಗೆ ಸಂಬಂಧಪಟ್ಟ ವಿಷಯವೇ. ನೀವು ಏಕೆ ಹೀಗೆ ಆದ್ರಿ. ಈ ವಿಚಾರವನ್ನು ನೀವೇ ನನ್ನ ಜೊತೆಗೆ ಚರ್ಚೆ ಮಾಡಿದ್ದೀರಲ್ಲವೇ? ನಮ್ಮ ಕೆರೆಗಳು ಬತ್ತಿ ಹೋಗುವುದಕ್ಕೆ ನಮ್ಮ underground water depletion ಆಗುವುದಕ್ಕೆ ಇದು ಕೂಡ ಒಂದು ಕಾರಣ. ಎತ್ತಿನಹೊಳೆ ಆಗಲಿ, ಕೆರೆಗಳನ್ನು de-siltation ಮಾಡುವುದು ಇವೆಲ್ಲಾ long range ಆಯಿತು. ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇದುವರೆಗೆ ನಮ್ಮ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿದ್ದಾರೆ ಆದರೆ ಫಲಶೃತಿ ನಾವು ಬಯಸಿದಷ್ಟು ಆಗಿಲ್ಲ. ನಿಮ್ಮ ಮೇಲೆ ನಮಗೆ ನಂಬಿಕೆಯಿದೆ ದಯಮಾಡಿ ನಿಮ್ಮ ಸಹದ್ಯೋಗಿಗಳು ನಿಮ್ಮ ಅಧಿಕಾರಿಗಳು ಕೆಳಗಿರುವ ಅಧಿಕಾರಿಗಳಿಗೆ ಸ್ವಲ್ಪ ದಿವಸ ಬದುಕಿರಬೇಕೆಂದು ಮೆಸೇಜ್ ಕೊಡಿ. ನಂತರ ಈ crisis ಆಗಿ ಹೋದ ನಂತರ ಅವರು

ಹೋಗಿಬಿಟ್ಟರು ಅಂದರೆ ನಮಗೇನೂ ಚಿಂತೆಯಿಲ್ಲ. ಇಷ್ಟು ಮಾಡಬೇಕೆಂದು ಹೇಳಿ ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಎನ್. ಬಾಲಕೃಷ್ಣ (ಮಾಗಡಿ): ಮಾನ್ಯ ಅಧ್ಯಕ್ಷತೆ, ದಯಮಾಡಿ ನಮ್ಮಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಎರಡು ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ

(ಗೊಂದಲ)

ಅಧ್ಯಕ್ಷರು: ಇಲ್ಲಿ ಬರುವುದಿಲ್ಲ, ಅವರಿಗೆ ಸಂಬಂಧ ಪಟ್ಟಿರುವುದು. ದಯಮಾಡಿ ಸುಮ್ಮನೆ ಇರಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: 500 ಅಡಿ, 1000 ಅಡಿ ಆಳದಲ್ಲಿ ಬಾವಿ ತೆಗೆದರೂ ನೀರು ಸಿಗುವುದಿಲ್ಲ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಅಧ್ಯಕ್ಷರೆ, ದಯಮಾಡಿ ಕುಡಿಯುವ ನೀರಿನ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಭೂಮಿ ಸಾಗುವಳಿ ಬಗ್ಗೆ ಮಾತನಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಸದಸ್ಯರಾದ ಶಿವಲಿಂಗೇಗೌಡರು ಹೇಳಿರುವ ಬಗ್ಗೆ, ಆ ಟೆಂಡರ್ ಏನಾಗಿದೆ? ಅದನ್ನು ಪುನರ್ ಪರಿಶೀಲನೆ ಮಾಡಬೇಕು. ಮಾನ್ಯ ಸದಸ್ಯರಾದ ಶಿವಲಿಂಗೇಗೌಡರು ಬಹಳ ಸವಿಸ್ತಾರವಾಗಿ ಚಾಮರಾಜನಗರ ಮತ್ತು ಗುಂಡ್ಲುಪೇಟೆಯಲ್ಲಿ ಮಾಡಿರುವ ಬಗ್ಗೆ ಹೇಳಿದ್ದಾರೆ. ಸಾಧ್ಯವಾದರೆ ಮಾಡಿಕೊಡಬೇಕು.

(ಗೊಂದಲ)

ಶ್ರೀ ನಾರಾಯಣಗೌಡ (ಕೆ.ಆರ್.ಪೇಟೆ): ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದ್ದು, ಮಾತನಾಡುವುದಕ್ಕೆ ನನಗೂ ಎರಡು ನಿಮಿಷಗಳ ಕಾಲ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ನಿಯಮ 69 ರಲ್ಲಿ ಚರ್ಚೆ ಮಾಡುವುದಕ್ಕೆ ಎಷ್ಟು ಸೀಮಿತವಿದೆಯೋ ಅಷ್ಟಕ್ಕೆ ಮಾಡಬೇಕು. ಇಷ್ಟು ಜನರಿಗೆ ಚರ್ಚೆ ಮಾಡಲು ಅವಕಾಶ ಕೊಟ್ಟಿರುವುದು ಇದೇ ಮೊದಲನೇ ಸಾರಿ.

ಶ್ರೀ ನಾರಾಯಣ ಗೌಡ: ಕುಡಿಯುವ ನೀರಿನ ಸಮಸ್ಯೆ ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು: ಎಲ್ಲಾ ಸದಸ್ಯರುಗಳು ಹೇಳಿದ್ದಾರಲ್ಲವೇ?

ಶ್ರೀ ನಾರಾಯಣ ಗೌಡ: ಎರಡೇ ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು: ಆಯಿತು ಹೇಳಿ.

ಶ್ರೀ ನಾರಾಯಣ ಗೌಡ: ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ

ಅಧ್ಯಕ್ಷರು: ಮಂಡ್ಯ ಜಿಲ್ಲೆ ಬಗ್ಗೆ ಬೇಡ, ಇದು ಕೋಲಾರಕ್ಕೆ ಸಂಬಂಧಪಟ್ಟಿದ್ದು. ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳೇ ಹೇಳಿ.

ಡಾ|| ಕೆ. ಶ್ರೀನಿವಾಸಮೂರ್ತಿ: ಮಾನ್ಯ ಅಧ್ಯಕ್ಷರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ

ಅಧ್ಯಕ್ಷರು: ಎಲ್ಲವೂ ಆಯಿತು. ಬೇರೆ ವಿಚಾರದಲ್ಲಿ ಕೇಳಿ. ಇಲ್ಲಿ ಬರುವುದಿಲ್ಲ ಬಿಡಿ. ಮಂತ್ರಿಗಳೇ ನೀವು ಉತ್ತರವನ್ನು ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಆರ್.ರಮೇಶ್‌ಕುಮಾರ್,

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ, ಶ್ರೀ ಮಂಜುನಾಥಗೌಡ, ಡಾ॥ ಕೆ.ಸುಧಾಕರ್, ಶ್ರೀಮತಿ ರಾಮಕ್ಕ, ಶ್ರೀ ಎನ್.ನಾರಾಯಣಸ್ವಾಮಿ, ಶ್ರೀ ಪಿಳ್ಳಮುನಿಶಾಮಪ್ಪ, ಶ್ರೀ ರಾಜಣ್ಣ, ಶ್ರೀ ಮಂಜುನಾಥ್ ಇವರುಗಳು ಅತ್ಯಂತರ ಗಂಭೀರವಾದಂತಹ ಕೋಲಾರ ಹಾಗೂ ಚಿಕ್ಕಬಳ್ಳಾಪುರದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಇದರ ಜೊತೆಗೆ ಹಲವಾರು ಮಹತ್ವದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಸಿದ್ಧಪಡಿಸಿಕೊಂಡ ಉತ್ತರದಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಸಲಾಗಿದೆ, ಅದರಲ್ಲಿ ಎಷ್ಟಕ್ಕೆ ಪೇಮೆಂಟ್ ಆಗಿದೆ, ಇನ್ನೂ ಎಷ್ಟು ಪೇಮೆಂಟ್ ಬಾಕಿ ಉಳಿದಿದೆ ಮತ್ತು ಇದಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ, ಆ ಮೊತ್ತದಲ್ಲಿ ಎಷ್ಟು ಖರ್ಚಾಗಿದೆ, ಅದರಲ್ಲಿ ಎಷ್ಟು ಉಳಿದಿದೆ ಎನ್ನುವುದರ ಮಾಹಿತಿ ಹಾಗೂ ಅವಶ್ಯವಿದ್ದರೆ ಇನ್ನೂ ಹಣ ಕೊಡುತ್ತೇವೆ ಎನ್ನುವ ಮಾಹಿತಿ ಬಿಟ್ಟರೆ ಬೇರೆಯಾವುದೇ ಮಾಹಿತಿ ಇಲ್ಲ. ಆದರೆ ಚರ್ಚೆಯ ಗಂಭೀರತೆಯನ್ನು ಗಮನಿಸಿದ ಮೇಲೆ, ಬಹಳ ದುರ್ದೈವದ ಪ್ರಸಂಗವೆಂದರೆ, ನಮ್ಮ ದೇಶದಲ್ಲಿ ಆರೂವರೆ ದಶಕಗಳ ನಂತರವೂ ಸಹ ನಾವು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದು, ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್ ರವರು ಕೆಲವು ಶಬ್ದಗಳನ್ನು ಅವರ ಮನಸ್ಸಿನ ವಿರುದ್ಧ ಬಳಕೆ ಮಾಡಿದರು. ಅಷ್ಟೇ ಅಲ್ಲ ಅದು ವಾಸ್ತವಸ್ಥಿತಿಯೂ ಹೌದು. ಆ ಒಂದು ಕಾರಣಕ್ಕೆ ಎಲ್ಲೋ ಒಂದು ಕಡೆ ಅತ್ಯಂತ ಗಂಭೀರವಾಗಿ ನಮ್ಮ ಪ್ರಯತ್ನಗಳನ್ನು ಮಾಡಬೇಕೆನ್ನುವ ಮನವರಿಕೆಯನ್ನು ಮಾಡಿಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಕೋಲಾರ ಹಾಗೂ ಚಿಕ್ಕಬಳ್ಳಾಪುರದ ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ಮಾತನಾಡಿದ ನನ್ನ ಶಾಸಕ ಸಹೋದ್ಯೋಗಿಗಳಿಗೆ ಮತ್ತು ಇದೇ ರೀತಿಯಲ್ಲಿ ಬೆಂಗಳೂರು ಗ್ರಾಮಾಂತರ ವಿಚಾರವಾಗಿ ಮಾತನಾಡಿರುತ್ತಾರೆ. ಇವರಿಗೆಲ್ಲಾ ನಾನು ಹೇಳುವುದೇನೆಂದರೆ, ಮೂರು ದಿವಸಗಳ ಕಾಲ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಹೋಗಿ ಅಲ್ಲಿಯೇ ವಾಸ್ತವ್ಯವಿರುತ್ತೇನೆ. ನನ್ನ ಪ್ರಯತ್ನ ಏನೆಂದರೆ, how can we solve these problems. ನಾನು ಈ ಸಮಸ್ಯೆಗಳನ್ನು ಎಷ್ಟೆಷ್ಟು ಸ್ಪಂದಿಸಬೇಕಿತ್ತೋ ಸ್ಪಂದಿಸಿದ್ದೇನೆಂದು ನನಗನ್ನಿಸಿದೆ. ಆದರೆ ಮಾನ್ಯ ಶ್ರೀ ರಮೇಶ್‌ಕುಮಾರ್

ಅವರು 15 ದಿವಸಗಳಿಗೊಮ್ಮೆ ನಮ್ಮ ಇಲಾಖೆಯ ACS ಅವರಿಗೆ, ಆಯುಕ್ತರಿಗೆ, Chief Engineer ಅವರಿಗೆ, Executive Engineer ಅವರಿಗೆ ಮತ್ತು ನನಗೂ ಸಹ ಫೋನ್ ಮಾಡುತ್ತಿದ್ದರು. 15 ದಿವಸಗಳಿಗೊಮ್ಮೆ ಫೋನ್ ಮಾಡಿದಾಗ ನಾವು ಏನೋ ಒಂದು ಭರವಸೆ ಕೊಟ್ಟಿರುತ್ತಿದ್ದೆವು. ಮತ್ತೆ ವಾರಾಂತ್ಯದಲ್ಲಿ ಸಭೆ ಕರೆಯುತ್ತಿದ್ದೆವು. ಈ ರೀತಿಯ 2–3 ಸಭೆಗಳನ್ನು ಮಾಡಿದ್ದೇವೆ. ನಮ್ಮ ಶಾಸಕ ಮಿತ್ರರು ಹಾಗೂ ಹಿರಿಯ ನಾಯಕರುಗಳೊಂದಿಗೆ ಇರುವ ಸಂಬಂಧ ಹಾಗೂ ಗೌರವದಿಂದ ನಮ್ಮ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ ಏನೆಲ್ಲಾ ಹೇಳಿದರೂ, ಮೊದಲನೆಯ ಸಭೆಯಲ್ಲಿ ಸಮಸ್ಯೆಗಳು, ವಿಚಾರಗಳೇನು ಪ್ರಸ್ತಾಪವಾಗಿತ್ತೋ ಅದೇ ವಿಚಾರಗಳು ಇಂದು ಪ್ರಸ್ತಾಪವಾಗಿವೆ. ಎಲ್ಲೋ ಒಂದು ಕಡೆ ಪೂರ್ಣವಾಗಿ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಿರುವುದಿಲ್ಲ. ಕನಿಷ್ಟ ಪಕ್ಷ short term ಗೆ ನೀರು ಸಿಕ್ಕಿದ್ದು, long term ಗೆ ಏನು ಮಾಡುವುದು ಎನ್ನುವ ಪ್ರಶ್ನೆಯೂ ಸಹ ಇವತ್ತಿಲ್ಲ. ಯಾವ ಸಮಸ್ಯೆಗಳೂ ಬಗೆಹರಿಯದಂತಹ ಭಾವನೆ ಸರ್ಕಾರಕ್ಕೂ ಇವತ್ತು ಬಂದಿದೆ. ಆದ್ದರಿಂದ ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಜನವರಿ 15ನೇ ತಾರೀಖಿನವರೆಗೆ ತಡೆಯಿರಿ. ನಮ್ಮ ಅಧ್ಯಯನ ಸಂಪೂರ್ಣವಾದ ನಂತರ ನಿಮಗೆ ಏನು ಮಾಡುವುದಕ್ಕೆ ಸಾಧ್ಯವಿದೆಯೋ, ಅಂದರೆ interim solution ಮಾಡೋಣ. ಏಕೆಂದರೆ ಎತ್ತಿನ ಹೊಳೆ ಬಹಳಷ್ಟು ಸಮಯ ತೆಗೆದುಕೊಳ್ಳುತ್ತದೆ. ಆ ಒಂದು ಯೋಜನೆಯಲ್ಲಿ ನಮಗೂ–ನಿಮಗೂ ಗೊತ್ತಿರುವಂತೆ ಅದರಲ್ಲಿ technical problem, environment problem, political problem ಗಳಿವೆ. ಅವುಗಳನ್ನು ಬಗೆಹರಿಸುವುದಕ್ಕೆ ನಮ್ಮ ಸರ್ಕಾರ ಎಲ್ಲಾ ರೀತಿಯಲ್ಲಿಯೂ ಪ್ರಯತ್ನ ಮಾಡುತ್ತಿದೆ. ಈ ಎಲ್ಲದರ ಹಿನ್ನೆಲೆಯಲ್ಲಿಯೂ ಸಹ ಎಲ್ಲಾ ರೀತಿಯಲ್ಲಿಯೂ ವೇಗದಿಂದ ಹೋಗುತ್ತಿದ್ದೇವೆ. ಇದರ ಜೊತೆಗೆ ಕೋಲಾರದಲ್ಲಿಯೇ ದೊಡ್ಡದೊಂದು treasure of water ಇದೆ. ಆದರೆ ಅದನ್ನು ಇಲ್ಲಿಯವರೆಗೆ ನಮಗೆ ಬಳಕೆ ಮಾಡುವಂತಹ ಅವಕಾಶವಿರಲಿಲ್ಲ. ಬ್ರಿಟಿಷರ ಕಾಲದಲ್ಲಿದ್ದಂತಹ ಬಂಗಾರದ ಗಣಿ ಅದನ್ನು ಕೋಲಾರದ ಚಿನ್ನದ ಗಣಿ ಎಂದು ಕರೆಯುತ್ತೇವೆ.

ಸುಮಾರು 3,000 ಕಿ.ಮೀ. ಟನಲ್‌ಗಳು ಕೆ.ಜಿ.ಎಫ್‌ನಲ್ಲಿ ಕ್ರಿಯೇಟ್ ಆಗಿವೆ. ಅಲ್ಲೆಲ್ಲಾ ಸಾಕಷ್ಟು ಪ್ರಮಾಣದ ನೀರು ಸಂಗ್ರಹ ಇದೆ. ಇಲ್ಲಿಯವರೆಗೂ ಅಲ್ಲಿರತಕ್ಕಂತ ಫ್ಲೋರೈಡ್, ಆರ್ಸೆನಿಕ್, ಇತ್ಯಾದಿಗಳನ್ನು ತೆಗೆದು ನೀರನ್ನು purify ಮಾಡಿ process ಮಾಡಿ ಕೊಡುವುದಕ್ಕೆ ಅವಕಾಶವಿರಲಿಲ್ಲ. ಏಕೆಂದರೆ technology was not there. Viable technology was not available. ಇವತ್ತು ನನಗೆ ತಿಳಿದ ಪ್ರಕಾರ ಈ ರೀತಿಯ ಟೆಕ್ನಾಲಜಿಗಳು ಬಂದಿವೆ. ಈ ವಿಷಯದ ಸಂಬಂಧವಾಗಿ ಇತ್ತೀಚೆಗೆ Mining Director ಆದ ಶ್ರೀ ಆರ್.ಹೆಚ್.ಸಾಹುಕಾರ್ ಅವರನ್ನು ಈ ವಿಷಯವಾಗಿ ಕರೆದು ಮಾತನಾಡಿದೆ. ಕೋಲಾರದ ಡಿ.ಸಿ. ಯವರೊಂದಿಗೆ ಮಾತನಾಡಿ ಆಯುಕ್ತರು ಈಗಾಗಲೇ ಕೆಲವೊಂದು ಮಾಹಿತಿಗಳನ್ನು ತೆಗೆದುಕೊಂಡಿದ್ದಾರೆ. ಶ್ರೀ ಆರ್.ಹೆಚ್.ಸಾಹುಕಾರ್ ಅವರು ಬಹಳಷ್ಟು ವಿವರಗಳನ್ನು ಕೊಟ್ಟಿದ್ದಾರೆ ಮತ್ತು ಇದರ ಜೊತೆಗೆ ನೀರಿನ ಗುಣಮಟ್ಟದ ಬಗ್ಗೆ ಎಚ್ಚರಿಕೆಯನ್ನೂ ಸಹ ಕೊಟ್ಟಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವ್): ಮಾನ್ಯ ಅಧ್ಯಕ್ಷರೆ, ನಾವು ಕೂಡ ಹಿಂದೆ ನಮ್ಮ ಸರ್ಕಾರವಿದ್ದಂತಹ ಸಂದರ್ಭದಲ್ಲಿ ಕೆ.ಜಿ.ಎಫ್. ಒಳಗಡೆಯಿರುವಂತಹ ನೀರಿನ ಸಂಗ್ರಹವನ್ನು ಉಪಯೋಗ ಮಾಡುವ ಸಲುವಾಗಿ ಎರಡು ಬಾರಿ ಆ ನೀರನ್ನು test ಮಾಡಿಸಿದ್ದೆವು. ಆ ನೀರಿನಲ್ಲಿ ಆರ್ಸೆನಿಕ್ ಹೆಚ್ಚಿದೆ. Poisonous gas ನಿಂದ ತುಂಬಿರುತ್ತದೆ. ಹಾಗಾಗಿ ಇದು ಯೋಗ್ಯವಲ್ಲ ಎಂದು ಸ್ಪಷ್ಟವಾದ ರಿಪೋರ್ಟ್ ಬಂದಿರುತ್ತದೆ. ಆ ನೀರನ್ನು ಯಾವ ರೀತಿಯಲ್ಲಿ ಸಂಸ್ಕರಣೆ ಮಾಡಬೇಕೆಂಬುದು ಬಹಳ ದೊಡ್ಡ ಪ್ರಶ್ನೆಯಿದೆ. ಕುಡಿಯುವುದಕ್ಕೆ ಯೋಗ್ಯವಾದ ನೀರನ್ನು ಕೊಡುವಂತಹ ಸಂದರ್ಭದಲ್ಲಿ ಇದರ ಬಗ್ಗೆ ಎಚ್ಚರಿಕೆಯನ್ನು ವಹಿಸುವುದು ಬಹಳ ಅವಶ್ಯಕತೆಯಿದೆ ಎನ್ನುವ ಹಿನ್ನೆಲೆಯಲ್ಲಿ ಅದನ್ನು ಬಿಟ್ಟಿದ್ದೆವು. ಈಗ ಏನಾದರೂ ಹೊಸ ತಂತ್ರಜ್ಞಾನವಿದ್ದು, ಸಾಧ್ಯತೆ ಇದ್ದರೆ ಆ ಪ್ರಯತ್ನವನ್ನು ಮಾಡಿ.

ಅಧ್ಯಕ್ಷರು: ಬಂದರೂ ಬರಬಹುದು. ಈಗ ಮಾನವನನ್ನು ಮೇಲೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಸಿ.ಟಿ. ರವಿ: ಮಂಗಳ ಗ್ರಹಕ್ಕೆ ಹೋಗೇ ಹೋಗುತ್ತಾರೆ. ಹೋಗದೇ ಇರುವವರು ಯಾರಾದರೂ ಇದ್ದಾರೆಯೇ?

ಅಧ್ಯಕ್ಷರು: ಈಗ ನೀವು ಇದನ್ನು ಹೇಳಿದ್ದು ಒಳ್ಳೆಯದಾಯಿತು. ಅವರು ಏನು ಹೇಳುತ್ತಾರೆ ನೋಡೋಣ.

ಶ್ರೀ ಬಸವರಾಜ ಬೊಮ್ಮಾಯಿ: Poisonous gas ನಿಂದ ತುಂಬಿದ್ದು ಇದು ಮಂಗಳ ಗ್ರಹಕ್ಕೆ ಹೋಗುವುದಲ್ಲ, ಪಾತಾಳಗರಡಿಗೆ ಹೋಗುವುದರಿಂದ ಬಹಳ ಎಚ್ಚರಿಕೆಯಿಂದ ಇರಬೇಕು.

ಶ್ರೀ ಅರವಿಂದ ಚಂದ್ರಕಾಂತ್ ಬೆಲ್ಲದ್ (ಹುಬ್ಬಳ್ಳಿ-ಧಾರವಾಡ ಪಶ್ಚಿಮ): ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಿಗೆ ಇದೇ ವಿಷಯದ ಪೂರಕವಾಗಿ ಒಂದೆರಡು ಮಾತುಗಳನ್ನು ಸದನದ ಮುಖಾಂತರ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಒಂದೆರಡು ನಿಮಿಷ, ಇವತ್ತು ನಮ್ಮ ಚಿಕ್ಕಬಳ್ಳಾಪುರ ಮತ್ತು ಕೋಲಾರದಲ್ಲಿ ಏನು ಪರಿಸ್ಥಿತಿ ಇದೆ? ಅದೇ ಪರಿಸ್ಥಿತಿ ಗುಜರಾತ್‌ನ ಬಾವಾನಗರದಲ್ಲಿ ಇತ್ತು. ಅಲ್ಲಿ ನಮ್ಮ ಮಿತ್ರರೊಬ್ಬರ ಮನೆ ಇತ್ತು. ಈಗ ಅವರಿಗೆ ಸುಮಾರು 65 ವರ್ಷವಾಗಿದೆ. ಅವರ ಮನೆ ಮುತ್ತಜ್ಜನ ಕಾಲದ ಮನೆ ಆಗಿದೆ. ಆ ಮನೆಯಲ್ಲಿ ಒಂದು ಬಾವಿ ಇತ್ತು. ಅವರು ಸಣ್ಣವರಾಗಿದ್ದಾಗ ಆ ಬಾವಿಯಲ್ಲಿ 40-45 feet ನೀರು ಇತ್ತಂತೆ, ಕ್ರಮೇಣ ಆ ಬಾವಿಯಲ್ಲಿ ನೀರು ಕಡಿಮೆಯಾಯಿತು. ಬಾವಾನಗರದ ಕಥೆಯನ್ನು ಅವರೇ ಹೇಳಿದ್ದು. ನೀರು ಕಡಿಮೆಯಾಗುತ್ತಾ ಹೋದಂತೆ ಆ ಬಾವಿ ಒಣಗಿತು. ಆಮೇಲೆ ಅವರು 300, 400, 800, 890 feet ವರೆಗೂ ಬೋರ್‌ವೆಲ್ ಅನ್ನು ತೆಗೆಸಿದರೂ ಕೂಡ ಆ ಮನೆಯ ಬಾವಿಯಲ್ಲಿ ನೀರು ಇಲ್ಲದಂತೆ ಆಯಿತು. ಅವರು ಬಾಂಬೆಯಲ್ಲಿರುತ್ತಿದ್ದರು. ಹಾಗಾಗಿ, ಬಾವಾ ನಗರದ ಮನೆಯನ್ನು ಅವರು ಮಾರಿದರು. ಸುಮಾರು 5 ವರ್ಷದ ಹಿಂದೆ ಆ ಬಾವಾ ನಗರದ ಮನೆಯನ್ನು ಯಾರು ತೆಗೆದುಕೊಂಡಿದ್ದ ಅವನು ಅವರನ್ನು ಭೇಟಿ ಆದ ಸಂದರ್ಭದಲ್ಲಿ

ಆತ, ಅವರಿಗೆ ನಿಮಗೆ ನೆನಪಿದೆಯೇ? ನಿಮ್ಮ ಮನೆಯಲ್ಲಿ ಬಾವಿ ಇತ್ತು ಎಂದು ಕೇಳಿದನಂತೆ. ಅದಕ್ಕೆ ಅವರು ಹೌದು. ಅದು ಏನಾಯಿತು? ಎಂದು ಅವರು ಆತನನ್ನು ಕೇಳಿದರಂತೆ. ಅದಕ್ಕೆ ಆತನು ಆ ಭಾವಿಯೊಳಗೆ ನೀರು ಬಂದಿದೆ ಎಂದು ಹೇಳಿದನಂತೆ. ಹೌದಾ, ಎಷ್ಟು feet ನೀರು ಬಂದಿದೆ ಎಂದು ಅವರು ಕೇಳಿದರಂತೆ, ಅದಕ್ಕೆ ಆತನು 15 feet ಗೆ ನಮಗೆ ನೀರು ಸಿಗುತ್ತಿದೆ ಎಂದು ಹೇಳಿದ. ಇದು ಬಾವಾ ನಗರದ ಕಥೆಯಾಗಿದೆ.

ಶ್ರೀ ಕೆ. ಶಿವಮೂರ್ತಿ: ಇದು ಬಿಜೆಪಿ ಮಾಡಲಾ?

ಶ್ರೀ ಅರವಿಂದ ಚಂದ್ರಕಾಂತ್ ಬೆಲ್ಲದ್: ಇದು ಬಿಜೆಪಿ ಮಾಡಲ್ ಅಲ್ಲ. ಇದು ಬಾವಾ ನಗರದ ಕಥೆಯಾಗಿದೆ.

(ಗೊಂದಲ)

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್: ಬಾವಿಯಲ್ಲಿ ನೀರು ಹೇಗೆ ಬಂತು?

ಶ್ರೀ ಅರವಿಂದ ಚಂದ್ರಕಾಂತ್ ಬೆಲ್ಲದ್: ಅಲ್ಲಿ ಏನಾಗಿದೆ ಎಂದು ಒಂದು ನಿಮಿಷ ಕೇಳಿ.

ಅಧ್ಯಕ್ಷರು: ಏನಾಗಿದೆ? ಹೇಳಿ.

ಶ್ರೀ ಅರವಿಂದ ಚಂದ್ರಕಾಂತ್ ಬೆಲ್ಲದ್: ಮಾನ್ಯ ಅಧ್ಯಕ್ಷರೆ, ಸುಮಾರು 1 ಲಕ್ಷ ಮೇಲ್ಪಟ್ಟು ಗುಜರಾತಿನಲ್ಲಿ ಚಿಕ್ಕ ಬಾಂದಾರುಗಳನ್ನು ನಿರ್ಮಿಸಿದ್ದಾರೆ. ಅವುಗಳನ್ನು ನಿರ್ಮಿಸಲು ಯಾವುದೋ ದೊಡ್ಡ science ಬೇಕಾಗಿಲ್ಲ, technology ಬೇಕಾಗಿಲ್ಲ, ಚಿಕ್ಕ ಬಾಂದಾರುಗಳನ್ನು ನಿರ್ಮಿಸುವುದರ ಮೂಲಕ ಈ ನೀರಿಗೆ solution ಸಿಗುತ್ತದೆ.

ಶ್ರೀ ಕೆ.ಎಸ್. ಮಂಜುನಾಥಗೌಡ: ಮಳೆ ಬಿದ್ದರೆ ತಾನೆ ಬಾಂದಾರು ಮಾಡುವುದು. ನಮಗೆ ಮಳೆನೇ ಇಲ್ಲ. ನೀರಿನ source ಇಲ್ಲ. ಮಳೆ ಇಲ್ಲದೆ

ಏನು ಮಾಡುತ್ತೀರಿ? ಮಳೆನೇ ಇಲ್ಲವೆಂದರೆ ಇವರು ಬಾಂದಾರು ಮಾಡುವುದಕ್ಕೆ ಹೋಗುತ್ತಾರೆ. ನಾವು ನೀರನ್ನು ಮತ್ತೆ ಎಲ್ಲಿಂದ ತರುವುದು?

ಶ್ರೀ ಕೆ. ಶಿವಮೂರ್ತಿ: ಗುಜರಾತ್‌ನಲ್ಲಿ ಮಳೆ ಬರುತ್ತದೆ. ಹಾಗಾಗಿ, ಗುಜರಾತ್‌ನಲ್ಲಿ ಹಾಗೆ ಆಗುತ್ತದೆ. ಆದರೆ, ಇಲ್ಲಿ ಮಳೆ ಇಲ್ಲವಲ್ಲ.

(ಗೊಂದಲ)

ಶ್ರೀ ಅರವಿಂದ ಚಂದ್ರಕಾಂತ್ ಬೆಲ್ಲದ್: ಗುಜರಾತ್‌ನಲ್ಲಿಯೂ ಮಳೆ ಇಲ್ಲ. ಬಾವಾ ನಗರವು ಕಡಿಮೆ ಮಳೆ ಬರುವ ಪ್ರದೇಶವಾಗಿದೆ.

(ಗೊಂದಲ)

ಅಧ್ಯಕ್ಷರು: ಆಯಿತು. ಹೇಳಿ.

ಶ್ರೀ ಕೆ. ಶಿವಮೂರ್ತಿ: ಮಾನ್ಯ ಅಧ್ಯಕ್ಷರೆ, ಗುಜರಾತ್‌ನಲ್ಲಿ ಮಾತ್ರವಲ್ಲ. ಇಡೀ ರಾಷ್ಟ್ರದಲ್ಲಿ ಹಬ್ಬಿಕೊಂಡಿದೆ.

(ಗೊಂದಲ)

ಅಧ್ಯಕ್ಷರು: ನೀವು ಹೀಗೆ ಇದ್ದರೆ ಹಾಗೇ ಆಗುತ್ತದೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ಗುಜರಾತ್‌ನಲ್ಲಿ ಭೂಕಂಪವಾದ ದಿನದಿಂದ ನೀರು ಬಂದಿರುವುದು.

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವರಾಜ್ ಬೊಮ್ಮಾಯಿಯವರು he wanted to caution us. I take your caution. ನಾನು ಮೊದಲೇ ಹೇಳಿದ್ದೇನೆ. ಆ ಎಚ್ಚರಿಕೆಯಿಂದಲೇ ನಾವು ಆ source ಅನ್ನು ನೋಡುತ್ತಿದ್ದೇವೆ. ಅದರ ಜೊತೆಗೆ, ತಮಗೆಲ್ಲರಿಗೂ ಆಶ್ಚರ್ಯವಾಗಬಹುದು. ಈಗಾಗಲೇ ಡಾ॥ ರಾಧಾಕೃಷ್ಣ ಎಂದು ಹೇಳಿ one of the great Geologist of India ಪದ್ಮಭೂಷಣ ರಾಧಾಕೃಷ್ಣನವರು ನಮ್ಮ

ಕರ್ನಾಟಕದವರು. ಅವರು ಅಧ್ಯಯನ ಮಾಡಿ ಸಾಕಷ್ಟು ಈ ವಿವರಗಳನ್ನು ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಮಾನ್ಯ ಅಧ್ಯಕ್ಷರೆ, ನಾನು, ಈ ಸದನಕ್ಕೆ ಬಹಳ ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ. ಏನು ಈ ಗಣಿಯಲ್ಲಿ ನೀರಿರತಕ್ಕಂಥ ಪ್ರಮಾಣ ಇದೆ ಅದನ್ನು ಸರಿಯಾಗಿ ಪತ್ತೆ ಹಚ್ಚಿ, ಅದರಲ್ಲಿತಕ್ಕಂಥ contamination ಅನ್ನು ಯಾವ ರೀತಿಯಾಗಿ ನಾವು ಅದನ್ನು ಪರಿಷ್ಕರಣೆ ಮಾಡಬಹುದು, ಸಂಸ್ಕರಣೆ ಮಾಡಿ ಉಪಯುಕ್ತ ನೀರನ್ನಾಗಿ ಮಾಡಿಕೊಳ್ಳಬಹುದು ಎನ್ನುವುದನ್ನು ಸಂಪೂರ್ಣ ಅಧ್ಯಯನದ ಜೊತೆಗೆ, ನಮಗೆ ಶಿಫಾರಸ್ಸು ಕೊಡುವುದಕ್ಕೆ ಒಂದು ತಂತ್ರಜ್ಞರ ಸಮಿತಿಯನ್ನು ಮಾಡಬೇಕು. ಏಕೆಂದರೆ, it is not a very big work, where it will consume months together. ಒಂದು 15–20 ದಿವಸ available data, available technology ಯೊಂದಿಗೆ experts ಕುಳಿತಾಗ ಮಾತ್ರ ನಮಗೆ ಆ ವರದಿಯನ್ನು ಕೊಡುವುದಕ್ಕೆ ಸಾಧ್ಯವಿದೆ. ಒಂದು ತಿಂಗಳಿನಲ್ಲಿ ಒಂದು ದಿವಸ ವರದಿ ತರಿಸಿಕೊಂಡು, ಸೂಕ್ತವಾಗಿರತಕ್ಕಂಥ ಆ ಸಮಿತಿ ನಮ್ಮ ಕರ್ನಾಟಕಕ್ಕೆ ಒಂದು ಹೊಸ ಮೂಲವನ್ನು ಕಂಡುಕೊಳ್ಳುವುದಕ್ಕೆ ಮತ್ತು ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಪರಿಹಾರ ಹುಡುಕುವುದರಲ್ಲಿ ಒಂದು ಪ್ರಯತ್ನವನ್ನು ಮಾಡುತ್ತೇವೆ. ಸದಸ್ಯರು ಬಹಳಷ್ಟು ಚಿಂತನೆಯನ್ನು ವ್ಯಕ್ತ ಮಾಡಿದರು. ಈಗಾಗಲೇ ಫ್ಲೋರೈಡ್ ಬಗ್ಗೆ ಮಾತನಾಡದೇ ಇರುವವರು ಇಲ್ಲ. ನಮ್ಮ ಪರಿಸ್ಥಿತಿ ಹೇಗಾಗಿದೆ ಎಂದರೆ, ಫ್ಲೋರೈಡ್ ಬಗ್ಗೆ ನಾವೆಲ್ಲರೂ ಮಾತನಾಡುತ್ತೇವೆ. ಆದರೆ ನೀವು ಪತ್ರ ತೆಗೆದುಕೊಂಡು ಬಂದು ಹೇಳುವುದನ್ನು ನಾನು ಕ್ಷೇತ್ರಕ್ಕೆ ಬಂದ ಸಂದರ್ಭದಲ್ಲಿ ನೋಡಿರುತ್ತೇನೆ, ಕೇಳಿರುತ್ತೇನೆ. ನೀವು ಹೇಳುವುದನ್ನು ನಂಬುತ್ತೇನೆ. ಆ ಫೋಟೋದಲ್ಲಿ ಕಾಲು ಮಣಿದಿದ್ದು, ಕೈ ಮಣಿದಿದ್ದು, ಡೊಂಕ ಎಲ್ಲ ನೋಡುತ್ತೇವೆ. ಆದರೆ, ನಮ್ಮ Executive Engineer, CEO ರವರು ನಮಗೆ ವರದಿಯನ್ನು ಕಳುಹಿಸಿರುತ್ತಾರೆ. ಆ ವರದಿ ಪ್ರಕಾರ ಅಲ್ಲಿ ಕುಡಿಯುವುದಕ್ಕೆ ಯೋಗ್ಯವಾದಂಥ, ಸುರಕ್ಷಿತವಾದ ನೀರಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ): ಮಾನ್ಯ ಪಾಟೀಲ್‌ರವರೆ, ನಿಮ್ಮ Executive Engineer, Chief Engineer ಗಳಿಗೆ ಯಾರಿಗೂ ಲಕ್ಷ್ಯ ಹೊಡೆಯಲಿಲ್ಲ. ಅವರ ಮಂದಿಗೆ ಯಾರಿಗೂ ತೊಂದರೆ ಆಗಲಿಲ್ಲ. ಅವರು ಕುಡಿಯುವ ನೀರಿಗೆ ಏನೂ ರೋಗವಿಲ್ಲ. ಆದ್ದರಿಂದ, ಅವರು ಹಾಗೆ ಬರೆಯುತ್ತಾರೆ. ಭಾಷೆಯನ್ನು ನಿಗ್ರಹಿಸಿ ಮಾತನಾಡಬೇಕಾಗಿದೆ. ಅದನ್ನೇ ನಾನು ಹೇಳಿದ್ದು, ಅವರನ್ನು ಮನುಷ್ಯರನ್ನಾಗಿ ಕೆಲಸ ಮಾಡುವುದಕ್ಕೆ ಹೇಳಿ. ನಮ್ಮ ಕಷ್ಟ ಎಲ್ಲವೂ ಅಲ್ಲೇ ಇರುವುದು.

ಶ್ರೀ ಎಂ. ಕೃಷ್ಣಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಆ ಅಧಿಕಾರಿಗಳು ಆ ಭಾಗದಲ್ಲಿ ಇದ್ದಾಗ ಮಾತ್ರ ಅವರಿಗೆ ಗೊತ್ತಾಗುತ್ತದೆ. ಬೆಂಗಳೂರಿನಲ್ಲಿ ಐಷಾರಾಮಿ ಜೀವನ ನಡೆಸುವಂಥವರಿಗೆ ಗೊತ್ತಾಗುವುದಿಲ್ಲ. ಅಧಿಕಾರಿಗಳು ಆ ಭಾಗದಲ್ಲಿ ಇದ್ದರೆ ಮಾತ್ರ ಗೊತ್ತಾಗುತ್ತದೆ.

ಅಧ್ಯಕ್ಷರು: ಮಾನ್ಯ ರೆಡ್ಡಿಯವರೆ, ಅವರು ಪೂರ್ತಿಯಾಗಿ ಹೇಳಲಿ.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದೊಳಗೆ ಏನಾಗಿದೆ ಎಂದರೆ, ನಮ್ಮ ಅಧಿಕಾರಿ ವರ್ಗದೊಳಗೆ ಈ ಸುಳ್ಳು ವರದಿಯನ್ನು ಸೃಷ್ಟಿ ಮಾಡುವುದು ಏನಿದೆ ಅದು ನಮಗೆಲ್ಲರನ್ನೂ ಕೈ ಕಟ್ಟಿ ಹಾಕುತ್ತದೆ. ನಮ್ಮ ಜನರು ಇವತ್ತೇನು ನೋವನ್ನು ಅನುಭವಿಸಬೇಕು ಆ ಅನುಭವಕ್ಕೆ ನಮ್ಮನ್ನು ದುಗಿಸುತ್ತಿದ್ದಾರೆ. ನಿಮಗೆ ಆಶ್ಚರ್ಯವಾಗಬಹುದು. ನಮ್ಮ ಮುಂಡರಗಿ ತಾಲ್ಲೂಕಿನೊಳಗೆ ಎಲ್ಲಿ flouride was first detected, ಮಾನ್ಯ ಬಸವರಾಜ್ ರವರಿಗೆ ಗೊತ್ತಿದೆ. ಅಲ್ಲಿ 100 ಕ್ಕೆ 80 ರಷ್ಟು ಫ್ಲೋರೈಡ್ ಮುಕ್ತ ನೀರು ಎಂದೇ ಸರ್ಟಿಫಿಕೇಟ್ ಕೊಡುತ್ತಾರೆ. ನಾನು ಕೆಲವು ಸಂದರ್ಭಗಳಲ್ಲಿ ಈ ಕುಡಿಯುವ ನೀರಿಗಾಗಿ ಜನಾಂದೋಲನ ಮಾಡುವಾಗ ಯಾವ ಯಾವ ಹಳ್ಳಿಗಳಿಗೆ ಹೋಗಿದ್ದೆ, ಯಾವ ಯಾವ ಹಳ್ಳಿಗಳಲ್ಲಿ ಫ್ಲೋರೈಡ್ ಯುಕ್ತ ನೀರಿರುವುದನ್ನು ಕಣ್ಣಾರೆ ನೋಡಿದ್ದೆ, ಅಲ್ಲಿ ಸುರಕ್ಷಿತ ನೀರು ಲಭ್ಯವಿದೆ ಎಂದು ನಾನು ಮಂತ್ರಿಯಾದ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು ವರದಿ ತಂದಿಡುತ್ತಾರೆ. ಆದ್ದರಿಂದ, ಎಲ್ಲಿ ಸುರಕ್ಷಿತ ನೀರು ಲಭ್ಯವಿದೆಯೋ ಅಲ್ಲಿ ಯಾವ ಕಾರಣಕ್ಕೂ

ನಾವು NRDWP ಹಣವನ್ನು ಗುಣಮಟ್ಟದ ನೀರು ಕೊಡುವುದಕ್ಕೆ ಉಪಯೋಗ ಮಾಡುವಂತಿಲ್ಲ. ಕಾರಣ, ಆ ಕಾಗದ, ಆ ಆದೇಶ, ಆ ಸರ್ವೆ ರಿಪೋರ್ಟ್, quality test report ಅನ್ನು ತಂದು ನಮ್ಮ ಎದುರಿಗೆ ಇಡುತ್ತಾರೆ. ಏನು ಮಾಡಬೇಕು, ಏನು ಬಿಡಬೇಕು ಎಂದು ನಾವು ನಿರ್ಣಯ ಮಾಡುವುದಕ್ಕೆ ತೊಂದರೆ ಆಗುತ್ತದೆ. ನಮ್ಮ ಹಾವೇರಿ ಜಿಲ್ಲೆಯೊಳಗೆ ಸುಮಾರು 68 ಗ್ರಾಮದೊಳಗೆ ಸ್ವತಃ ಅವರೇ ಕಟ್ಟಡ ಕಟ್ಟಿಕೊಂಡು, ಒಂದೊಂದು ಘಟಕಕ್ಕೆ 5 ಲಕ್ಷ ರೂ.ಗಳನ್ನು ಗ್ರ್ಯಾಂಟ್ ಕೊಡುತ್ತೇವೆಂದು ಹೇಳಿದ್ದೆವು. ಮಂತ್ರಿಗೆ ಆಸಕ್ತಿ ಇದ್ದರೂ ಸಹ 6–8 ತಿಂಗಳಾದರೂ ಕೂಡಾ ನಮ್ಮ ಹಿರಿಯ ಅಧಿಕಾರಿಗಳು ಅದನ್ನು ಏನಾದರೂ ಮಾಡಿ ಮಾಡಬೇಕೆನ್ನುವಂಥ ಕಾಳಜಿ ಇದೆ ಎಂದು ನನಗೆ ಅನ್ನಿಸುತ್ತಿದೆ. ಅದು ಇದ್ದಾಗ್ಯೂ ನಮಗೆ ಇಲ್ಲಿಯವರೆಗೂ ಏನೂ ಮಾಡುವುದಕ್ಕೆ ಆಗಿರಲಿಲ್ಲ. ಕೇಂದ್ರ ಸರ್ಕಾರದವರು ನಮಗೆ flexi fund ಕೊಟ್ಟರು. ಆ flexi fund ಒಳಗೆ ಅಧಿಕಾರ ಉಪಯೋಗ ಮಾಡಿ ಎಂದು ನಮ್ಮ ACS ರವರು ಹೇಳಿದ್ದಾರೆಂದು ಹೇಳಿ somehow we have solved that problem for sometime now. ನಾನು ಶಾಸಕರಲ್ಲಿ ವಿನಂತಿ ಮಾಡುತ್ತೇನೆ. ನೀವು ಏನು monitoring committee Chairman ಇದ್ದೀರಿ ಅಲ್ಲಿ ನೀರು ಎಷ್ಟು ಬಂದಿದೆ? ಎಷ್ಟು ಬೋರ್‌ವೆಲ್ ಹಾಕಿದ್ದೇವೆಂದು ನೀವು ನೋಡುವುದಕ್ಕಿಂತ ಹೆಚ್ಚು quality of water ಬಗ್ಗೆ ರಿಪೋರ್ಟ್ ಏನು ಕಳುಹಿಸಿದ್ದೀರಿ ಎಂದು ಕೇಳಿ.

ಶ್ರೀ ಆನಂದ್ ವಿಶ್ವನಾಥ ಚಂದ್ರಶೇಖರ್ ಮಾಮನಿ: ಮಾನ್ಯ ಅಧ್ಯಕ್ಷತೆ, Monitoring Committee Chairman ಆಗಿ ನಾನಿದ್ದೇನೆ, ಆದರೆ ಸಮಿತಿ ಸಭೆಯನ್ನು ಕರೆಯುವವರು ಯಾರು? ಇವತ್ತಿನವರೆಗೆ ಯಾರೂ ಕರೆದಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್: ನೀವು Chairman ಇದ್ದೀರಿ.

ಶ್ರೀ ಆನಂದ್ ವಿಶ್ವನಾಥ ಚಂದ್ರಶೇಖರ ಮಾಮನಿ: ದಯಮಾಡಿ ಒಂದು ನಿಮಿಷ. ಯಾವುದೇ ಅಧಿಕಾರಿ ಇವತ್ತಿನವರೆಗೆ ನೀವು Monitoring Committee Chairman ಎಂದಿದ್ದಿಲ್ಲ. ಜಿಲ್ಲಾ ರಿವ್ಯೂ ಮೀಟಿಂಗೂ ಸಹ

ಕರೆದಿಲ್ಲ. ಇಲ್ಲಿಯವರೆಗೆ ನಮಗೆ ಮಾಹಿತಿ ಇಲ್ಲ. ತಾವು ಹೇಳಿದ್ದೇ ನನಗೆ ಮೊದಲ ಮಾಹಿತಿ.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಮಾಮನಿಯರೆ, ಅದಕ್ಕಾಗಿಯೇ ನಾನು ನಿಮಗೆ ಆ ಪುಸ್ತಕವನ್ನು ಮಾಡಿಕೊಟ್ಟಿದ್ದೇನೆ. ಆ ಪುಸ್ತಕದೊಳಗೆ Order copy ಸಹ ಇದೆ. ಅದರೊಳಗೆ ಯಾರ್ಯಾರು ಸದಸ್ಯರಿದ್ದಾರೆ ಎಂದು ಇದೆ. ಯಾವಾಗ, ಯಾರು ಸಭೆ ಕರೆಯಬೇಕೆನ್ನುವುದು ಇದೆ. ಅದನ್ನು ದಯಮಾಡಿ, ತಾವು ಪರಾಮರ್ಶಿಸಿ. ಮಾನ್ಯ ಅಧ್ಯಕ್ಷರೆ, ಅದರ ಜೊತೆಗೆ ಈ coverage ವಿಚಾರದಲ್ಲಿ ಹೇಳಬೇಕೆಂದರೆ ನಮಗೆಲ್ಲರಿಗೂ ನೋವಾಗುತ್ತದೆ. ಏನಪ್ಪಾ ನಾವು ಇಷ್ಟು ಕತ್ತಲೆಯೊಳಗಿದ್ದೇವೆಂದು ಅನ್ನಿಸುತ್ತದೆ. ಸುಮಾರು 5,000ಕ್ಕಿಂತ ಹೆಚ್ಚು ಗ್ರಾಮಗಳು ನಮ್ಮ ರಾಜ್ಯದೊಳಗೆ ಹೀಗೆ ಕತ್ತಲು ಇವತ್ತು ಯಾರೋ ಮುಂಜಾನೆ ಮಾತನಾಡಿದರು. Per head 100 ಲೀಟರ್ ನೀರನ್ನು ಕೊಡುತ್ತೇವೆಂದು ಹೇಳಿದ್ದೇವೆ ಎಂದು, ನಾವು ಹೇಳಿದ್ದು, ಕ್ಯಾಬಿನೆಟ್‌ನಲ್ಲಿ ನಿರ್ಣಯ ಮಾಡಿದ್ದು ಬಜೆಟ್‌ನಲ್ಲಿ announce ಮಾಡಿದ್ದು 85 ಲೀಟರ್‌ಗಳು. We are the highest in the State. Wherein ruralಗೆ we are highest in the State. ಆದರೆ, ನಾವೇನು ಮೊದಲು 55 ಲೀಟರ್ ಕೊಡುತ್ತಿದ್ದೆವು, ನಂತರ 40 ಕೊಡುತ್ತಿದ್ದೆವು, ಅದು ಒಂದು ಬೇರೆಯೇ ಕಥೆ. ಇವತ್ತು ಸುಮಾರು 5,000 ಕ್ಕಿಂತ ಹೆಚ್ಚು ಗ್ರಾಮಗಳಲ್ಲಿ ನಾವು 25%ಗಿಂತ ಕಡಿಮೆ ಕೊಡುತ್ತೇವೆ. ಯಾವುದಕ್ಕೆಂದರೆ 85ಕ್ಕೆ 25% ಅಲ್ಲ, 55ಕ್ಕೆ 25% ಕ್ಕಿಂತ ಕಡಿಮೆ ಎಂದರೆ 14 ಲೀಟರ್‌ನಷ್ಟು ಸಹಿತ per head ಕೊಡುವುದಿಲ್ಲ. This is what the coverage we have made in our State. To be exact, coverage status of partially covered habitation with population coverage as on 01.04.2014 less than 25%, 5,225 habitations ವಸತಿಗಳು, less than 50% 16,161 ವಸತಿಗಳು. ನಮ್ಮ ರಾಜ್ಯದಲ್ಲಿ ಒಟ್ಟು ವಸತಿಗಳು 59,753, ಇದರಲ್ಲಿ 21,000 ಗ್ರಾಮಗಳನ್ನು ನಮ್ಮ coverage ತಲಾ 14 ಲೀಟರ್ ಕೊಡುತ್ತೇವೆ. ಇದು ವಾಸ್ತವದ ಸಂಗತಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಇದು ನಿಜ, ಬೋರ್ ಕೊರೆಯುತ್ತೇವೆ, 14 ಲೀಟರ್ ಬರುತ್ತಿರುತ್ತದೆ, ಏಕ್‌ದಮ್ ಬೋರ್ ನಿಂತು ಹೋಗುತ್ತದೆ, 2 ಲೀಟರ್ ಸಹ ಬರುವುದಿಲ್ಲ. ಅಧಿಕಾರಿಗಳ ಮಾಹಿತಿ ಕಟ್ಟಿಕೊಂಡು ನಾವು ಏನು ಮಾಡೋಣ? ಅವರು ನಿಮ್ಮಿಂದ ಈ ರೀತಿ ಹೇಳಿಸುತ್ತಾರೆ. ಬೋರ್ ಕೊರೆಯುತ್ತಾರೆ, ನೀರು 14 ಅಲ್ಲ 20 ಬರುತ್ತಿರುತ್ತದೆ. Bore sudden ಆಗಿ ನಿಂತು ಹೋಗುತ್ತದೆ. ಅದು ಹೇಗೆ coverage ಮಾಡಿದ್ದೇವೆಂದು ಹೇಳುತ್ತಾರೆ? ಅವತ್ತು ಮಾಹಿತಿ ಹೇಳುತ್ತಾರೆ, ಇವರು ಅಧಿಕಾರಿಗಳ ಹತ್ತಿರ news ತೆಗೆದುಕೊಳ್ಳುತ್ತಾರೆ. ಮಾರನೇ ಬೆಳಿಗ್ಗೆ ಬೋರ್ ನಿಂತ ಹೋಗಿರುತ್ತದೆ. ಅವನು ಯಾವುದೋ ಪಕ್ಕದ ಊರಿಗೆ ಹೋಗಿ ಟ್ಯಾಂಕರ್‌ನಿಂದ ಹಿಡಿದುಕೊಂಡು ಬರಬೇಕು. ಪರಿಸ್ಥಿತಿಯನ್ನು ಗಾಂಭೀರ್ಯವಾಗಿ ತೆಗೆದುಕೊಳ್ಳಬೇಕು, ಸುಮ್ಮನೆ ಅಂಕಿ ಸಂಖ್ಯೆಯಲ್ಲಿ ಇದು solve ವಾಗುವುದಲ್ಲ.

ಅಧ್ಯಕ್ಷರು: ನೀವು ಉತ್ತರ ಹೇಳಿ.

ಶ್ರೀ ಕೆ. ಶಿವಮೂರ್ತಿ: Sir, habitation is your department statistics or Revenue department statistics?

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, This is Government of India statistics, provided from my department also. These are the authentic figures from which I am quoting.

ಶ್ರೀ ಕೆ. ಶಿವಮೂರ್ತಿ: 21,000 villages 59,715 non revenue villages, is it right?

ಶ್ರೀ ಹೆಚ್.ಕೆ. ಪಾಟೀಲ್: No.

ಅಧ್ಯಕ್ಷರು: ಮಾನ್ಯ ಮಂತ್ರಿಗಳೆ, ಈಗ ಚರ್ಚೆಯಾಗಿದ್ದು ಕೋಲಾರ, ಚಿಕ್ಕಬಳ್ಳಾಪುರ ಇಲ್ಲಿಯ ಕುಡಿಯುವ ನೀರಿನ ಸಮಸ್ಯೆ, ರಾಜ್ಯದ್ದೇ

ಹೇಳುವುದಾಗಿದ್ದರೆ ಎಲ್ಲರೂ ಭಾಗವಹಿಸುತ್ತಿದ್ದರು. ಆದರೆ ಆ ಚರ್ಚೆಯಾಗಲಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಏಕೆ ಹೇಳಿದೆ ಎಂದರೆ ಅತ್ಯಂತ ಗಂಭೀರವಾಗಿರುವಂಥ ವಿಷಯಗಳನ್ನು ಎರಡೂ ಜಿಲ್ಲೆಯವರು ತೆಗೆದುಕೊಂಡು ಬಂದರು. ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಇಲ್ಲಿಯವರೆಗೆ ನಾವು ಬಂದ ಮೇಲೆ 1000 ಘಟಕಗಳನ್ನೇನು 2013–14ನೇ ಇಸವಿಯಲ್ಲಿ ಹೇಳಿದ್ದೆವು, ಅದರಲ್ಲಿ 79 ಕೋಲಾರಕ್ಕೆ sanction ಮಾಡಿದ್ದು, ಈ ಪೈಕಿ 63 ಕಮೀಷನ್ ಆಗಿ ಪ್ರಾರಂಭವಾಗಿ ಸೇವೆ ಕೊಡುತ್ತಿವೆ. ಚಿಕ್ಕಬಳ್ಳಾಪುರಕ್ಕೆ 24 sanction ಮಾಡಿದ್ದೇವೆ, ಈ ಪೈಕಿ 7 ಮಾತ್ರ ಪ್ರಾರಂಭವಾಗಿವೆ. 2014–15ನೇ ಇಸವಿಯೊಳಗೆ ನಾವು ಇಲ್ಲಿಂದ proposalನ್ನು expect ಮಾಡುತ್ತಿದ್ದೇವೆ. ಇನ್ನೂ ಹೆಚ್ಚಿನ ಆರ್.ಓ.ಗಳನ್ನು ಕೊಡಬೇಕೆನ್ನುವುದು ಮಾನ್ಯ ರಮೇಶ್‌ಕುಮಾರ್‌ರವರ suggestion ಇದೆ, ಆ ಕಾರ್ಯಕ್ರಮವನ್ನು ಕೊಡುವುದಕ್ಕೆ ಏನೇನು ಮಾಡಬೇಕು ನಾವು ಮಾಡುತ್ತೇವೆ. ಅದರ ಜೊತೆಗೆ ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುವುದು ಇಷ್ಟೆ. ನಮ್ಮಲ್ಲಿ ಶುದ್ದ ನೀರಿನ ಕಲ್ಪನೆ ಬಂದಿರುವುದೇ ಈಗ 2–3 ವರ್ಷಗಳಲ್ಲಿ, ಮೊದಲೆಲ್ಲಾ ನಾವು ಬರೇ ನೀರು ಕೊಡುವುದು ಎಂದು ಹೇಳುತ್ತಿದ್ದೆವು. ಕುಡಿಯುವುದಕ್ಕೆ ಶುದ್ಧ ನೀರನ್ನು ಕೊಡಬೇಕೆನ್ನುವ ನಮ್ಮ ಪ್ರಯತ್ನವನ್ನು ಗಂಭೀರವಾಗಿ ಮುಂದುವರೆಸುತ್ತೇವೆ. ಕೋಲಾರ ಹಾಗೂ ಚಿಕ್ಕಬಳ್ಳಾಪುರ ವಿಷಯದಲ್ಲಿ ಏನೇನು ಸಮಸ್ಯೆಗಳಿವೆಯೋ ತಕ್ಷಣದಲ್ಲಿ ಸ್ಪಂದಿಸಬೇಕಾಗಿರುವುದಕ್ಕೆ ನಾವು ಸ್ಪಂದಿಸುತ್ತೇವೆ. ಹಣಕಾಸಿನ ತೊಂದರೆ ಏನೂ ಇಲ್ಲ. ಅದರ ಜೊತೆಗೆ ಅಧಿಕಾರಿಗಳ ಮಟ್ಟದಲ್ಲಿ ಸಾಕಷ್ಟು ತೊಂದರೆಯಿದೆ, ನಾನು ಒಪ್ಪುತ್ತೇನೆ. ಚಿಕ್ಕಬಳ್ಳಾಪುರಕ್ಕೆ ಬಂದಾಗ ಶುದ್ಧ ಕುಡಿಯುವ ನೀರಿನ ವಿಚಾರವಿರಲಿ, sanitation ವಿಚಾರವಿರಲಿ, progress 20% ಕೆಳಗೆ ಇರುತ್ತಿತ್ತು. ಕೋಲಾರ was little better, ನಮ್ಮ ಮುಳಬಾಗಿಲು was in fact to us, the best. ಅಲ್ಲಿ ನಡೆದಂಥ ಚಟುವಟಿಕೆಗಳು ನಮಗೆ ಯಾವುದೇ ರೀತಿಯ ಸಮಾಧಾನವನ್ನು ತಂದಿಲ್ಲ. ನಿಜ, ಆದರೆ, ಬರುವ

ಎರಡು ತಿಂಗಳುಗಳಲ್ಲಿ ಹೆಚ್ಚಿನ ಶ್ರಮಪಟ್ಟು ಈ ಭಾಗದ ಕುಡಿಯುವ ನೀರಿನ ಸಮಸ್ಯೆಗೆ ಏನು ಮಾಡಬಹುದೆನ್ನುವುದಕ್ಕೆ ಒಂದು ಸ್ಪಷ್ಟವಾದ ರಾಜ್ಯದ ನಿಲುವನ್ನು ತಾಳುತ್ತೇವೆ ಎನ್ನುವಂಥ ಭರವಸೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಸಣ್ಣ ನೀರಾವರಿ ಸಚಿವರು ಉತ್ತರ ಹೇಳಿ.

ಶ್ರೀ ಕೆ.ಎಸ್. ಮಂಜುನಾಥಗೌಡ: ಮಾನ್ಯ ಅಧ್ಯಕ್ಷರೆ, RO plant ಬಗ್ಗೆ ಸಚಿವರಿಗೆ ಹೇಳಬೇಕಾಗಿತ್ತು.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ ತಾವು ಅವಕಾಶ ಕೊಟ್ಟರೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು: ಪಾಟೀಲ್‌ರವರೆ, ಜಿಲ್ಲೆಗೆ ಸಂಬಂಧಪಟ್ಟಂಥ ಚರ್ಚೆಗೆ ಉತ್ತರ ಹೇಳುತ್ತಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್: ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಿದರೆ ಇಡೀ ರಾಜ್ಯಕ್ಕೆ ಈ ಸಮಸ್ಯೆ ತಲೆದೋರಿದೆ. ಇದರ ಬಗ್ಗೆ ಹೆಚ್.ಕೆ.ಪಾಟೀಲ್‌ರವರು ಹೇಳಬೇಕಾಗಿದೆ.

ಅಧ್ಯಕ್ಷರು: ಆಯಿತು, ಆಮೇಲೆ ಮಾತನಾಡುವಿರಂತೆ,

ಶ್ರೀ ಕೆ.ಎಸ್. ಮಂಜುನಾಥಗೌಡ: ಮಾನ್ಯ ಅಧ್ಯಕ್ಷರೆ, RO plants ಬಗ್ಗೆ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನಿಮ್ಮಲ್ಲಿ surface water ಚೆನ್ನಾಗಿರುವ ಕಡೆಗೂ ಸಹ same RO plants ವರ್ಷಕ್ಕೆ 8–10 ಕೊಡುತ್ತಿದ್ದೀರಿ, ನಮ್ಮಲ್ಲಿ ವಿಷ, ಫ್ಲೋರೈಡ್ ಕಂಟೆಂಟ್ ಇದೆಯೆಂದು ದೇಶಕ್ಕೇ ಗೊತ್ತಿದೆ. 360ರಲ್ಲಿಯೂ ನಮ್ಮ ಬೋರ್‌ವೆಲ್ ನೀರನ್ನೇ ಕುಡಿಯುತ್ತಿರುವುದು. ವಿಷ ಇರುವುದು ಎಲ್ಲರಿಗೂ ಗೊತ್ತು. ನಮಗೂ ನೀವು 8–10 ವರ್ಷಕ್ಕೆ ಕೊಡುತ್ತಿದ್ದೀರಿ. ಈ ರೀತಿಯಾದರೆ ಎಷ್ಟು ವರ್ಷಕ್ಕೆ ನೀವು ಕುಡಿಯುವ ನೀರನ್ನು ಕೊಡುತ್ತೀರಿ?

ಅಧ್ಯಕ್ಷರು: ಏನು ಬೇಕೆನ್ನುವುದನ್ನು ಹೇಳಿ.

ಶ್ರೀ ಮಂಜುನಾಥಗೌಡ: RO plants ಕೊಡಬೇಕು.

ಅಧ್ಯಕ್ಷರು: ಎಷ್ಟು ಎಂದು ಹೇಳಿ.

ಶ್ರೀ ಕೆ.ಎಸ್. ಮಂಜುನಾಥಗೌಡ: ಎಲ್ಲಾ ಹಳ್ಳಿಗಳಿಗೂ ನಮಗೆ ಬೇಕು. Surface water ಚೆನ್ನಾಗಿರುವ ಕಡೆ same RO plants ಕೊಡುತ್ತಿದ್ದಾರೆ. ವಿಷ ನೀರಿರುವ ಕಡೆ ಕೊಡುತ್ತಿಲ್ಲ. ಇದು ತುಂಬಾ serious ಆಗಿದೆ. ದಯವಿಟ್ಟು ಇದನ್ನು ಗಮನದಲ್ಲಿಟ್ಟುಕೊಳ್ಳಿ.

ಅಧ್ಯಕ್ಷರು: ಆಯಿತು, ಅವರು ಕೇಳುತ್ತಿರುವುದನ್ನು ಮಾಡಿಕೊಡಿ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ಹೆಚ್.ಕೆ.ಪಾಟೀಲ್ ಸಾಹೇಬರು 2 ತಿಂಗಳೊಳಗಡೆ ಪೂರ್ಣವಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನೂ ಬಹಳ ಬೇಗ ಕ್ರಮ ತೆಗೆದುಕೊಳ್ಳಬೇಕು. ನಾನು Yaragola project ಕೇಳಿದೆ, ಸಚಿವರು ಇಲ್ಲೇ ಇದ್ದಾರೆ. ಅದಕ್ಕೆ ಅವರು ಉತ್ತರ ಕೊಡಲಿ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸಮಗ್ರವಾಗಿ ಹೆಚ್.ಕೆ. ಪಾಟೀಲ್ ರವರೊಬ್ಬರಿಂದ ಇದು ಸಾಧ್ಯವಿಲ್ಲ. ಇದಕ್ಕೆ ಅನೇಕ ವಿಷಯಗಳು ಚರ್ಚೆಗೆ ಬರಬೇಕಾಗಿದೆ.

ಅಧ್ಯಕ್ಷರು: ಇಲ್ಲಿ ಬರುವುದಿಲ್ಲ. ಸುಮ್ಮನೆ ಇರಿ.

ಶ್ರೀ ಶಿವರಾಜ್ ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಸವಿಸ್ತಾರವಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಬಗ್ಗೆ ಚರ್ಚೆಯನ್ನು ಮಾಡಿದರು.

ಶ್ರೀ ಪಿಳ್ಳ ಮುನಿಶಾಮಪ್ಪ: ಸಾರ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಸೇರಿಸಿಕೊಳ್ಳಿ.

ಶ್ರೀ ಶಿವರಾಜ್ ಎಸ್. ತಂಗಡಗಿ: ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನೊಳಗೊಂಡ ಎಲ್ಲರೂ ಸವಿಸ್ತಾರವಾಗಿ ಕುಡಿಯುವ ನೀರಿನ ಬಗ್ಗೆ ಹೇಳಿದರು. ಅದರ ಜೊತೆಗೆ ಕೆಲವು ಸದಸ್ಯರು ಸಣ್ಣ ನೀರಾವರಿ ಇಲಾಖೆಯಿಂದಲೂ ಕೆಲವೊಂದು ಕೆರೆಯನ್ನು ತುಂಬಿಸುವುದರ ಬಗ್ಗೆಯೂ ಮಾತನಾಡಿದರು. ಈಗಾಗಲೇ ನಾನು ಕೋಲಾರ ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಸೇರಿ BWSSBಯಿಂದ ಹೊರಗೆ ಹೋಗುವ sewage waterನಿಂದ ನಾವು seconday treatment plantನ್ನು ಮಾಡಬೇಕೆಂದು ಮೊಟ್ಟಮೊದಲಿಗೆ ನಾನು ಮತ್ತು ಕೃಷ್ಣಭೈರೇಗೌಡ ಸಾಹೇಬರು ಚರ್ಚೆ ಮಾಡಿ ಅದಕ್ಕೆ ಮುಖ್ಯಮಂತ್ರಿಯವರ ಜೊತೆಗೂ ಚರ್ಚೆ ಮಾಡಿದ್ದೇವೆ. ನಮ್ಮ ಹಿರಿಯರಾದಂಥ ಶ್ರೀ ರಮೇಶ್‌ಕುಮಾರ್ ಸಾಹೇಬರು ಮತ್ತು ಆ ಭಾಗದಲ್ಲಿ ಬರುವಂಥ ಎಲ್ಲಾ ಶಾಸಕರು ಕುಡಿಯುವ ನೀರಿಗೆ ಅದು ಸೂಕ್ತವಾಗುವುದಿಲ್ಲ. thesauri treatment plant ಮಾಡಿದರೆ ಚೆನ್ನಾಗಿರುತ್ತದೆಂದು, ಅವರೆಲ್ಲರ ಸಲಹೆಯನ್ನು ನಾನು ಪಡೆದು ಈಗಾಗಲೇ thesauri treatment plantನ್ನು ಮಾಡಬೇಕೆಂದು ಈಗಾಗಲೇ DPR ಮಾಡುವುದಕ್ಕೆ ಟೆಂಡರ್‌ನ್ನು ಕರೆದಿದ್ದೇವೆ. ಈಗಾಗಲೇ 18 ಮತ್ತು ಜನವರಿ ತಿಂಗಳೊಳಗೆ last date ಇದೆ. ಪೂರ್ಣ ಪ್ರಮಾಣದ DPR ಬಂದ ಮೇಲೆ ಅದರೊಳಗೆ ಇನ್ನೊಂದು ಸಭೆಯನ್ನು ಎಲ್ಲಾ ಶಾಸಕರಿಗೂ ಮತ್ತು ಕೃಷ್ಣ ಭೈರೇಗೌಡರು ಮತ್ತು ರಮೇಶ್‌ಕುಮಾರ್ ಸಾಹೇಬರು ಇವರೆಲ್ಲರೊಂದಿಗೆ ಒಂದು ಸಭೆಯನ್ನು ಮಾಡಿ, ಆದಷ್ಟು ಬೇಗನೆ DPR ready ಆದ ಮೇಲೆ, ಅನುದಾನದ ಹೊಂದಾಣಿಕೆಯನ್ನು ಮಾಡಿ ಮತ್ತು ಕೆಲವು ಭಾಗದಲ್ಲಿರುವ ಕೆರೆಗಳು ಹೂಳಿನಿಂದ ತುಂಬಿದೆ. ಹೂಳು ತೆಗೆಯುವುದು ಮತ್ತು ಹೆಚ್ಚು ನೀರು ಸಂಗ್ರಹಣೆ ಮಾಡುವುದಕ್ಕೆ ಏನೇನು ಮಾಡಬೇಕಾಗಿದೆ ಎನ್ನುವುದರ ಬಗ್ಗೆ ಅವರೆಲ್ಲರ ಸಲಹೆಯನ್ನು ತೆಗೆದುಕೊಂಡು thesauri treatment plantನ್ನು ಮಾಡಬೇಕೆಂದು DPR ಕರೆದಿದ್ದೇವೆ. ಅದಕ್ಕೆ ಮುಂದಿನ 2015ರ 18ನೇ ತಾರೀಖು ಕಡೆಯ ದಿನಾಂಕವಿದೆ. ಪೂರ್ಣ ಡಿ.ಪಿ.ಆರ್ ಬಂದ ಮೇಲೆ ಅದಕ್ಕೆ ಅನುದಾನ ನೀಡಿ ಪೂರಾ ಕೆರೆಗಳನ್ನು ತುಂಬಿಸಲು ಮೂರೂ ಜಿಲ್ಲೆಗಳಿಗೆ

ಎಷ್ಟು ಸಾಧ್ಯವಾಗುತ್ತದೆಯೋ, BWSSBಯಿಂದ ಹೊರಗೆ ಹೋಗುವಂತಹ sewage water ಇದೆ, ಅದನ್ನು ಕೆರೆ ತುಂಬಿಸುವ ಯೋಜನೆ ಮಾಡುತ್ತೇವೆ. ಕುಡಿಯುವ ನೀರಿಗೆ ಲಭ್ಯವಾಗುವ ರೀತಿಯಲ್ಲಿಯೇ ಅದನ್ನು ಮಾಡುತ್ತೇವೆ. ಈಗ ಸದ್ಯಕ್ಕೆ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಈ ಮೂರು ಜಿಲ್ಲೆಗಳಲ್ಲಿ ಅಂತರ್ಜಲ ಬಹಳಷ್ಟು ಕುಸಿದಿದೆ. ಕುಡಿಯುವ ನೀರು ಇರಬಹುದು, ಅಂತರ್ಜಲ ವಿಚಾರ ಇರಬಹುದು, ಕೆರೆ ಹೂಳೆತ್ತುವುದಕ್ಕೆ ಹೆಚ್ಚು ಒತ್ತು ಕೊಡುವ ಕೆಲಸ ಮಾಡುತ್ತೇವೆ. ಆ ಮೂರು ಜಿಲ್ಲೆಗಳಲ್ಲಿ ಕೆರೆಗಳ ಸಂಖ್ಯೆ ಅಧಿಕವಾಗಿದೆ ಎಂದು ನಮ್ಮ ಗಮನಕ್ಕೆ ಇದೆ. ಡಿ.ಪಿ.ಆರ್ ಆದ ಮೇಲೆ ಟೆಂಡರ್ ಕರೆಯುವ ಕೆಲಸವನ್ನು ಮಾಡುತ್ತೇವೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ರಮೇಶ್‌ಕುಮಾರ್ ರವರು ಪ್ರಸ್ತಾಪ ಮಾಡಿದರು. ಚಲಘಟ್ಟ ವ್ಯಾಲಿ ವಿಷಯವಾಗಿ ಏನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಡಿ.ಪಿ.ಆರ್ ತಯಾರಾಗಿದೆ. ವರ್ತೂರು ಮತ್ತು ಬೆಳ್ಳಂದೂರು ಕೆರೆಗಳು ನನ್ನ ಕ್ಷೇತ್ರದಲ್ಲಿಯೇ ಬರುತ್ತದೆ. ಪ್ರತಿ ಬಾರಿ ಏನಾಗಿದೆ ಎಂದರೆ, ಆ ವಿಷಯಕ್ಕೆ ಸಂಬಂಧಪಟ್ಟಂತೆ ಬಿ.ಬಿ.ಎಂ.ಪಿ ಯಿಂದ ಬಿ.ಡಿ.ಎ ಗೆ ಬಿ.ಡಿ.ಎ ಯಿಂದ ಬಿ.ಬಿ.ಎಂ.ಪಿ ಗೆ ಹೀಗೆ ಓಡಾಡುತ್ತಿದೆ.

ಅಧ್ಯಕ್ಷರು: ಅದು ಗೂಡ್ಸ್‌ನಲ್ಲಿ ಓಡಾಡುತ್ತಿದೆಯೋ ಅಥವಾ ರೈಲಿನಲ್ಲೋ?

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ಅದು ಗೂಡ್ಸೂ ಅಲ್ಲ, ರೈಲೂ ಅಲ್ಲ. ಆ ತರಹ ಓಡಾಡುತ್ತಿದೆ. ಆದುದರಿಂದ ಅದನ್ನು ತಾವು ಕೈಗೆತ್ತುಕೊಂಡು ಮಾಡುವುದಾದರೆ ಮತ್ತೊಂದು ಡಿ.ಪಿ.ಆರ್ ಮಾಡುವ ಅವಶ್ಯಕತೆ ಇಲ್ಲ. Already DPR ready ಆಗಿದೆ. ಇದಕ್ಕೆ ಸಂಬಂಧಪಟ್ಟಂತೆ ನಾವು ಕೇಂದ್ರ ಸರ್ಕಾರವನ್ನೂ approach ಆಗಿದ್ದೇವೆ. ಮಾನ್ಯ ಲೋಕಸಭಾ ಸದಸ್ಯರೂ ಕೂಡಾ ನಗರಾಭಿವೃದ್ಧಿ ಸಚಿವರೊಡನೆ ಮಾಡನಾಡಿದ್ದಾರೆ. ಅವರ

ಸಹಾಯವನ್ನು ತೆಗೆದುಕೊಂಡು Minor Irrigation ನಿಂದ ಮಾಡಿದರೆ ತಕ್ಷಣವೇ ಬಹಳ ಒಳ್ಳೆಯದು ಆಗುತ್ತದೆ. ಇದರಿಂದ ಕೋಲಾರ ಜಿಲ್ಲೆಗೂ ಅನುಕೂಲವಾಗುತ್ತದೆ, ನಮ್ಮ ಕ್ಷೇತ್ರಕ್ಕೂ ಅನುಕೂಲವಾಗುತ್ತದೆ.

ಶ್ರೀ ಕೃಷ್ಣ ಭೈರೇಗೌಡ: ಮಾನ್ಯ ಅಧ್ಯಕ್ಷರೆ, ಚಲ್ಲಘಟ್ಟ ಕಣಿವೆಯಲ್ಲಿ ಎರಡು ಭಾಗವಿದೆ. ಒಂದು BWSSB ಯಿಂದ ಸಂಸ್ಕರಣೆಯಾಗಿ ಹೊರ ಬರುವುದು ಮತ್ತು open flow ಆಗುವಂತಹುದು, ಎರಡೂ components ಇದೆ. ಈಗ ಇವರು ಮಾಡುತ್ತಿರುವುದು treatment plantನಿಂದ ಏನು discharge ಆಗುತ್ತಿದೆ, ಅದನ್ನು ಮುಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ. ಸಾಗಾಣಿಕೆಗೆ ಡಿ.ಪಿ.ಆರ್ ಮಾಡುತ್ತಿದ್ದಾರೆ.

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಸಚಿವರೆ, ಅಂತಹ ಪರಿಸ್ಥಿತಿ ಅಲ್ಲಿಲ್ಲ. ದಯವಿಟ್ಟು ಬನ್ನಿ. ವರ್ತೂರು, ಬೆಳ್ಳಂದೂರು ಕೆರೆ ನೋಡಿ ಬಿಟ್ಟರೆ ಎರಡೂ ಒಂದೇ ರೀತಿ ಇದೆ. ಆ ಹಿನ್ನೆಲೆಯಲ್ಲಿ ನಾನು ಹೇಳುವುದು, ಈಗಾಗಲೇ ಬಿ.ಬಿ.ಎಂ.ಪಿ ಯಲ್ಲಿ ಮತ್ತು ಬಿ.ಡಿ.ಎ ನಲ್ಲಿ ಡಿ.ಪಿ.ಆರ್ ಇದೆ. ಅದನ್ನು BWSSB ಗೆ ಕಳುಹಿಸಬೇಕೆಂದು ತಯಾರಿ ಮಾಡುತ್ತಿದ್ದರು. ದಯವಿಟ್ಟು ಅದನ್ನು ಗಮನಿಸಿ.

ಅಧ್ಯಕ್ಷರು: ಈಗ ನಾನೊಂದು ಸಲಹೆ ಕೊಡುತ್ತೇನೆ ಕೇಳಿ. ಇದು ಆಡಳಿತದಲ್ಲಿರುವ ರೋಗ. ಅದಕ್ಕೆ ನಾನು ಹೇಳುವುದು, ಮಾನ್ಯ ಸಚಿವರು ಮತ್ತು ನೀವೂ ಒಂದೆರಡು ದಿವಸದಲ್ಲಿ ಅವರನ್ನು ಕರೆಸಿಕೊಂಡು ಒಂದು ತೀರ್ಮಾನಕ್ಕೆ ಬೇಗ ಬನ್ನಿ. ಆಮೇಲೆ ಕೆಲವೊಂದಕ್ಕೆ ಬರೆ ಹಾಕಬೇಕಾಗುತ್ತದೆ. ಇದೊಂದು ರೋಗ.

ಶ್ರೀ ಶಿವರಾಜ್ ಎಸ್. ತಂಗಡಗಿ: ಮಾನ್ಯ ಅಧ್ಯಕ್ಷರೆ, ಅವರು ಹೇಳಿದ್ದು ಬೆಳ್ಳಂದೂರು ಕೆರೆ ಸಮೀಪದ ಕೋರಮಂಗಲ ಚಲ್ಲಘಟ್ಟದ ಬಗ್ಗೆ ನಮ್ಮ ಗಮನದಲ್ಲಿದೆ. ಆ ಭಾಗದ ಶಾಸಕರನ್ನು ಕರೆದು ಅವರು ನೀಡುವ ಸಲಹೆಯ ಮೇರೆಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿಳ್ಳ ಮುನಿಶಾಮಪ್ಪ: ಮಾನ್ಯ ಅಧ್ಯಕ್ಷರೆ, ಕಾವೇರಿ ನೀರು Airport ಗೆ ಬರುತ್ತಿದೆ. ದಯಮಾಡಿ ಇನ್ನು 5 ಕಿ.ಮೀ.ನಲ್ಲಿರುವ ದೇವನಹಳ್ಳಿ townಗೆ ಕಾವೇರಿ ನೀರನ್ನು ಬಿಡಬೇಕೆಂದು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಶಿವರಾಜ್ ಎಸ್. ತಂಗಡಗಿ: ಮಾನ್ಯ ಅಧ್ಯಕ್ಷರೆ, ದಯಮಾಡಿ ಎಲ್ಲಾ ಶಾಸಕರಲ್ಲಿ ವಿನಂತಿ ಏನೆಂದರೆ, ನಾವು ಡಿ.ಪಿ.ಆರ್ ತಯಾರು ಮಾಡುತ್ತಿದ್ದೇವೆ. ಎಲ್ಲೆಲ್ಲಿ ಸಾಧ್ಯವಾಗುತ್ತದೆ, ಯಾವ್ಯಾವ ಕೆರೆಗಳಿಗೆ ಅನುಗುಣವಾಗುತ್ತದೆ, ಪೂರಾ ಮೇಲಿರುವುದಕ್ಕೂ ತೆಗೆದುಕೊಂಡು ಹೋಗುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಪಿಳ್ಳ ಮುನಿಶಾಮಪ್ಪ: ಮಾನ್ಯ ಸಚಿವರೆ, ಕಾವೇರಿ ನೀರು Airport ಗೆ ಬರುತ್ತಿರುವುದರಿಂದ ಆ ಕಾವೇರಿ ನೀರನ್ನು ಕುಡಿಯುವ ನೀರಿಗೆ ಕೊಡಿ ಎಂದು ಕೇಳುತ್ತಿದ್ದೇವೆ.

ಶ್ರೀ ಶಿವರಾಜ್ ಎಸ್. ತಂಗಡಗಿ: ಮಾನ್ಯ ಅಧ್ಯಕ್ಷರೆ, ಡಿ.ಪಿ.ಆರ್ ಪೂರ್ಣ ಪ್ರಮಾಣದಲ್ಲಿ ತಯಾರಾಗಲಿ, ಈ ಮೂರು ಜಿಲ್ಲೆಗಳ ಶಾಸಕರನ್ನು ಕರೆದು ಚರ್ಚಿಸಿ, ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: Good. ಆಯಿತು, ಈಗ ಹೆಚ್.ಡಿ.ಕುಮಾರಸ್ವಾಮಿ ರವರು.

ಶ್ರೀ ಪಿಳ್ಳ ಮುನಿಶಾಮಪ್ಪ: ಮಾನ್ಯ ಅಧ್ಯಕ್ಷರೆ, ಇದು ಎಂ.ಬಿ.ಪಾಟೀಲ್ ಸಾಹೇಬರಿಗೆ ಬರುತ್ತದೆ, ಸರ್ ಕಾವೇರಿ ನೀರನ್ನು Airportಗೆ ಕೊಡುತ್ತಿದ್ದೀರಿ, ದಯಮಾಡಿ ದೇವನಹಳ್ಳಿ ಟೌನ್‌ಗೆ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ.ಬಿ. ನಿಂಗಯ್ಯ: ನಮ್ಮ ಮಲೆನಾಡಿನ ಒತ್ತುವರಿ ವಿಚಾರದಲ್ಲಿ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಒತ್ತುವರಿ, ಸಾಗುವಳಿಯದು. ಯಾವಾಗ ಚರ್ಚೆಗೆ ಅವಕಾಶ ಕೊಡುತ್ತೀರಿ?

ಅಧ್ಯಕ್ಷರು: ನಾಳೆ ಮಾಡೋಣ. ಪ್ರತ್ಯೇಕವಾಗಿ ಕೊಡುತ್ತೇನೆ ಸುಮ್ಮನಿರಿ. ಅವಕಾಶ ಕೊಟ್ಟರಾಯಿತಲ್ಲ?

3) ವಿಷಯ : ಮರಳು ಗಣಿಗಾರಿಕೆ ಕಾಯಿದೆ ರಾಜ್ಯದಲ್ಲಿ ಜಾರಿಯಲ್ಲಿದ್ದರೂ ಅಕ್ರಮ ಮರಳು ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ಕೋಟ್ಯಾಂತರ ರೂ.ಗಳ ನಷ್ಟವಾಗುತ್ತಿರುವ ಬಗ್ಗೆ.

***

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ): ಮಾನ್ಯ ಅಧ್ಯಕ್ಷರೆ, ಈಗೇನು ನೀರಿನ ಸಮಸ್ಯೆ ಬಗ್ಗೆ ಇಷ್ಟು ಹೊತ್ತು ಚರ್ಚೆಯಾಗಿದೆ, ಅದರ ಜೊತೆಗೆ ಸಾರ್ವಜನಿಕರಿಗೆ ಮತ್ತೊಂದು ಜ್ವಲಂತ ಸಮಸ್ಯೆ ಎಂದರೆ ಮರಳಿನ ಸಮಸ್ಯೆ. ಇವತ್ತು ಮರಳಿನ ಸಮಸ್ಯೆ ರಾಜ್ಯದಲ್ಲಿ ಕೃತಕವಾಗಿ ಸೃಷ್ಟಿಯಾಗಿದೆಯೋ ಅಥವಾ ಮಾಫಿಯಾಗಳ ಹಿಡಿತಕ್ಕೆ ಒಳಗಾಗಿ ಇಂತಹ ಸಮಸ್ಯೆ ಉದ್ಭವವಾಗಿದೆಯೋ ಎಂಬುದು ಯಕ್ಷ ಪ್ರಶ್ನೆಯಾಗಿದೆ. ಮೊನ್ನೆ ಸದನದಲ್ಲಿ ಕೃಷಿ ಜಮೀನಿನಲ್ಲಿ ಕೃಷಿಯೇತರ ಉದ್ದೇಶಕ್ಕೆ ಅಂದರೆ ಕಲ್ಲು ಗಣಿಗಾರಿಕೆ ಬಿಲ್ ಪಾಸ್ ಮಾಡಿಕೊಂಡರು.

ಅಧ್ಯಕ್ಷರು: ಇದು ಯಾರಿಗೆ ಬರುತ್ತದೆ? ಮುಖ್ಯಮಂತ್ರಿಗಳಿಗೆ ಬರುತ್ತದೆಯೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇದನ್ನು PWD ಯವರಿಗೆ ಕೊಟ್ಟು ಬಿಟ್ಟಿದ್ದಾರೆ.

ಅಧ್ಯಕ್ಷರು: ಹೌದಾ, ಮಹದೇವಪ್ಪನವರಾ? ಅವರನ್ನು ಕರೆಸಿರಿ. ಆಮೇಲೆ ನಾನು ಒಂದು ಹೇಳುತ್ತೇನೆ. ನೀವು ಒಂದು ನಿಮಿಷ ತಡೆಯಿರಿ, ನಿನ್ನೆ 7.30 ಗಂಟೆಯವರೆಗೆ ಸದನ ನಡೆಯಿತು. ನಮ್ಮ ಅಜೆಂಡಾದಲ್ಲಿ ಏನೇನು ವಿಚಾರಗಳಿರುತ್ತವೆಂಬುದು ತಮಗೆಲ್ಲರಿಗೂ ಗೊತ್ತಿರುತ್ತದೆ. ಆದರೆ ಕೆಲವರು ಸಂಬಂಧಪಟ್ಟ ಮಂತ್ರಿಗಳೇ ಇಲ್ಲ. ಮಂತ್ರಿಗಳು ಇಲ್ಲ ಎಂಬ ಕಾರಣಕ್ಕಾಗಿ